ಬಿ. ಆರ್. ಲಕ್ಷ್ಮಣರಾವ್ ಕಾವ್ಯದಲ್ಲಿ ಪ್ರೇಮದ ನೆಲೆಗಳು : ಒಂದು ವಿಶ್ಲೇಷಣೆ

ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು
ಬಸವೇಶ ಎ

ಮಾರ್ಗದರ್ಶಕರು
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಪ್ರಾಧ್ಯಾಪಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೮

ಬಿ. ಆರ್. ಲಕ್ಷ್ಮಣರಾವ್ ಕಾವ್ಯದಲ್ಲಿ ಪ್ರೇಮದ ನೆಲೆಗಳು : ಒಂದು ವಿಶ್ಲೇಷಣೆ

ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಪ್ರಬಂಧ

ಸಂಶೋಧಕರು
ಬಸವೇಶ ಎ

ಮಾರ್ಗದರ್ಶಕರು
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಪ್ರಾಧ್ಯಾಪಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೮

318

ಪ್ರಮಾಣ ಪತ್ರ

ಬಿ. ಆರ್. ಲಕ್ಷ್ಮಣರಾವ್ ಕಾವ್ಯದಲ್ಲಿ ಪ್ರೇಮದ ನೆಲೆಗಳು : ಒಂದು ವಿಶ್ಲೇಷಣೆ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ ೨೦೦೮-೦೯ ನೇ ಶೈಕ್ಷಣಿಕ ಸಾಲಿನಲ್ಲಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಸಂಪ್ರಂಬಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 15-10-08
ಸ್ಥಳ: ವಿದ್ಯಾರಣ್ಯ

A. Basavesh
ಬಸವೇಶ. ಎ
ಸಂಶೋಧಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

[illegible]

[illegible]

[illegible]

318

ದೃಢೀಕರಣ ಪತ್ರ

ಬಿ. ಆರ್. ಲಕ್ಷ್ಮಣರಾವ್ ಕಾವ್ಯದಲ್ಲಿ ಪ್ರೇಮದ ನೆಲೆಗಳು : ಒಂದು ವಿಶ್ಲೇಷಣೆ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಬಸವೇಶ ಎ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 15-10-08
ಸ್ಥಳ: ವಿದ್ಯಾರಣ್ಯ

ಮಲ್ಲೇಪುರಂ ಜಿ. ವೆಂಕಟೇಶ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ಪರಿವಿಡಿ

ಭಾಗ ೧

ಅಧ್ಯಾಯ ೧ : ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ೨ : ಪ್ರೇಮದ ಪರಿಕಲ್ಪನೆ

ಅಧ್ಯಾಯ ೩ : ಆಧುನಿಕ ಕನ್ನಡ ಸಾಹಿತ್ಯ ಮತ್ತು ಪ್ರೇಮ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಬಿ.ಆರ್. ಲಕ್ಷ್ಮಣರಾವ್ ಅವರು ಜೀವನದ ಬಗೆಗೆ ಅದಮ್ಯ ಉತ್ಸಾಹವುಳ್ಳ ಕವಿ. ಅವರ ಕವಿತೆಗಳಲ್ಲಿ ಜೀವನ ಪ್ರೀತಿ ತುಂಬಿ ತುಳುಕುತ್ತದೆ. ಈ ಕಾರಣದಿಂದ ಕವಿ ಲಕ್ಷ್ಮಣರಾವ್ ಅವರು ಕನ್ನಡ ಕಾವ್ಯ ಲೋಕದಲ್ಲಿ ವಿಶಿಷ್ಟರೆಂದು ಎನಿಸುತ್ತಾರೆ. ಹಾಗೂ ಕನ್ನಡ ಸಹೃದಯಿಗರ ಪ್ರೀತಿಗೆ ಪಾತ್ರರಾಗಿದ್ದಾರೆ. ಸಾಹಿತ್ಯದ ಬೇರೆ ಪ್ರಕಾರಕ್ಕೆ ಅವರು ಮನಸ್ಸು ಮಾಡಿದ್ದರೂ ಕಾವ್ಯವೆಂಬುದು ಮಾತ್ರ ಅವರ ಭಾವಕ್ಕೆ ಸಹಜವಾಗಿಯೇ ಒಲಿದು ಬಂದಿದೆ. ಈ ಬಗೆಯ ಕಾವ್ಯ ರಚನೆಯಲ್ಲಿ ಅವರು ಯಶಸ್ವಿಯಾಗಿದ್ದಾರೆ. ಕಾವ್ಯವನ್ನೇ ಅವರು ಸುಖಿಸಿದ್ದಾರೆ. ಅವರ ಕಾವ್ಯದಲ್ಲಿ ಸಮಾಜದ ಗುರಂತಗಳ ಬಗೆಗೆ ವಿಷಾದವಿದೆ, ಕಾಮವಿದೆ, ಮಮತೆಯಿದೆ ಎಲ್ಲಕ್ಕಿಂತ ಮಿಗಿಲಾಗಿ ಜೀವನವನ್ನು ಪ್ರೀತಿಸುವ ಗುಣವಿದೆ. ಈ ಹಿನ್ನೆಲೆಯಲ್ಲಿ ಬಿ.ಆರ್.ಲಕ್ಷ್ಮಣರಾವ್ ಕಾವ್ಯದಲ್ಲಿ ಪ್ರೇಮದ ನೆಲೆಗಳು ಎಂಬ ನಿಬಂಧವನ್ನು ರಚಿಸಲು ಉದ್ದೇಶಿಸಲಾಗಿದೆ. ಈ ನಿಬಂಧದ ಒಟ್ಟು ವಿನ್ಯಾಸ ಹೀಗಿರುತ್ತದೆ.

ಪ್ರಸ್ತುತ ನಿಬಂಧವೂ ಮೂರು ಭಾಗಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಭಾಗದಲ್ಲೂ ಇರುವ ಅಂಶಗಳು, ಅಧ್ಯಯನಗಳು ಈ ಕೆಳಗಿನಂತೆ ಇರುತ್ತವೆ.

ಭಾಗ-೧

ಅಧ್ಯಾಯ ೧ : ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ೨ : ಪ್ರೇಮದ ಪರಿಕಲ್ಪನೆ

ಅಧ್ಯಾಯ ೩ : ಆಧುನಿಕ ಕನ್ನಡ ಸಾಹಿತ್ಯ ಮತ್ತು ಪ್ರೇಮ

ಭಾಗ-೨

ಅಧ್ಯಾಯ ೧ : ಬಿ.ಆರ್. ಲಕ್ಷ್ಮಣರಾವ್ ಕವಿತೆಗಳಲ್ಲಿ ಪ್ರೇಮದ ಆಖ್ಯಾನ

ಅಧ್ಯಾಯ ೨ : ಪ್ರೇಮ ಮೀಮಾಂಸೆ ಮತ್ತು ಸಖಿಸಖಿ ಕಲ್ಪನೆ

ಅಧ್ಯಾಯ ೩ : ಆಯ್ದ ಕವಿತೆಗಳ ಆನ್ವಯಿಕ ವಿಶ್ಲೇಷಣೆ

೧. ವಸ್ತು ಪ್ರಧಾನ

೨. ಕಥನ ಪ್ರಧಾನ

೩. ಭಾವ ಪ್ರಧಾನ

೪.ರಸ ಪ್ರಧಾನ

೫.ನಾಟ್ಯ ಪ್ರಧಾನ

ಭಾಗ-೩

ಉಪ ಸಂಹಾರ

ಅನುಬಂಧಗಳು : ಪ್ರಾಥಮಿಕ ಆಕರ

ಆನುಷಂಗಿಕ ಆಕರ

ಈ ನಿಬಂಧದ ಅಧ್ಯಾಯನಗಳ ವಿವರಗಳು ಹೀಗಿವೆ :

ಭಾಗ ೧

ಅಧ್ಯಾಯ ಒಂದರಲ್ಲಿ, ಬಿ.ಆರ್.ಲಕ್ಷ್ಮಣರಾವ್ ಕಾವ್ಯದಲ್ಲಿನ ಪ್ರೇಮದ ನೆಲೆಗಳನ್ನು ವಿಶ್ಲೇಷಿಸುವುದು ಪ್ರಸ್ತುತ ಅಧ್ಯಯನದ ಮೂಲ ಉದ್ದೇಶವಾಗಿದೆ. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ ಮಾಡಿದಾಗ ಈ ಬಗೆಯ ಪ್ರೇಮದ ನೆಲೆಗಳನ್ನು ಕುರಿತಂತೆ ನಡೆದ ಅಧ್ಯಯನಗಳು ಸಿಗುವುದು ತುಂಬಾ ವಿರಳವೆನಿಸಿದೆ. ಈ ನಿಟ್ಟಿನಲ್ಲಿ ಹೇಳುವುದಾದರೆ ಕಾವ್ಯದಲ್ಲಿ ಪ್ರೇಮದ ಬಳಕೆಯೇ ವಿಶಿಷ್ಟವೆನಿಸುತ್ತದೆ. ಈ ವಿಶಿಷ್ಟತೆಯ ಒಳಹನ್ನು ಹೊಕ್ಕು ನೋಡುತ್ತ ಪ್ರೇಮದ ನೆಲೆಗಳನ್ನು ಗುರುತಿಸುವ ಪ್ರಕ್ರಿಯೆ ಈ ಅಧ್ಯಯನದ ಮೂಲಕ ನಡೆಸಲಾಗಿದೆ. ಬಿ.ಆರ್. ಲಕ್ಷ್ಮಣರಾವ್ ಅವರ ಪ್ರೇಮಕ್ಕೆ ಸಂಬಂಧಿಸಿದಂತೆ ಆಯ್ದ ಕವಿತೆಗಳನ್ನಷ್ಟೇ ಇಲ್ಲಿ ಅಧ್ಯಯನಕ್ಕೆ ಒಳಗು ಮಾಡಲಾಗಿದೆ. ಇದು ಅಧ್ಯಯನದ ವ್ಯಾಪ್ತಿಯಾಗಿದೆ.

ಅಧ್ಯಾಯ ಎರಡರಲ್ಲಿ, ಪ್ರೇಮವೆಂಬುದು ಜೀವರಾಶಿಗಳ ಜೀವಹನಿ. ಕ್ರಮೇಣ ಪ್ರೇಮವು ಕಾವ್ಯದಲ್ಲಿ, ಕಥೆಗಳಲ್ಲಿ, ನಾಟಕಗಳಲ್ಲಿ, ಕಾದಂಬರಿಗಳಲ್ಲಿ ಹೀಗೆ ಸಾಹಿತ್ಯದ ವಿವಿಧ ರೂಪುಗಳಲ್ಲಿ ಸ್ಥಾನ ಪಡೆಯಿತು ಜೊತೆಗೆ ಇದಕ್ಕೆ ಸಂಬಂಧಿಸಿದಂತೆ ವಿಮರ್ಶೆ, ಅಧ್ಯಯನಗಳು ಆರಂಭವಾದವು. ಅಧ್ಯಯನಗಳ ದೃಷ್ಟಿಯಿಂದ ವಿಮರ್ಶಕರು, ಅಧ್ಯಯನಕಾರರು ಪ್ರೇಮವನ್ನು ಕೇವಲ ಒಂದು ಭಾವವನ್ನಾಗಿ ಪರಿಗಣಿಸದೆ ಅದನ್ನು ಅಧ್ಯಯನದ ವಸ್ತುವನ್ನಾಗಿ ನೋಡಲು ಪ್ರಾರಂಭಿಸಿದರು. ಆ ನಂತರದಲ್ಲಷ್ಟೇ ಪ್ರೇಮ ಒಂದು ಪರಿಕಲ್ಪನೆಯಾಗಿ ರೂಪುಗೊಂಡಿತೆಂದು ಹೇಳಬಹುದು. ಪ್ರೇಮದ ನೆಲೆಗಳನ್ನು ಕಂಡುಕೊಳ್ಳಲು ಈ ಭಾಗವನ್ನು ಪೂರ್ವ ಪೀಠಿಕೆಯನ್ನಾಗಿ ನೋಡಲಾಗಿದೆ.

ಅಧ್ಯಾಯ ಮೂರರಲ್ಲಿ, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅದರಲ್ಲೂ ಕಾವ್ಯದಲ್ಲಿ ಹೆಚ್ಚಾಗಿ ಪ್ರೇಮದ

ಚಿತ್ರಿಸುವಿಕೆ ಕಂಡು ಬರುತ್ತದೆ. ಕೆ.ಎಸ್.ನರಸಿಂಹಸ್ವಾಮಿಯವರನ್ನು ಪ್ರೇಮಕವಿ ಎಂದೇ ಕರೆಯಲಾಗಿದೆ. ದಾಂಪತ್ಯ ಪ್ರೇಮದ ಚಿತ್ರಣ ಇವರ ಕಾವ್ಯದಲ್ಲಿ ಕಂಡುಬರುತ್ತದೆ. ಬೇಂದ್ರೆಯವರು ಕೂಡ ಅನನ್ಯ ಪ್ರೇಮಗೀತೆಗಳನ್ನು, ಕವಿತೆಗಳನ್ನು ರಚಿಸಿದ್ದಾರೆ. ಹೀಗೆ, ಕುವೆಂಪು, ಜಿ.ಎಸ್. ಶಿವರುದ್ರಪ್ಪನವರ ನಲ್ಮೆ ಸಾಹಿತ್ಯ ನಮ್ಮ ಗಮನ ಸೆಳೆಯುತ್ತದೆ. ಬಿ.ಆರ್. ಲಕ್ಷ್ಮಣರಾವ್ ಅವರು ಆಧುನಿಕ ಕಾಲದ ಕವಿಗಳ ಸಾಲಿನಲ್ಲಿ ಕಾವ್ಯ ಕೃಷಿ ಮಾಡುತ್ತಿರುವುದರಿಂದ ಸಮಕಾಲೀನ ಕಾಲಘಟ್ಟ ಅಂದರೆ ಆಧುನಿಕ ಕನ್ನಡ ಸಾಹಿತ್ಯದಲ್ಲಿನ ಪ್ರೇಮದ ಎಳೆಗಳನ್ನು ಸೂಕ್ಷ್ಮವಾಗಿ ಗಮನಿಸುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ನಡೆಸಲಾಗಿದೆ.

ಭಾಗ ೨

ಅಧ್ಯಾಯ ಒಂದರಲ್ಲಿ, ಬಿ.ಆರ್. ಲಕ್ಷ್ಮಣರಾವ್ ಅವರ ಪ್ರೇಮ ಕವಿತೆಗಳು ಭಿನ್ನ ನೆಲೆಗಳಿಂದ ರೂಪುತಾಳಿದಂತವುಗಳಾಗಿವೆ. ಅದಕ್ಕೆ ಅವರ ಬದುಕಿನ ಭಿನ್ನ ದಾರಿಯ ವಿಭಿನ್ನ ಅನುಭವಗಳು, ಚಿಂತನೆಗಳು ಕಾರಣವಾಗಿರಬಹುದು. ಅವರ ಮೊದಲ ಕವನ ಸಂಕಲನ 'ಗೋಪಿ ಮತ್ತು ಗಾಂಡಲೀನ' ದ ಪ್ರೇಮ-ಗೀಮ ಕವಿತೆಯಲ್ಲಿ ಅವರು ನೇರವಾಗಿಯೇ ಹೇಳುತ್ತಾರೆ. 'ಇಗೋ ಒಪ್ಪಿಕೊಂಡೆ; ನನ್ನದಲ್ಲ ಶುದ್ಧ ಪ್ರೇಮದ ಹಾದಿ' ಎಂದು ಸಮಕಾಲೀನ ಯುವ ಜನಾಂಗದಲ್ಲಿ ಕಂಡು ಬರುವ ಕಾಮ ಪ್ರೇರಿತ ಪ್ರೇಮದ ಇನ್ನೊಂದು ಮುಖವನ್ನು ಇಲ್ಲಿ ಬಿಚ್ಚಿಟ್ಟಿದ್ದಾರೆ. ಹೀಗೆ, ಪ್ರೀತಿಯ ಇನ್ನೂ ಅನೇಕ ಮುಖಗಳನ್ನು, ನೆಲೆಗಳನ್ನು ಆಧಾರವಾಗಿಟ್ಟುಕೊಂಡು ಒಟ್ಟಾರೆಯಾಗಿ ನೋಡಿದರೆ ಪ್ರೇಮವೇ ನಿರಂತರ, ಅದುವೇ ಸತ್ಯ. ಅದು ಅನಂತ ಎಂಬ ಆಖ್ಯಾನದ ಕಡೆ ಕವಿ ನಡೆಯುವುದನ್ನು ಇಲ್ಲಿ ನೋಡಲಾಗಿದೆ.

ಅಧ್ಯಾಯ ಎರಡರಲ್ಲಿ, ಮೀಮಾಂಸೆ ಪದದ ಮೂಲ ಹಾಗೂ ಅರ್ಥಗಳನ್ನು ನೋಡಲಾಗಿದೆ. ಇಲ್ಲಿ ಪ್ರೇಮ ಮೀಮಾಂಸೆ ಮಾನವನನ್ನು ಹಾಗೂ ಅಸ್ತಿತ್ವವನ್ನು ಕುರಿತ ಮೀಮಾಂಸೆಯ ಹಿನ್ನೆಲೆಯಲ್ಲಿ ಈ ಅಧ್ಯಾಯದ ಬಹುತೇಕ ಭಾಗ ವಿಶ್ಲೇಷಣೆಗೊಳಪಟ್ಟಿದೆ. ಅಸ್ತಿತ್ವವನ್ನು ಹಾಗೂ ಸಖಿಸಖಿ ಕಲ್ಪನೆ ಕುರಿತಂತೆ ಲಕ್ಷ್ಮಣರಾವ್ ಕಾವ್ಯದಲ್ಲಿ ಅಭಿವ್ಯಕ್ತವಾಗಿರುವ ಅಂಶಗಳ ವಿವರಗಳನ್ನು ಈ ಅಧ್ಯಾಯದಲ್ಲಿ ಗಮನಿಸಲಾಗಿದೆ. ಮಾನವನ ಅಸ್ತಿತ್ವಕ್ಕೆ ಈ ಪ್ರೀತಿಯೇ ಹೇಗೆ ಮೂಲಮಂತ್ರವಾಗಿದೆ ಎಂಬುದನ್ನು ಇಲ್ಲಿ ನೋಡಲಾಗಿದೆ.

ಅಧ್ಯಾಯ ಮೂರರಲ್ಲಿ, ಬಿ.ಆರ್. ಲಕ್ಷ್ಮಣರಾವ್ ಕಾವ್ಯದಲ್ಲಿನ ಪ್ರೇಮದ ನೆಲೆಗಳನ್ನು ಗುರುತಿಸಲು ಈ ಅಧ್ಯಯನದಲ್ಲಿ ಆಯ್ದ ಕವಿತೆಗಳ ಆನ್ವಯಿಕ ವಿಶ್ಲೇಷಣೆಯನ್ನು ಮಾಡಲಾಗಿದೆ. ಆಯ್ದ ಕವಿತೆಗಳ ಆನ್ವಯಿಕ ವಿಶ್ಲೇಷಣೆ ಈ ಪ್ರಕಾರವಾಗಿ ನಡೆಸಲಾಗಿದೆ.

೧.ವಸ್ತು ಪ್ರಧಾನ

೨. ಕಥನ ಪ್ರಧಾನ

೩. ಭಾವ ಪ್ರಧಾನ

೪. ರಸ ಪ್ರಧಾನ

೫. ನಾಟ್ಯ ಪ್ರಧಾನ

ಭಾಗ-೩

ಉಪ ಸಂಹಾರ

ಈ ಭಾಗದಲ್ಲಿ ಅಧ್ಯಯನದ ಫಲಿತಗಳನ್ನು ಕುರಿತು ಚರ್ಚಿಸಲಾಗಿದೆ ಮತ್ತು ಅನುಬಂಧಗಳಲ್ಲಿ ಪರಾಮರ್ಶನ ಗ್ರಂಥಗಳ ಸೂಚಿಯನ್ನು ಅಳವಡಿಸಲಾಗಿದೆ.

ಅಧ್ಯಾಯ ಎರಡು

ಪ್ರೇಮದ ಪರಿಕಲ್ಪನೆ

ಅಧ್ಯಾಯ ಎರಡು

ಪ್ರೇಮದ ಪರಿಕಲ್ಪನೆ

ಪ್ರೇಮವೆಂಬುದು ಜೀವರಾಶಿಗಳ ಜೀವಹನಿ. ಹೀಗಾಗಿ, ಪ್ರೇಮದ ನೆಲೆಗಳನ್ನು ಕಂಡುಕೊಳ್ಳಲು ಈ ಅಧ್ಯಯನವನ್ನು ಪೂರ್ವಪೀಠಿಕೆಯನ್ನಾಗಿ ನೋಡಲು ಉದ್ದೇಶಿಸಲಾಗಿದೆ. ಪ್ರೇಮದ ಪರಿಕಲ್ಪನೆಯ ಈ ಅಧ್ಯಾಯದಲ್ಲಿ ಮೊದಲಿಗೆ ಪ್ರೇಮದ ಅರ್ಥ ವಿವೇಚನೆಯನ್ನು ಇಲ್ಲಿ ಮಾಡಲಾಗಿದೆ.

ಕನ್ನಡದಲ್ಲಿರುವ ಪ್ರೇಮ ಎಂಬುದಕ್ಕೆ ಪರ್ಯಾಯವಾಗಿ ಪ್ರೀತಿ, ಒಲವು, ಒಲುಮೆ, ಅನುರಾಗ, ವಾತ್ಸಲ್ಯ, ನಲ್ಮೆ, ಪ್ರೇಮ, ಪ್ರಣಯ, ಮಮತೆ ಎಂದು ಸಂದರ್ಭಾನುಸಾರ ಭಿನ್ನ ಭಿನ್ನ ಅರ್ಥವಂತಿಕೆಯ ವಿಭಿನ್ನ ಪದ ಬಳಕೆಗಳಿರುವುದನ್ನು ನಾವು ನಿಘಂಟುಕೋಶಗಳಿಂದ ತಿಳಿಯಬಹುದಾಗಿದೆ.

ಕನ್ನಡದ 'ಪ್ರೀತಿ' ಅಥವಾ 'ಪ್ರೇಮ'ಕ್ಕೆ ಇಂಗ್ಲೀಷಿನಲ್ಲಿ ಹೆಚ್ಚಾಗಿ 'Love' ಪದದ ಬಳಕೆ ಕಂಡು ಬಂದಿದೆಯಾದರೂ ಕನ್ನಡದಲ್ಲಿರುವಂತೆ ಇಂಗ್ಲೀಷ್‌ನ 'Love' ಪದಕ್ಕೆ Fondness, warm, affection, sexual passion : sweet heart, or object, beloved ಎಂದು ಹೀಗೆ ಅನೇಕ ಪರ್ಯಾಯ ಪದ ಬಳಕೆಗಳಿರುವುದನ್ನು ನಾವು ಕಾಣಬಹುದಾಗಿದೆ. ಪದ ಬಳಕೆಯ ಪರಿಸರದಲ್ಲಿ ಮೇಲ್ನೋಟಕ್ಕೆ ಪ್ರೀತಿ, ಪ್ರೇಮ, ಪ್ರಣಯ ಪದಗಳು ಒಂದೇ ಕುಟುಂಬದ ಕುಡಿಗಳಂತೆ ಗೋಚರಿಸಿದರೂ ಕನ್ನಡದ ಸಂದರ್ಭದ ಅರ್ಥವಿಸ್ತಾರದಲ್ಲಿ ಸ್ವಲ್ಪ ಅಂತರವಿದೆಯೆಂದೇ ಇಲ್ಲಿ ಹೇಳಬೇಕಾಗುತ್ತದೆ.

ಪ್ರೀತಿ ಎಂಬ ಪದದ ಅರ್ಥ ವಿಶಾಲ ವ್ಯಾಪ್ತಿ ಹೊಂದಿದ್ದು ಇದು ಪ್ರೇಮ, ಪ್ರಣಯ, ಅನುರಾಗ, ಒಲುಮೆ ಈ ಬಗೆಯ ಒಲವಿಗೆ ಸಂಬಂಧಿಸಿದ ಎಲ್ಲ ಪದಗಳಿಗೂ 'ಪ್ರೀತಿ' ಎಂಬ ಪದವೇ ತಾಯಿಬೇರಾಗಿದೆ ಎಂದು ಹೇಳುವುದು ಸೂಕ್ತವೆನಿಸುತ್ತದೆ.

ಪತಿ-ಪತ್ನಿಯರ ದಾಂಪತ್ಯ ಪ್ರೇಮಕ್ಕೂ, ನಲ್ಲ-ನಲ್ಲೆಯರ ಪ್ರಣಯಕ್ಕೂ, ತಾಯಿ-ಮಗುವಿನ ನಡುವೆ ಇರುವ ವಾತ್ಸಲ್ಯಕ್ಕೂ, ಒಂದು ವಸ್ತುವಿನ ಮೇಲಿನ ಬಯಕೆಗೂ, ಅಕ್ಷರ ಪ್ರೀತಿಗೂ, ಸಂಗೀತದ ಆರಾಧನೆಗೂ, ಪ್ರಕೃತಿ ಸೌಂದರ್ಯದ ಆರಾಧನೆಗೂ ಸಹಜವಾಗಿ ಇವೆಲ್ಲಕ್ಕೂ ನಮ್ಮ ನಿತ್ಯ ಪರಿಸರದಲ್ಲಿ 'ಪ್ರೀತಿ' ಎಂಬ ಪದ ಬಳಕೆ ಸರ್ವೇ ಸಾಮಾನ್ಯವಾಗಿರುವುದನ್ನು ನಾವು ಮನಗಾಣಬಹುದು. ಈ ಅಂಶಗಳ ಹಿನ್ನೆಲೆಯಲ್ಲಿ ಪ್ರೀತಿಯನ್ನು

ನಾವು ತಾಯಿಬೇರು ಎಂದು ಹೇಳಬಹುದು. ಈ ಬಗೆಯ ಬಳಕೆಯ ಕಾರಣಕ್ಕೆ ನಮ್ಮ ಭಾರತೀಯ ಸಂಸ್ಕೃತಿಯು ಕಾರಣವಾಗಿದೆಯೆನ್ನಬಹುದು. ಆದರೆ ಪಾಶ್ಚಾತ್ಯ ರಾಷ್ಟ್ರಗಳ ಸಮಾಜದಲ್ಲಿ ಪ್ರೀತಿ ಅಥವಾ ಪ್ರೇಮ ಎಂಬುದು ದೈಹಿಕ ವಾಂಛೆಯ, ಪ್ರಣಯದ ಸಂಕೇತವಾಗಿಯೇ ಹೆಚ್ಚು ಬಳಕೆಯಲ್ಲಿದೆ ಎಂದು ಹೇಳಬಹುದು. ಈ ಬಗೆಯ ಬಳಕೆಗೆ ಮಾನವ ಸಂಬಂಧಗಳಿಗೆ ಹೆಚ್ಚು ಬೆಲೆ ಕೊಡದಿರುವ ಹಾಗೂ ಎಲ್ಲವನ್ನೂ ಕೊಡುಕೊಳ್ಳುವಿಕೆಯ ನೆಲೆಯಲ್ಲಿ ನೋಡುವ ಬದುಕಿನ ಕ್ರಮಗಳೇ ಇದಕ್ಕೆ ಕಾರಣವಾಗಿವೆ ಎಂದು ತೋರುತ್ತದೆ.

ಈ ನಿಟ್ಟಿನಲ್ಲಿ ಪಾಶ್ಚಾತ್ಯ ಹಾಗೂ ಭಾರತೀಯ ಸಂಸ್ಕೃತಿಯ ಭಿನ್ನತೆಯ ಹಿನ್ನೆಲೆಯಲ್ಲಿ ಪ್ರೇಮದ ಪದ ಬಳಕೆಯು ಅರ್ಥ ವ್ಯತ್ಯಾಸ ಪಡೆಯುವ ಸಾಧ್ಯತೆಗಳು ಹೆಚ್ಚು ಇವೆ. ಪ್ರಖ್ಯಾತ ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್‌ನು ಸಹ ಪ್ರೇಮವನ್ನು ದೈಹಿಕ ನೆಲೆಯಲ್ಲಿಯೇ ವ್ಯಾಖ್ಯಾನಿಸುತ್ತಾನೆ. ಆದರೆ ಎಪ್ಪತ್ತರ ದಶಕದಿಂದಲೂ ತಮ್ಮ ಸಮಾಜನಿಷ್ಠ ಮಾನವತಾವಾದೀ ವಿಶ್ಲೇಷಣೆಗಳಿಂದ ನಮ್ಮನ್ನು ತಮ್ಮತ್ತ ಸೆಳೆದ ಈ ಶತಮಾನದ ಧೀಮಂತ ಚಿಂತಕರಾದ ಜರ್ಮನಿಯ ಎರಿಕ್ ಫ್ರಾಂ ಅವರು ಫ್ರಾಯ್ಡ್‌ನ ಈ ಚಿಂತನೆಯನ್ನು ವಿಮರ್ಶಿಸಿದ್ದಾರೆ. ಹಾಗೂ ಫ್ರಾಯ್ಡ್‌ನ 'ದೈಹಿಕ ತೃಪ್ತಿ'ಯ ವ್ಯಾಖ್ಯಾನವನ್ನು ಮನುಷ್ಯನ ಜೈವಿಕ ಮತ್ತು ಅಸ್ತಿತ್ವದ ಎತ್ತರಕ್ಕೆ ಒಯ್ಯಬೇಕಾಗಿದೆ ಎಂಬುದನ್ನು ಸಾರಿದ್ದಾರೆ. ಮಾನವೀಯ ಸಂಬಂಧಗಳ ಕೊನೆಯಿಲ್ಲದ ಹುಡುಕಾಟದ ಬಗೆಗೆ ತಮ್ಮದೇ ಆದ ಮನೋವಿಶ್ಲೇಷಣಾತ್ಮಕ, ಸಮಾಜಶಾಸ್ತ್ರೀಯ ಪರಿಕಲ್ಪನೆಗಳ ಮೂಲಕ ಫ್ರಾಂ 'ಪ್ರೀತಿಯು ಒಂದು ಕಲೆ' ಎಂದು ನಂಬಿದವರಾಗಿದ್ದಾರೆ. ಈ ತತ್ವವನ್ನು ಆಧರಿಸಿಯೇ ಅವರು ತಮ್ಮ 'ಆರ್ಟ್ ಆಫ್ ಲವಿಂಗ್' ಕೃತಿಯನ್ನು ರಚಿಸಿದ್ದಾರೆ.

ಈ ಕೆಲವು ಸಂಗತಿಗಳನ್ನು ಹಿನ್ನೆಲೆಯಾಗಿ ಇಟ್ಟುಕೊಂಡು 'ಪ್ರೇಮ' ಎಂಬ ಪದ ಬಳಕೆಯ ಸಂದರ್ಭಗಳನ್ನು ಗಮನಿಸಿದರೆ ಇದು ನಿರ್ದಿಷ್ಟವಾಗಿ ಹರೆಯಕ್ಕೆ ಕಾಲಿಟ್ಟ ಹುಡುಗ ಹುಡುಗಿಯರ ಅಥವಾ ನಲ್ಲ-ನಲ್ಲೆಯರ ವಯಸ್ಕರ ಪ್ರೀತಿಗೆ ಸಂಬಂಧಿಸಿದ್ದುದಾಗಿದೆ ಎಂದು ತಿಳಿಯಬಹುದು. ಈ ಪ್ರೇಮ ಪ್ರಸಂಗದಲ್ಲಿ ಪ್ರೀತಿಸಲ್ಪಟ್ಟವರು ಮತ್ತು ಪ್ರೀತಿಸುವವರು ಪರಸ್ಪರ ಕಷ್ಟಸುಖಗಳಲ್ಲಿ ಭಾಗಿಯಾಗಬೇಕೆಂಬ ಜವಾಬ್ದಾರಿಯುತ ಪ್ರೀತಿಯ ಸಾಮಾನ್ಯ ತಿಳುವಳಿಕೆಯು ಚಾಲ್ತಿಯಲ್ಲಿದೆ. ಅಗಲುವಿಕೆಯೇ ಇಲ್ಲಿ ವಿರಹವೆನಿಸುತ್ತದೆ. ಈ ಬಗೆಯ ವಿರಹದಲ್ಲಿ ನೋವು ಅಂದರೆ ಕಾಯುವಿಕೆಯ ನೋವಿನ ಜೊತೆ ಜೊತೆಗೆ ಮಧುರ ನೆನಪುಗಳನ್ನು ಮರುಕಳಿಸುವುದರೊಂದಿಗೆ ನಲಿವನ್ನು ಪಡೆಯುತ್ತಾರೆ. ಅಂದರೆ ನೋವಿನಲ್ಲೂ ಇರುವ ಸುಖದ ಮಧುರ ಯಾತನೆಯನ್ನು ಪ್ರೇಮಿಗಳಿಬ್ಬರೂ ಅನುಭವಿಸುತ್ತಾರೆ. ಆದರೆ, ಪ್ರಣಯದಲ್ಲಿ ಪ್ರೀತಿಸುವವರು ಎನ್ನುವುದಕ್ಕಿಂತಲೂ ಕಾಮಕೇಳಿಗರು ಹೆಚ್ಚು ಭಾಗವಹಿಸುತ್ತಾರೆ. ಪ್ರೇಮಿಗಳಿಗಿರುವಂತೆ ಕಷ್ಟ-ಸುಖಗಳಲ್ಲಿ ಸಮಾನ ಪಾಲುದಾರರಾಗಿರಬೇಕೆಂಬ ಭಾವ ಬಂಧನವಾಗಲಿ, ಒತ್ತಡವಾಗಲೀ ಇಲ್ಲಿ ಕಾಣಲು ಸಾಧ್ಯವಿಲ್ಲ. ಕಾರಣ ಅವರು (ಪ್ರಣಯಿಗಳು) ಸುಖವನ್ನಷ್ಟೇ ಅರಸುವ ಸ್ವಾರ್ಥಿಗಳಾಗಿರುತ್ತಾರೆ. ಈ ಬಗೆಯ ಸ್ವಾರ್ಥವನ್ನು ಹೆಚ್ಚಾಗಿ ಪ್ರೇಮಿಗಳಲ್ಲಿ ಕಾಣಲು ಸಾಧ್ಯವಿಲ್ಲ. ಪ್ರಣಯ ಪ್ರಸಂಗದಲ್ಲಿ ವಿರಹ ಉಂಟಾದರೆ ಅದರ ನೆನಪುಗಳು ಕಹಿ ಅನುಭವವನ್ನಷ್ಟೇ ಉಂಟು ಮಾಡುವ ಸಾಧ್ಯತೆಗಳೇ ಹೆಚ್ಚು. ಕಾರಣ ಪ್ರಣಯದ ಕೇಂದ್ರಬಿಂದುವಾದ ಈ ದೇಹ ಹೇಗೆ ಕ್ಷಣಿಕವೋ ಹಾಗೆಯೇ ಇದರ ಸುಖವು ಸಹ ಅಲ್ಪವಾದದ್ದಾಗಿದೆ.

ಆಧುನಿಕತೆಯ ಈ ಯಾಂತ್ರಿಕ ಜೀವನದ ವಿಷಮ ಸ್ಥಿತಿಯ ಘಳಿಗೆಗಳಲ್ಲಿ ಪ್ರೇಮವು ಸಹ ಕೇವಲ ದೈಹಿಕ ತೃಪ್ತಿಯ ಸಾಧನವಾಗಿ ಬಳಕೆಯಾಗುತ್ತಿರುವುದು ಒಂದು ದುರಂತವೇ ಸರಿ! ಹೀಗೆ ಪ್ರೀತಿ-ಪ್ರೇಮ-ಪ್ರಣಯ ಈ ಮೂರು ಪದಗಳ ಮೂಲಭೂತ ಸ್ವರೂಪವನ್ನು ಈ ಅಧ್ಯಯನದಲ್ಲಿ ಸೂಕ್ಷ್ಮವಾಗಿ ಗಮನಿಸಲಾಗಿದೆ. ಪ್ರೇಮ ಎಂಬುದನ್ನು ನಾವು ಏನನ್ನಾಗಿ ಅಥವಾ ಯಾವುದರ ಪ್ರತೀಕವಾಗಿ, ಯಾವ ಭಾಗವಾಗಿ ಪರಿಭಾವಿಸುತ್ತಿದ್ದೇವೆಂಬ ದಾರಿಯಲ್ಲಿ ಈ 'ಪ್ರೇಮ'ದ ಪರಿಕಲ್ಪನೆಯ ಅಧ್ಯಾಯವು ಸಾಗುತ್ತದೆನ್ನಬಹುದು.

ಪ್ರೇಮದ ವ್ಯಾಖ್ಯಾನಗಳು :

ಪ್ರೇಮಕ್ಕೆ ದೇವರ ಬಲವಿದೆ, ಅಭಯದ ಆಶಯವಿದೆ - ಅದು ಒಂದು ಮಹತ್ತರವಾದ ತಪಸ್ಸು

– ಕುವೆಂಪು[೧]

ನಮ್ಮೆಲ್ಲಾ ಸಮಸ್ಯೆಗಳನ್ನು ನೀಗಿಸಿಬಿಡುವ ಏಕೈಕ ವಸ್ತು ಪ್ರೀತಿ

– ಜೆ. ಕೆ.[೨]

ಒಲವು ಅಥವಾ ಪ್ರೀತಿಯು ಒಂದು ದೃಷ್ಟಿಕೋನ ಹಾಗೂ ತೀವ್ರತಮವಾದ ಕ್ರಿಯಾಶೀಲ ಚಟುವಟಿಕೆ

– ಎರಿಕ್ ಫ್ರಾಂ[೩]

ದೀಪದಂತೆ ಬೆಳಗುವ, ಬೆಂಕಿಯಂತೆ ಸುಡುವ ಪ್ರೀತಿಯು ಒಂದು ಮಾಯೆ

– ನಾಗತಿಹಳ್ಳಿ ಚಂದ್ರಶೇಖರ[೪]

ಅಪ್ರಸನ್ನರನ್ನು ಸುಪ್ರಸನ್ನರನ್ನಾಗಿಸುವುದು; ಅ ಸುಖಿಗಳನ್ನು ಸುಖಿಗಳನ್ನಾಗಿಸುವುದು ಪ್ರೇಮ; ಅವಿಶ್ವಾಸಿಗಳನ್ನು ವಿಶ್ವಾಸಿಗಳನ್ನಾಗಿಸುವುದು ಪ್ರೇಮ

– ಮಾಸ್ತಿ ವೆಂಕಟೇಶ ಅಯ್ಯಂಗಾರ್[೫]

ವಿಷಮ ವಿಶ್ವದಲ್ಲಿಯೂ ಸಮತೆಯನ್ನು ಕೊಡಬಲ್ಲ ಏಕೈಕ ಶಕ್ತಿ ಪ್ರೇಮ

– ವಿನಾಯಕ ಕೃಷ್ಣ ಗೋಕಾಕ[೬]

We are all born for love

– ಬೆಂಜಮಿನ್ ಡಿಸ್ರೇಲಿ[೭]

Love is blind

– ಛಾಸರ್[೮]

Love all, trust a few do wrong to none

– ಷೇಕ್ಸಪೀಯರ್[೯]

Love is a greater law into itself

– ಎಸ್. ಬಿ. ಅನ್‌ಸಿಯಸ್ ಮ್ಯಾನ್‌ಲಿಯಸ್[೧೦]

ಜಗತ್ತಿನಲ್ಲಿ ರೊಟ್ಟಿಗೆ ಹಸಿದವರಿಗಿಂತ ಪ್ರೀತಿಗೆ ಹಸಿದವರು ಹೆಚ್ಚು

– ಸುಭಾಷಿತ[೧೧]

ಒಂದು ರೀತಿಯಲ್ಲಿ ಪ್ರೀತಿಯೆ ನೀತಿ, 'ಪ್ರೀತಿ ಯೋಗ' ಎಲ್ಲ ಯೋಗಗಳಿಗಿಂತ ದೊಡ್ಡದು

– ಸಿ.ಪಿ.ಕೆ.[೧೨]

ಪ್ರೀತಿ ಪ್ರೇಮಗಳು ಭಾವನಾ ಲೋಕವನ್ನು ಶುದ್ಧಗೊಳಿಸುವ ಶಕ್ತಿದಾಯಕಗಳು

– ಮಲ್ಲಿಕಾ ಘಂಟಿ[೧೩]

ಪರಿಶುದ್ಧವಾದ ಪ್ರೀತಿ ಎಲ್ಲ ಚಿಂತನೆಯನ್ನು ನೀಗಿಸುತ್ತದೆ

– ಮೋ. ಕ. ಗಾಂಧೀ[೧೪]

ಆತ್ಮಗಳಂತೆ ಪ್ರೀತಿಯೂ ಮರಣರಹಿತವಾದುದು. ಪರಮಾತ್ಮನೆಡೆಗೆ
ನಮ್ಮನ್ನು ಕರೆದೊಯ್ಯುವ ಸೋಪಾನವೇ ಪ್ರೀತಿ

– ವಿ. ಕೃ. ಗೋಕಾಕ[೧೫]

ನಾವು ಗಳಿಸಬಹುದಾದ ಬೇರೆ ಯಾವ ಸಮಾಧಾನವೂ ಪ್ರೀತಿಗೆ ಸರಿಸಮಾನವಾದುದಿಲ್ಲ

– ಶಿವರಾಮ ಕಾರಂತ[೧೬]

ಪ್ರೀತಿಯ ನಗು ಜಗವನ್ನೇ ಒಲಿಸಬಲ್ಲದು

– ಸುಭಾಷಿತ[೧೭]

ಪರಿಶುದ್ಧ ಪ್ರೀತಿ ಮನುಷ್ಯನಲ್ಲಿ ವ್ಯಕ್ತವಾಗಬಹುದಾದ ಅತಿ ಶ್ರೇಷ್ಠ ಹಾಗೂ ಉದಾತ್ತ ಅಭಿವ್ಯಕ್ತಿ

– ಸ್ವಾಮಿ ಜಗದಾತ್ಮಾನಂದ[೧೮]

ಅಧ್ಯಯನದ ವ್ಯಾಪ್ತಿಯ ದೃಷ್ಟಿಯಿಂದ ಕೆಲವು ಚಿಂತಕರ ಪ್ರೇಮದ ವ್ಯಾಖ್ಯಾನಗಳನ್ನಷ್ಟೇ ಇಲ್ಲಿ ಬಳಸಿಕೊಳ್ಳಲಾಗಿದೆ. ಇಲ್ಲಿನ ಬಹುಪಾಲು ವ್ಯಾಖ್ಯಾನಗಳನ್ನುಗಮನಿಸಿದರೆ ಪ್ರೇಮವು ಮಾನವನನ್ನು ಅಲ್ಪದಿಂದ ಅನಂತದೆಡೆಗೆ, ಅಜ್ಞಾನದಿಂದ ಜ್ಞಾನದೆಡೆಗೆ, ಅಶಾಂತಿಯಿಂದ ಶಾಂತಿಯೆಡೆಗೆ ಕರೆದೊಯ್ಯುವ ಜ್ಯೋತಿಯಾಗಿದೆ ಎಂದೇ ಹೇಳಬಹುದು. ಕೈ ಚಾಚಿದರೆ ಎಟುಕದ, ಅಕ್ಷರಗಳಿಗೆ ನಿಲುಕದ ಈ ಪ್ರೀತಿಯ ಭಾವವು ಒಮ್ಮೊಮ್ಮೆ 'ಮಾಯೆ' ಅಂತೆನ್ನಿಸಲೂಬಹುದು.

ಪ್ರೇಮವೆಂಬುದು ಭಾವವಾದರೂ ಜಗವೆಲ್ಲಾ ಈ ಪ್ರೀತಿಯ ಮಹಾನದಿಯಲ್ಲೇ ಮುಳುಗಿ ಹೋಗಿದೆ. ಪ್ರೀತಿಯಾಚೆಗೆ ಬದುಕಿಲ್ಲ ಆದರೆ ಬದುಕಿನಾಚೆಗೂ ಪ್ರೀತಿಯಿದೆ. ಇದು ಪ್ರೀತಿಯ ವ್ಯಾಪಕತೆಗಿರುವ ನಿದರ್ಶನ. ಪ್ರೀತಿಯಿಲ್ಲದ ಬದುಕನ್ನು ನಾವು ಊಹಿಸಿಕೊಳ್ಳುವುದು ತುಂಬಾ ಕಷ್ಟ ಹಾಗೂ ಅದು ಅತ್ಯಂತ ದಾರುಣವೂ, ದುರ್ಭರವೂ ಆದದ್ದಾಗಿರುತ್ತದೆ. ಒಲವೆಂಬುದು ಗೆಲುವಿನ ಸಂಕೇತ. ಅದು ನಲಿವಿನ ಪ್ರತೀಕ. ದ್ವೇಷದಿಂದ ಗೆಲ್ಲಲಾಗದ್ದನ್ನು ಪ್ರೀತಿಯಿಂದ ಗೆಲ್ಲಬಹುದು. ಗಾಂಧೀಜಿಯವರು ನಮ್ಮ ದೇಶಕ್ಕೆ ತಂದುಕೊಟ್ಟ ಸ್ವಾತಂತ್ರ್ಯವೇ ಇದಕ್ಕೆ ಸಾಕ್ಷಿ! ಗಾಂದೀಜಿಯವರ ಅಹಿಂಸಾ ಮಾರ್ಗ ಬ್ರಿಟಿಷರ ಬಂದೂಕಿನ ಗುಂಡುಗಳನ್ನು ಸುಟ್ಟು ಬೂದಿ ಮಾಡಿತು. ಅವರ ಕೆಚ್ಚೆದೆಯನ್ನು ಬೆಚ್ಚಿ ಬೀಳಿಸಿತು. ಅಹಿಂಸಾ ಮಾರ್ಗ ಎಂಬುದೂ ಪ್ರೀತಿಯ ಗರ್ಭದಿಂದಲೇ ಉದಿಸಿದ್ದುದಾಗಿದೆ.

ಸೃಷ್ಟಿಯಲ್ಲಿ ಎಲ್ಲದಕ್ಕೂ ಒಂದು ಅಂತ್ಯವಿರಬಹುದು. ಆದರೆ ಅದರ ಪುನರ್ಹುಟ್ಟು ಎನ್ನುವುದಿದ್ದರೆ ಅದು ಕೇವಲ ಪ್ರೀತಿಯಿಂದ ಮಾತ್ರ ಸಾಧ್ಯ. ಸೃಜನಶೀಲನಾಗಿರದ, ಕ್ರಿಯಾಶೀಲನಾಗಿರದ ವ್ಯಕ್ತಿ ದಿನ ದಿನವೂ

ಸಾಯುತ್ತಾನೆ. ಮನುಷ್ಯನ ಜೀವಂತಿಕೆಗೆ ಕಾರಣ ಅವನ ನಿರಂತರ ಚಿಂತನೆ, ಸಾಧನೆ, ಕಾರ್ಯತತ್ಪರತೆ, ಸಮಯ ತತ್ಪರತೆ ಇವು ಅವನ ಅಸ್ತಿತ್ವಕ್ಕೆ ಬೆಲೆ ತಂದುಕೊಟ್ಟಿವೆ. ಅಸ್ತಿತ್ವಕ್ಕೆ ಬೆಲೆ ತಂದು ಕೊಟ್ಟ ಈ ಬಗೆಯ ಕ್ರಿಯಾಶೀಲತೆಯ, ಸೃಜನಶೀಲತೆಯ ಮೂಲ ಸತ್ವ ಇರುವುದು ಈ ಪ್ರೀತಿಯಲ್ಲಿಯೇ ಎಂದು ಹೇಳಬಹುದು. ಸೃಜನಶೀಲತೆಯೇ ಈ ಪ್ರೀತಿ ಎಂದರೆ ತಪ್ಪಾಗಲಿಕ್ಕಿಲ್ಲ. ಪ್ರೀತಿಯ ಕಣ್ಣಿಗೆ ಎಲ್ಲವೂ ಹೊಸದು, ನಿತ್ಯನೂತನ. ನಲ್ಲ-ನಲ್ಲೆಯರ ಪ್ರೇಮದಂತೆ, ಅದು ಹರಿಯುವ ಝುರಿಯಂತೆ ಸದಾ ಶುದ್ಧ, ಸುಂದರ, ಆವರ್ಣನೀಯ, ಅನಿರ್ವಚನೀಯ!.

ಪ್ರೇಮವು ಮಾನವ ನಾಗರೀಕತೆಯ ವಿಕಾಸದ ಮುಕುಟಮಣಿಯಾಗಿದೆ. ಕಾರಣ ನಾಗರೀಕತೆಯ ಹಿಂದೆ ಮಾನವ ಜನಾಂಗ ಕೂಡಿ ಬಾಳಿದ ಕಥೆಯಿದೆ. ಕಾದಾಡಿದ ಪ್ರಸಂಗಗಳಿದ್ದರೂ ಸಹ ನಾಗರೀಕತೆಯ ವಿಕಾಸ ಸಾಧ್ಯವಾದದ್ದೂ ಕೂಡಿ ಬಾಳುವ ಕಲೆಗೆ ಪ್ರೇರಣೆಯಾದ ಈ ಪ್ರೇಮದಿಂದಲೇ ಎಂಬುದು ಗಮನಾರ್ಹ ಸಂಗತಿಯಾಗಿದೆ.

ಇಂದು ಮಾನವ ಬದುಕು ತನ್ನ ಮೂಲ ನೆಲೆಗಳಿಂದ ಬಹುದೂರ ಸಾಗಿದೆ. ನಡುವೆ ಅನೇಕ ಸ್ಥಿತ್ಯಂತರಗಳು ಸಂಭವಿಸಿವೆ. ಸ್ಥಿತ್ಯಂತರಗಳಿಂದ ಕ್ರಮೇಣ ಮಾನವ ಜೀವನದ ಅವಿಭಾಜ್ಯ ಅಂಗವಾದ ಕಲೆಯ ವಿಕಾಸವೂ ಆಯಿತು. ಕಲೆಯ ಒಂದು ಪ್ರಕಾರವಾದ ಸಾಹಿತ್ಯ ಕೃಷಿಯ ಕಾರ್ಯವು ಅಂದಿನಿಂದ ಇಂದಿನವರೆಗೂ ನಿರಂತರವಾಗಿಯೇ ಸಾಗಿದೆ (ಅಲ್ಲಲ್ಲಿ ಸ್ವಲ್ಪ ಕಾಲ ಸ್ಥಗಿತಗೊಂಡಿರಬಹುದು). ಅದರ ನಿರಂತರತೆಯಿಂದ ಅದಕ್ಕೀಗ ಎಲ್ಲಿಲ್ಲದ ಮನ್ನಣೆ ದೊರೆತಿದೆ. ತನ್ನದೇ ಆದ ಓದುಗ ವಲಯವನ್ನು ಅದು ತಳುಕು ಹಾಕಿಕೊಂಡಿದೆ. ಈ ಪ್ರಕ್ರಿಯೆಯಲ್ಲಿ ಸಾಹಿತಿಯು ತನ್ನ ಸಾಹಿತ್ಯದ ಅಭಿವ್ಯಕ್ತಿಯಲ್ಲಿ ತನ್ನ ಜನಾಂಗ (ಮಾನವ ಜನಾಂಗ) ಜೀವಂತಿಕೆಯ ಮೂಲ ಸೆಲೆಯಾದ 'ಪ್ರೇಮ'ವನ್ನು ಬರಹದಲ್ಲಿ ಚಿತ್ರಿಸದೊಡಗಿದ. ಸಾಹಿತ್ಯ ಸೃಷ್ಟಿ ಕಾರ್ಯದ ಆರಂಭದವರೆಗೂ ಕೇವಲ ಭಾವವಾಗಿದ್ದ ಪ್ರೀತಿಯು ತದನಂತರದಲ್ಲಿ ಅದು ಅಕ್ಷರವಾಗಿಯೂ ರೂಪುಗೊಂಡಿತು. ಪ್ರೀತಿಯ ಕುರಿತು ಎಲ್ಲವನ್ನೂ ಬಾಯಿ ಮಾತಿನಲ್ಲಿ ಹೇಳಲು ವಿಫಲನಾದವನು ಅಕ್ಷರಗಳ ಸಾನಿಧ್ಯಕ್ಕೆ ಬಂದನು. ಅಲ್ಲಿಂದ ಅವನು ನಿರಾಳ. ಪ್ರೇಮ ಮಾತ್ರ ಅಗೆದಷ್ಟು ಆಳ, ಆಳ, ಒಡಲಾಳ!.

ಕಾಲಾಂತರದಲ್ಲಿ ಸಾಹಿತ್ಯವು ಅನೇಕ ಪ್ರಕಾರಗಳಾಗಿ ಕವಲೊಡೆಯಿತು. ಸಾಹಿತ್ಯ ಎಷ್ಟು ಕವಲುಗಳಾದರೂ ಅಲ್ಲಿ ಬಹುಪಾಲು ಹರಿವುದು (ಜ್ಞಾನವಾಹಿನಿಗಿಂತ) ಪ್ರೇಮವಾಹಿನಿಯೇ ಎಂಬುದನ್ನು ನಾವು ಮರೆಯುವಂತಿಲ್ಲ. ಹಾಗೆ ನೋಡಿದರೆ ತನ್ನನ್ನು ತಾನು ಪ್ರೀತಿಸಿದಾಗಲೇ ತನ್ನೊಳಗಿನ ಅರಿವು ಕೂಡ ಎಚ್ಚರವಾಗುವುದು. ಹೀಗೆ ಸಾಹಿತ್ಯದಲ್ಲಿ ಪ್ರೇಮ ಹಾಸುಹೊಕ್ಕಾದ ಬಳಿಕ ಅಧ್ಯಯನಕಾರರು, ಚಿಂತಕರು, ಸಂಶೋಧಕರು, ವಿದ್ವಾಂಸರು, ವಿಮರ್ಶಕರು ಪ್ರೇಮವನ್ನು ಅಧ್ಯಯನದ ವಸ್ತುವನ್ನಾಗಿ ಸ್ವೀಕರಿಸಿ ಅದರ ಆಳ ಅಗಲಗಳನ್ನು ಅರಿಯುವ ಕೆಲಸ ಮಾಡಿದ್ದಾರೆನ್ನಬಹುದು. ನಂತರದಲ್ಲಿ ಪ್ರೇಮ ಪರಿಕಲ್ಪನೆಯಾಗಿ ರೂಪುತಾಳಿತೆಂದು ಹೇಳಬಹುದಾಗಿದೆ.

ಟಿಪ್ಪಣಿ

೧. ಪ್ರೀತಿ ಪ್ರೇಮ ಕಾಮ ಸೂಕ್ತಿ ಸಂಗ್ರಹ, ಟಿ.ವಿ. ವೆಂಕಟರಮಣಯ್ಯ ಪುಟ. ೬೯.

೨. ಪ್ರೀತಿಸುವುದೆಂದರೆ..... ಅನು ಕೆ.ವಿ. ನಾರಾಯಣ, ಎಚ್.ಎಸ್. ರಾಘವೇಂದ್ರ ರಾವ್, ಪುಟ ೨.

೩. ಅದೇ.

೪. ನನ್ನ ಪ್ರೀತಿಯ ಹುಡುಗಿಗೆ, ನಾಗತಿಹಳ್ಳಿ ಚಂದ್ರಶೇಖರ್, ಪುಟ. ೧

೫. ಕನ್ನಡ ನವೋದಯ ಕಾವ್ಯ, ದೊಡ್ಡರಂಗೇಗೌಡ, ಪುಟ.೪೩೪.

೬. ಅದೇ.

೭. ಅದೇ.

೮. ಅದೇ.

೯. ಅದೇ.

೧೦. ಅದೇ.

೧೧. ಪ್ರೀತಿ ಪ್ರೇಮ ಕಾಮ ಸೂಕ್ತಿ ಸಂಗ್ರಹ, ಟಿ.ವಿ. ವೆಂಕಟರಮಣಯ್ಯ ಪುಟ. ೧

೧೨. ಅದೇ, ಪುಟ. ೩.

೧೩. ಅದೇ, ಪುಟ. ೫

೧೪. ಅದೇ, ಪುಟ ೮

೧೫. ಅದೇ.

೧೬. ಅದೇ, ಪುಟ ೯

೧೭. ಅದೇ, ಪುಟ ೧೬

೧೮. ಅದೇ, ಪುಟ ೧೯

ಅಧ್ಯಾಯ ಮೂರು

ಆಧುನಿಕ ಕನ್ನಡ ಸಾಹಿತ್ಯ ಮತ್ತು ಪ್ರೇಮ

ಅಧ್ಯಾಯ ಮೂರು

ಆಧುನಿಕ ಕನ್ನಡ ಸಾಹಿತ್ಯ ಮತ್ತು ಪ್ರೇಮ

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದ ದಿನಗಳು ಭಾರತದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಮಹತ್ವದ ದಿನಗಳು. ಅಷ್ಟೇ ಅಲ್ಲದೇ ಈ ಸ್ವಾತಂತ್ರ್ಯ ಸಂಗ್ರಾಮದ ಚಿಂತನೆಗಳು ಭಾರತೀಯ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಹಿತ್ಯಿಕವಾಗಿ ಅನೇಕ ಸ್ಥಿತ್ಯಂತರಗಳನ್ನುಂಟು ಮಾಡಿದವು. ಈ ಬಗೆಯ ಬದಲಾವಣೆಯ ಗಾಳಿ ಆಧುನಿಕ ಕನ್ನಡ ಸಾಹಿತ್ಯದಲ್ಲೂ ಉಂಟಾಗಿರುವುದನ್ನು ನಾವು ಕಾಣಬಹುದು. ಬಂಗಾಳಿ ಸಾಹಿತ್ಯ ರಚನೆಯ ಪ್ರಭಾವ ಹಾಗೂ ಪಾಶ್ಚಾತ್ಯ ಸಾಹಿತ್ಯದ ವಿಚಾರ ಲಹರಿಗಳು ಪರೋಕ್ಷವಾಗಿ ಈ ಬದಲಾವಣೆಗೆ ಕಾರಣವಾಗಿವೆ ಎನ್ನಬಹುದು. ಇದನ್ನು ಕನ್ನಡ ನವೋದಯ ಸಾಹಿತ್ಯದ ಅಧ್ಯಯನದ ಮೂಲಕ ನಾವು ಗುರುತಿಸಬಹುದಾಗಿದೆ.

ನವೋದಯ ಕವಿಗಳ ಕಾವ್ಯದ ವಸ್ತು ವಿಷಯದಲ್ಲಿ ಪ್ರತಿಪಾದಿತವಾದ ಕೆಲ ಪ್ರಮುಖ ಅಂಶಗಳೆಂದರೆ

೧. ಪ್ರಕೃತಿ ಪ್ರೇಮ

೨. ರಾಷ್ಟ್ರ ಪ್ರೇಮ

೩. ಮಾನವ ಸಹಜ ಪ್ರೇಮ

ಹಾಗೆ ನೋಡಿದರೆ ನವೋದಯ ಕವಿಗಳ ಸಾಹಿತ್ಯದ ಅಥವಾ ಕಾವ್ಯದ ಮೂಲದ್ರವ್ಯ ಪ್ರೇಮವೇ ಆಗಿದೆ. ಅದು ಲೋಕದ ಎಲ್ಲ ಕವಿಗಳ ಪ್ರಾರಂಭದ ಹೆಜ್ಜೆ ಗುರುತು ಹೌದು. ತೀ. ನಂ. ಶ್ರೀಕಂಠಯ್ಯನವರ 'ಒಲುಮೆ' (೧೯೩೨) ನವೋದಯ ಕನ್ನಡ ಸಾಹಿತ್ಯದಲ್ಲಿನ ಪ್ರಥಮ ಪ್ರೇಮ ಕವನಗಳ ಸಂಕಲನವಾಗಿದೆ.[೧] ಆಧುನಿಕ ಕನ್ನಡ ಸಾಹಿತ್ಯ ಅದರಲ್ಲೂ ಕಾವ್ಯದಲ್ಲಿ ಪ್ರೇಮದ ಚಿತ್ರಿಸುವಿಕೆ ಹೆಚ್ಚು ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ಕುವೆಂಪು, ಬೇಂದ್ರೆ, ಕೆ. ಎಸ್. ನರಸಿಂಹಸ್ವಾಮಿ, ಜಿ. ಎಸ್. ಶಿವರುದ್ರಪ್ಪ ಈ ಪ್ರಾತಿನಿಧಿಕ ಕವಿಗಳ ಆಯ್ದ ಪ್ರೇಮ ಕವಿತೆಗಳ ಕುರಿತ ಚರ್ಚೆಯನ್ನು ಈ ಅಧ್ಯಯನದಲ್ಲಿ ನಡೆಸಲಾಗಿದೆ.

ಪ್ರಕೃತಿ ಮತ್ತು ಆಧ್ಯಾತ್ಮಗಳ ಅನನ್ಯ ಸಾಂಗತ್ಯದಲ್ಲೇ ತಮ್ಮ ಅರ್ಥಪೂರ್ಣ ಜೀವನ ಕಳೆದವರು ಕುವೆಂಪು. ಸೃಷ್ಟಿ ಸೌಂದರ್ಯದ ಸಹಜ ಸೊಬಗು ಹಾಗೂ ಅಭೂತಪೂರ್ವ ಆಧ್ಯಾತ್ಮದ ಸಾನ್ನಿಧ್ಯ ಕುವೆಂಪುರವರ ಎದೆಯಾಳದಲ್ಲಿ ಒಲವ ತಂಗಾಳಿಯನ್ನು ಹರಿಸಿದವು. ಎದೆಯಲ್ಲಿ ಹರಿಯುತ್ತಿದ್ದ ಪ್ರೇಮದ ಝರಿಯನ್ನು ಕನ್ನಡ ಕಾವ್ಯ ಲೋಕಕ್ಕೂ ತಂದು ಕಾವ್ಯದಾಗಸದಲ್ಲಿ ಪ್ರೇಮದ ಕಾಮನ ಬಿಲ್ಲು ಮೂಡಿಸಿದ ಕೀರ್ತಿ ಕುವೆಂಪುರವರಿಗೆ ಸಲ್ಲುತ್ತದೆ.

ಕುವೆಂಪುರವರ ಪ್ರಥಮ ಕವನ ಸಂಕಲನ 'ಕೊಳಲು'. ಈ ಸಂಕಲನದಲ್ಲಿಯೇ ಪ್ರೇಮ ಕವಿತೆಗಳ ರಚನೆಗಳನ್ನು ನಾವು ಕಾಣಬಹುದು. ಆದರೆ ಆ ಪ್ರೇಮ ಕವಿತೆಗಳ ಮೇಲೆ ಅನುಭಾವದ ಛಾಯೆ ದಟ್ಟವಾಗಿ ಕವಿದಿರುವುದನ್ನು ಕಾಣಬಹುದು. ಸಾಮಾನ್ಯವಾಗಿ ಲೋಕದ ಸಂಬಂಧಗಳನ್ನು ಗಮನಿಸಿದರೆ ಅಲ್ಲಿ ಗಂಡು-ಹೆಣ್ಣೆಂಬ ಭೇದ ಭಾವವಿರುವುದನ್ನು ಕಾಣುತ್ತೇವೆ. ಆದರೆ ಪ್ರೇಮ ಸಂಬಂಧಗಳಲ್ಲಿ ಈ ಭೇದವನ್ನು ಕಾಣಲು ಸಾಧ್ಯವಿಲ್ಲ. ಈ ಆಶಯವನ್ನು 'ಪ್ರೇಮಾದ್ವೈತ'ದಲ್ಲಿ (ಕುವೆಂಪುರವರ ಕವನ) ಕಾಣಬಹುದು. ಪ್ರೇಮ ಅದ್ವೈತ ಎಂಬುದು ಕುವೆಂಪು ನಿಲುವು. ಪ್ರೇಮಾದ್ವೈತದಡಿಯಲ್ಲಿ ಗಂಡು-ಹೆಣ್ಣಿಬ್ಬರು ಒಂದೇ. ಇಬ್ಬರಿಗೂ ಸುಖ-ದುಃಖಗಳಲ್ಲಿ ಸಮಪಾಲಿದೆ. ಪ್ರೇಮದ ಮೂಲ ಆಶಯಗಳಲ್ಲಿ 'ಸಮಬಾಳು' ಕೂಡ ಒಂದು. ಸಾಮಾಜಿಕ ಸಂಬಂಧಗಳ ಹಿತದೃಷ್ಟಿಯಿಂದ ಸಮಬಾಳಿನ ಈ ಕಲ್ಪನೆಗೆ ತುಂಬಾ ಪ್ರಾಮುಖ್ಯತೆಯಿದೆ. ಇಂದು ಇದರ ಅನುಷ್ಠಾನದ ಕಾರ್ಯ ಲಘುವಾಗಿ ಆಗಬೇಕಾದ ಅನಿವಾರ್ಯವು ಇದೆ.

ಮಾತಿನಿಂದೇನು? ಮಂತ್ರದಿಂದೇನು ಮಾತು ಮಂತ್ರಗಳೆಲ್ಲ ಬರಿ ನೆವಗಳೆಮಗೆ
ನನ್ನ ನಿನ್ನಯ ಮಧುರ ಮಿಲನವು ಮಾತುಗಳನರಿಯದ ಮಂತ್ರಗಳಳೆಯದ
ಹಿರಿಯಾಳಾದಲಿ ನನಗೂ ನಿನಗೂ ಭೇದವಿಲ್ಲ:
ಏಕೆಂದರೆ, ಪ್ರೇಮ ಅದ್ವೈತಿ![೨]

ಮಾತಿನಿಂದ ಮೌನದ ಕಡೆಗೆ ಸಾಗುವ ಪ್ರೇಮಕ್ಕೆ ಕುವೆಂಪು ಹೆಚ್ಚು ಮಹತ್ವ ನೀಡುತ್ತಾರೆ. ಮೌನಕ್ಕೂ-ಮಿಲನಕ್ಕೂ ಇರುವ ಮಧುರತಮವಾದ ಸೂಕ್ಷ್ಮವನ್ನು ಕುವೆಂಪು ಪ್ರಸ್ತುತ ಕವಿತೆಯಲ್ಲಿ ಅನಾವರಣಗೊಳಿಸಿದ್ದಾರೆ.

೧೯೪೬ ರಲ್ಲಿ ಪ್ರಕಟವಾದ ಕುವೆಂಪುರವರ ಪ್ರೇಮ ಕಾಶ್ಮೀರ ಕವನ ಸಂಕಲನವು ಬಹುತೇಕ ಪ್ರೇಮವನ್ನು ಕುರಿತ ಸಂಕಲನವೇ ಆಗಿದೆ. ಭಾರತೀಯ ಪರಂಪರೆಯಲ್ಲಿ, ಸಂಸ್ಕೃತಿಯಲ್ಲಿ ಪುನರ್ಜನ್ಮದ ಕಲ್ಪನೆಯಿದೆಯಷ್ಟೆ. ಜನ ಅದನ್ನು ನಂಬಿ ಬದುಕುತ್ತಾರೆ ಕೂಡ! ಪ್ರೇಮಕ್ಕೆ ಜನ್ಮಜನ್ಮಗಳ ನಂಟಿರುತ್ತದೆ. ಪ್ರೆಮದ ಸಿದ್ಧಿ ಸುಲಭವಲ್ಲ ಎಂಬುದನ್ನು ನಂಬಿರುವ ಕವಿ ತಮ್ಮ ಕವನದಲ್ಲಿ ಹೀಗೆ ಹೇಳುತ್ತಾರೆ.

ನಿನ್ನೊಂದು ಚೆಂದುಟಿಯ ಸವಿಮುತ್ತಿಗೆಂದು ನಾ
ಜನ್ಮ ಜನ್ಮಗಳೆತ್ತಿ ಬಯಸಿ ಬಂದೆ;
ಯುಗ ಯುಗಾಂತರದಲ್ಲಿ ಹುಡುಕಿ ತೊಳಲುತ ಬಳಲಿ
ಕಡೆಗಿಂದು ನಿಂದಿಹೆನು ನಿನ್ನ ಮುಂದೆ[೩]

ಒಬ್ಬರನ್ನೊಬ್ಬರು ಕಂಡ ಮೊದಲ ದಿನವೇ ಪ್ರೇಮ ನಿವೇದನೆ ಮಾಡಿಕೊಳ್ಳುವ ಇಂದಿನ ಅವಸರದ ಪ್ರೇಮಿಗಳು ಒಂದು ಸಲ ಈ ಕವಿತೆಯ ಸಾಲುಗಳನ್ನು ಓದಲೇಬೇಕು. ಪ್ರೀತಿ ಕಾಯುವಿಕೆಯಿಂದಲೇ ಗಟ್ಟಿಗೊಳ್ಳುತ್ತದೆ. ಕಾಯುವಿಕೆ ವಾಸ್ತವವಾಗಿ ನೋವೆನಿಸಿದರೂ ಭಾವನಾತ್ಮಕವಾಗಿ ಅದೊಂದು ಮಧುರ ಯಾತನೆ. ಆ ಮಧುರ ಯಾತನೆಯನ್ನು ಕಂಡವರು ಕುವೆಂಪು. ಅದಕ್ಕಾಗಿಯೇ ಅವರು ಹುಡುಕುವ ಕ್ರಿಯೆಗೆ ದಿನ,

ವರುಷಗಳನ್ನು ಹೆಸರಿಸಿಲ್ಲ. ಯುಗ ಯುಗಾಂತರಗಳನ್ನು ಹೆಸರಿಸಿದ್ದಾರೆ. ಇದು ಪ್ರೀತಿಗಿರುವ ಅನಂತತೆಯನ್ನು, ಅಗಾಧ ಶಕ್ತಿಯನ್ನು ತಿಳಿಸುತ್ತದೆ.

ಪ್ರಕೃತಿ ಪ್ರಿಯರಾದ ಕುವೆಂಪು ತಮ್ಮ ಪ್ರೀತಿಯ ಪ್ರೇಯಸಿಯ ವರ್ಣನೆಗೆ ಸಹಜ ಸೌಂದರ್ಯದ ಈ ನಿಸರ್ಗವನ್ನೇ ಮೂಲವಾಗಿಸಿಕೊಳ್ಳುತ್ತಾರೆ. ಇದನ್ನು ಅವರ ಕವಿತೆಯೊಂದರಲ್ಲಿ ಗುರುತಿಸಬಹುದು.

ಹಾಲು, ಹೂವು, ಜೊನ್ನ, ಜೇನು.
ಎಲ್ಲ ಸೇರಿಯಾದೆ ನೀನು!
ಹಾಲಿಗಿಂತ ಕೆನ್ನೆ ಸವಿ;
ಹೂವಿಗಿಂತ ಕಣ್ಣೆ ಸವಿ;
ಜೊನ್ನಕ್ಕಿಂತ ನಗೆಯೆ ಸವಿ;
ಜೇನಿಗಿಂತ ಮುತ್ತೆ ಸವಿ;
ಹಾಲು ಸವಿ, ಜೇನು ಸವಿ,
ಹಾಲು ಜೇನುಗಳನು ಮೀರಿ
ನೀನೆ ನನಗೆ ಹೆಚ್ಚು ಸವಿ[೪]!

ಪ್ರಕೃತಿ ಚೆಲುವಿನ ಜೊತೆ ಪ್ರೇಯಸಿಯ ಚೆಲುವನ್ನು ಸಮೀಕರಿಸುವ ಕವಿ ಕೊನೆಗೆ ಪ್ರೇಯಸಿಯ ಚೆಲುವಿಗೆ ಸೋಲುತ್ತಾರೆ. ಪ್ರೇಯಸಿಯೇ ಅಮೋಘವೆನಿಸುತ್ತಾಳೆ. ಅವಳ ಕೆನ್ನೆ, ಕಣ್ಣು, ನಗೆ, ಮುತ್ತುಗಳು ಹಾಲು, ಹೂವು, ಜೊನ್ನ, ಜೇನುಗಳಿಗಿಂತ ಸವಿ ಎನ್ನುವಲ್ಲಿ ಕುವೆಂಪು ಒಲವಿನ ಪರಾಕಾಷ್ಠೆಯನ್ನು ಮೆರೆದಿದ್ದಾರೆ. ಹಾಲು ಸವಿ, ಜೇನು ಸವಿ ಎಂಬುದನ್ನು ಕುವೆಂಪು ಒಪ್ಪಿಕೊಳ್ಳುತ್ತಾರಾದರೂ ಅವುಗಳಿಗಿಂತ ಸವಿ ಪ್ರೇಯಸಿ ಎನಿಸುತ್ತಾಳೆ. ಪ್ರೀತಿಯೇ ಹಾಗೆ ಅದು ಎಲ್ಲ ಚೆಲುವುಗಳಿಗಿಂತ ಚೆಲುವು, ಸವಿಗಿಂತ ಸವಿ, ಪ್ರೀತಿಯ ಸಂಗಾತಿಯ ಚೆಲುವಿನ ಮುಂದೆ, ಅವಳ ಒಲವಿನ ಸಾನ್ನಿಧ್ಯದ ಮುಂದೆ ಎಲ್ಲವೂ ನಶ್ವರ ಎನ್ನಿಸುವ ಬಗೆಯೇ ಅಚ್ಚರಿ ತರುವಂಥದ್ದು. ಇಂತಹ ಅಚ್ಚರಿಗಳ ಅಚ್ಚರಿ ಪ್ರೀತಿ ಎಂದರೆ ಇಲ್ಲಿ ತಪ್ಪಾಗಲಿಕ್ಕಿಲ್ಲ ಎನಿಸುತ್ತದೆ. ಪ್ರೀತಿಸುವವರು ತಾವು ಪ್ರೀತಿಸುವ ಹೃದಯಗಳಿಗಾಗಿ ಸೋಲುತ್ತಾರೆ. ಅದಕ್ಕಾಗಿ ಅವರು ಎಂಥಾ ತ್ಯಾಗಕ್ಕೂ ಸಿದ್ಧರಾಗುತ್ತಾರೆ. ಮೇಲ್ನೋಟಕ್ಕೆ ಇವು ವಯೋಸಹಜ ವರ್ತನೆಗಳಂತೆ ಕಂಡುಬಂದರೂ ಅವುಗಳ ಹಿಂದೆ ಎದೆಯಲ್ಲಿ ತಣ್ಣನೆಯ ಅನುರಾಗದ ಝುರಿಯೊಂದು ಸದಾ ಹರಿಯುತ್ತದೆಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ.

ಯಾರು ಪರಸ್ಪರರು ಪ್ರೀತಿಗಾಗಿ ಸೋಲುತ್ತಾರೋ ಅವರು ಬದುಕಿನ ಪ್ರತಿ ಘಳಿಗೆಯನ್ನು ಗೆಲ್ಲುತ್ತಾ ಹೋಗುತ್ತಾರೆ. ಬದುಕನ್ನು ಗೆಲುವಾಗಿಸಿಕೊಳ್ಳುತ್ತಾ ಹೋಗುತ್ತಾರೆ. ಸೋತು ಗೆಲ್ಲುವ ಕಲೆ ಪ್ರೀತಿಯದು. ಆದರೆ ತನ್ನವಳನ್ನು ಗೆಲ್ಲುವ ಬಗೆಯಾದರೂ ಹೇಗೆ ಎಂದು ಕವಿ ಗೊಂದಲಕ್ಕೆ ಸಿಕ್ಕಿಬಿದ್ದಿದ್ದಾನೆ. ಹಾಗೂ ಅವಳನ್ನು ಗೆಲ್ಲುವುದಕ್ಕಾಗಿ ಅನೇಕ ಉಪಾಯಗಳನ್ನು ಮಾಡಲು ಕವಿ ಪ್ರಯತ್ನಿಸುತ್ತಾರೆ.

ಕೆಂಪು ಗುಲಾಬಿಯ ಚೆಂದುಟಿ ಚೆಲುವೆ
ಎಂತು ನಿನ್ನನು, ಹೇಳು, ಗೆಲುವೆ?
ಸುಗ್ಗಿಯ ಹೊಸ ಸಿರಿ ಹೂಗಳ ಕೊಯ್ದು
ತರಲೇನ್ ಒಂದಿನಿಮಾಲೆಯ ನೆಯ್ದು?
ಕಾಜಾಣವು ಕೋಗಿಲೆಗಳ ಬೇಡಿ
ಕಲಿತಿಂಚರದಿಂ, ನಿನ್ನನೆ ನೋಡಿ,
ತುಟಿಯಿಂ ಸೋರುತಲಿರೆ ಸವಿಜೇನು
ಮುದ್ದಿನ ಹೆಸರನು ಕರೆಯಲೆ ಏನು?
....
....
ದಾನವೊ ಮಾನವೊ ಪ್ರಾಣವೊ ಏನು?
ಯಾವುದರಿಂದೆನಗೊಲಿಯುವೆ ನೀನು?
ಕೆಂಪು ಗುಲಾಬಿಯ ಚೆಂದುಟಿ ಚೆಲುವೆ
ಎಂತು ನಿನ್ನನು ಹೇಳು, ಗೆಲುವೆ? [೫]

ಆಲಿಂಗನವು ಪ್ರೀತಿಯು ನೀಡುವ ಅಮೂಲ್ಯ ಉಡುಗೊರೆಗಳಲ್ಲಿ ಒಂದು. ಪರಸ್ಪರರ ಆಲಿಂಗನವು ಪ್ರೀತಿಯಲ್ಲಿ ಪುಳಕವನ್ನುಂಟು ಮಾಡುವಂತದ್ದಾಗಿದೆ. ಪ್ರೇಮಿಗಳಿಬ್ಬರನ್ನು ಒಂದುಗೂಡಿಸುವಲ್ಲಿ ಆಲಿಂಗನದ ಕಾರ್ಯ ಅಪಾರ ಮತ್ತು ಅಗಾಧ. ಆಲಿಂಗನದ ಸೆಳೆತ ಅಮೂರ್ತವಾದರೂ ಅದರ ಅನುಭವ ಮಾತ್ರ ಅನನ್ಯ. ಆಲಿಂಗನ ಗಾಢವೂ ಹೌದು ನಿಗೂಢವು ಹೌದು. ಪ್ರೀತಿಯ ಮಧುರಾಲಿಂಗನಕ್ಕೆ ಕವಿ ಮನ ಹಾತೊರೆದಿದೆ ಮತ್ತು ಆಲಿಂಗನದ ಸುಳಿಯಲಿ ಸಿಲುಕಿ ಸಾಯುವುದು ಕೂಡ ಒಂದು ಸಾವೇ, ಅದು ಸುಖದ ಸಾವು ಎಂಬುದು ಕವಿ ಭಾವವಾಗಿದೆ.

ಮೇಗಡೆ ಬಾನ್, ಕೆಳಗಡೆ ಕಾನ್,
ಜೊನ್ನದ ಜೇನ್ ನಡುವೆ;
ನಿನ್ನೊಳು ನಾನ್, ನನ್ನೊಳು ನೀನ್,
ನಮಗಿನ್ನೇನ್ ಗೊಡವೆ?
ಹೊನ್ನೊಲುಮೆಯ ಹೊಂಬೊನಲಲಿ
ತೇಲುವ ಬಾಳ್ ನಾವೆ
ಆಲಿಂಗನದಾವರ್ತದಿ
ಮುಳುಗಿದರೇನ್ ಸಾವೆ? [೬]

ನಾ ನಿನಗೆ ನೀನೆನಗೆ ಜೇನಾಗುವಾ!
ರಸದೇವ ಗಂಗೆಯಲಿ ಮೀನಾಗುವಾ!
ಹೂವಾಗುವಾ ಹಣ್ಣಾಗುವಾ
ರತಿರೂಪಿ ಭಗವತಿಗೆ ಮುಡಿಪಾಗುವಾ! [೭]

ಜಗ ಸೃಷ್ಟಿಯೆಲ್ಲವು ರತಿದೇವಿ ಲೀಲೆಯಿಂದಲೇ ಎಂಬುದು ಲೋಕದ ಸಹಜ ತಿಳುವಳಿಕೆ. ರತಿರೂಪಿ ಭಗವತಿಗೆ ಎಲ್ಲರೂ ತಲೆಬಾಗಲೇ ಬೇಕು. ಕುವೆಂಪು ಇಲ್ಲಿ ತನ್ನ ಸಂಗಾತಿಗೆ ರತಿರೂಪಿಯಾಕಾಶದಲಿ ಹಾರಾಡಲು ಪ್ರೀತಿಯ ಆಮಂತ್ರಣ ನೀಡಿದ್ದಾರೆ. 'ನಾನಿನಗೆ ನೀನೆನಗೆ ಜೇನಾಗುವಾ, ರಸದೇವ ಗಂಗೆಯಲಿ ಮೀನಾಗುವಾ' ಎನ್ನುವಲ್ಲಿ ದೇಹ ಬೆಸುಗೆಯ ತೀವ್ರದಾಹ ಎದ್ದು ಕಾಣುತ್ತದೆ. ಪ್ರೇಮದಂತೆ ಕಾಮವು ಮಾನವ ಸಹಜ ಬಯಕೆಗಳಲ್ಲಿ ಒಂದು. ಅದರಿಂದಲೇ ಲೋಕದ ಉದ್ಧಾರ. ಆದರೆ ಅದು ದಾಂಪತ್ಯದ ಪರಿಧಿಯಲ್ಲಿದ್ದಾಗ ಅದರ ಸಾರ್ಥಕ್ಯವನ್ನು ನಾವು ಕಾಣಲು ಸಾಧ್ಯ. ಕವಿ ಕೂಡ ಇಲ್ಲಿ ದಾಂಪತ್ಯದೊಳಗಿನ ಪ್ರೇಮ ಪ್ರೇರಿತ ಕಾಮಕ್ಕೆ ಶರಣು ಹೋಗಿದ್ದಾರೆ.

ಉಪ್ಪು ತಿಂದವರು ನೀರು ಕುಡಿಯಲೇಬೇಕು ಎಂಬ ಗಾದೆಯಂತೆ ಪ್ರೇಮದ ಬಲೆಗೆ ಬಿದ್ದವರು ವಿರಹ ಯಾತನೆಯನ್ನು ಜೀವನದಲ್ಲಿ ಒಂದಲ್ಲ ಒಂದು ಬಾರಿಯಾದರೂ ಅನುಭವಿಸಬೇಕು. ದೂರವಾದ ಸಂಗಾತಿಯ ನೆನಪುಗಳನ್ನು ಜೀವಂತವಾಗಿ ನಮ್ಮ ಕಣ್ಣೆದುರು ತಂದು ನೆನಪುಗಳ ನೋವಿನಲ್ಲಿ ನಾವು ಬೆಂದು ಹೋಗುವಂತೆ ಮಾಡುವ, ಪ್ರೇಯಸಿಯ ಬಗೆಗಿನ ಪ್ರೀತಿಯನ್ನು ಹೆಚ್ಚು ಮೋಹಕಗೊಳಿಸುವ ವಿರಹವು 'ಅಗ್ನಿ ಜಲ'ವಿದ್ದಂತೆ! ಆದರೆ ಕವಿ ಇಲ್ಲಿ ವಿರಹದ ಯಾತನೆಯನ್ನು ತಾಳದೆ, ವಿರಹವನ್ನು ಚಿತೆ ಎಂದು ಕರೆದಿದ್ದಾರೆ. ವಿರಹ ತರುವ ಯಾತನೆಗಳ ಹಲವು ಚಿತ್ರಣಗಳನ್ನು ಕವಿ ವಿರಹ ಚಿತೆ ಎಂಬ ಕವಿತೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಹೇಮಲತೆ, ಪ್ರೇಮ ಲಕ್ಷ್ಮಿ
ನನ್ನ ಪಂಚ ಪ್ರಾಣ ಲಕ್ಷ್ಮಿ,
ಗಾಳಿ ನೀನೆ ಬೆಳಕು ನೀನೆ;
ಉಲ್ಲಾಸದ ಉಸಿರು ನೀನೆ;
ನನಗೆ ಮನೆಗೆ ಎಲ್ಲ ನೀನೆ
ನೀನೆ ಕವಿಗೆ ಹೃದಯ, ಭಾವ
ಮೇಣಾತ್ಮಕೆ ರಸದ ಜೀವ
ಗೃಹಿಣಿ, ನೀನೆ ಗೃಹದ ದೇವಿ
ನೀನು ದೂರ ಹೋದರೆ
ಮಸಣದೊಂದು ಹಾಳುಬಾವಿ
ಗೃಹವಿದು; 'ಮನೆ' ಎಂಬರೆ?[೮]

ತನಗೆ ಗಾಳಿ, ಬೆಳಕು, ಉಸಿರು, ಚೈತನ್ಯ ಎಲ್ಲವೂ ಆಗಿದ್ದ ತನ್ನ ಮಡದಿಯು ತವರು ಮನೆಗೆ ತೆರಳಿರುವುದು ಅತೀವ ಬೇಸರ ಉಂಟು ಮಾಡಿದೆ. ಮಡದಿಯನ್ನು ಪ್ರೇಮ ಲಕ್ಷ್ಮಿ, ಹೇಮಲತೆ, ಪಂಚ ಪ್ರಾಣ ಲಕ್ಷ್ಮಿ ಎಂದು ಪರಿಪರಿ ನೆನೆಯುವ ಕವಿ ಕೊನೆಗೆ ಮಡದಿಯಿಲ್ಲದ ಮನೆ ಮನೆಯಲ್ಲ ಅದು ಮಸಣದೊಂದು ಹಾಳು ಬಾವಿ ಎಂದು ದೂಷಿಸುತ್ತಾರೆ.

ನವೋದಯದ ಮೇರು ಶಿಖರಗಳಲ್ಲಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಒಬ್ಬರು. ದೇಸಿ ಸೊಗಡಿನ ದಾರ್ಶನಿಕ ಕವಿಗಳಾದ ಬೇಂದ್ರೆಗೆ ಜೀವನದ ಬಗೆಗೆ ಅಪಾರ ಒಲವಿರುವುದನ್ನು ಅವರ ಕೃತಿಗಳಿಂದ ನಾವು ಕಂಡುಕೊಳ್ಳಬಹುದು. ಅಂತರಂಗದ ವಿಕಾಸತ್ವಕ್ಕೆ ಹೆಚ್ಚು ಒತ್ತು ನೀಡಿದವರು ಬೇಂದ್ರೆ. ಅಂತರಂಗದ ವಿಕಾಸತ್ವ ಎಂದರೆ ಅಲ್ಲಿ ಪ್ರೀತಿಯ ವಿಕಸನವು, ಪ್ರೀತಿಯ ಅನುಕರಣೆಯ ಅನುಷ್ಠಾನದ ಮಾರ್ಗವು ಹೌದಾಗಿದೆ.

ದಾಂಪತ್ಯದ ಸುಖ ದುಃಖಗಳನ್ನು ತಮ್ಮ ಕವಿತೆಯಲ್ಲಿ ಚಿತ್ರಿಸುವ ಮೂಲಕ ತಮ್ಮ ಕಾವ್ಯಗಳಿಗೆ ಒಲವಿನ ರಂಗು ಬಳಿದವರು ಅಂಬಿಕಾತನಯದತ್ತರು. ದಾಂಪತ್ಯದ ಬಂಡಿಗೆ ಗಂಡು-ಹೆಣ್ಣೆಂಬ ಎರಡು ಚಕ್ರಗಳು ಸಮವಾಗಿಯೇ ತಿರುಗಬೇಕು. ಒಂದರ ಕೀಲು ಸಡಿಲವಾದರೂ ಸರಿಯೇ ಬದುಕು ಹಳ್ಳ ಹಿಡಿಯುತ್ತದೆ.

ನಾಳೆ ಏನೋ ಎತ್ತೋ ಎಂದು ಗೊತ್ತಿರದ ಮಾನವ ಬದುಕಿನಲ್ಲಿ ಕ್ಷಣಾರ್ಧದಲ್ಲಿ ಎಂತಹ ವಿಷಮ ಸ್ಥಿತಿಗಳು ಎದುರಾಗಬಹುದು. ದಾಂಪತ್ಯವೂ ಹಾಗೆ. ಗಂಡ ಹೆಂಡತಿ ಒಲವಿಂದಿದ್ದರೆ ಈ ಬದುಕು ನಾಕವೆನಿಸುತ್ತದೆ. ಪತಿಪತ್ನಿಯರಲ್ಲಿ ಮುಖ್ಯವಾಗಿ ಹೊಂದಾಣಿಕೆ ಇರಬೇಕು. ಸಾಮರಸ್ಯತೆ ಇರಬೇಕು. ಎಂತಹ ಪರಿಸ್ಥಿತಿಯಲ್ಲಿಯೂ ಬದುಕನ್ನು ಜೊತೆಗೆ ಕಳೆಯುವ ಅನನ್ಯವಾದ ಒಲವು, ಧೈರ್ಯಗಳಿರಬೇಕು. ಸಂಸಾರದಲ್ಲಿ ಸರಸವೂ ಉಂಟು. ವಿರಸವೂ ಉಂಟು. ಅಂತಹ ವಿರಸದ ಘಳಿಗೆಯ ಚಿತ್ರಣವಿರುವ ಬೇಂದ್ರೆಯವರ -ಮನದನ್ನೆ' ಕವಿತೆ ಓದುಗರ ಮನ ಕಲಕುವಂತಿದೆ.

ಆಡದಿರು ಮನದನ್ನೆ ಎನಗೆ ಇದಿರಾಡದಿರು
ವಾದಕ್ಕೆ ಬೇಸತ್ತು ಮರ್ಮಘಾತಕ್ಕೆ ಸತ್ತು ಉಳಿದು ಬಂದೆ

ತನ್ನನ್ನು ಅರಿತು ತನ್ನ ಪ್ರೀತಿಯನ್ನು ಧಾರೆಯೆರೆದ ಪತ್ನಿಯೇ ತನಗೆ ಎದುರಾದ ಕ್ಷಣ ಕವಿ ತನ್ನ ಪತ್ನಿಯಲ್ಲಿ ವಿನಮ್ರವಾಗಿ ಪ್ರೀತಿಯಿಂದ ಈ ಮೇಲಿನ ಸಾಲುಗಳನ್ನು ಉದ್ಧರಿಸುತ್ತಾರೆ. ದಾಂಪತ್ಯದಲ್ಲಿ ವಿರಸ ಉಂಟಾದರೆ ಗಂಡ-ಹೆಂಡಿರ ನಡುವೆ ವಾದಕ್ಕೆ ಪ್ರತಿವಾದಗಳು ಬೆಳೆದು ಸಂಸಾರ ಸಾರ ಕಳೆದುಕೊಂಡು ನಿಸ್ಸಾರವಾಗುವ ಸಂದರ್ಭಗಳೇ ಹೆಚ್ಚು. ಆದರೆ ಬೇಂದ್ರೆ ವಾದದ ಗೊಡವೆಗೆ ಹೋಗದೆ ಒಲವ ಹೂವು ಮತ್ತೆ ದಾಂಪತ್ಯದಲ್ಲಿ ಅರಳುವುದಕ್ಕಾಗಿ ಇಲ್ಲಿ ಹಾತೊರೆದಿರುವುದನ್ನು ಕಾಣಬಹುದು. ಮುಂದುವರಿದು ಕವಿ ಹೀಗೆ ಹೇಳುತ್ತಾರೆ

ಹೀಗೆನಲು ಹಾಗೆಂದು ಬೆಂದ ಹೆಣವನೆ ಕೊಂದು
ಭೂತಲೀಲೆಯಲೀಗ ತೊಡಗಬೇಡ
ಅಡಗಿ ಅಡಕದೆ ಮನವ ಮಡುಗ ಬೇಡ

ನಿನ್ನ ತಿಳಿಹನು ಹಣಿಸು ನಿನ್ನ ಹೊಟ್ಟೆಯನುಣಿಸು
ಇದಿರಾಡದಿರು ಗೆಳತಿ ನೀನು ಕೂಡ
ಹೃದಯವನು ರಣರಂಗ ಮಾಡಬೇಡ[೯]

ದಾಂಪತ್ಯದಲ್ಲಿ ವಿರಸ ಉಂಟಾದರೆ ಜೀವ ಹೇಗೆ ಬೆಂದು ಹೋಗುತ್ತದೆ ಎಂಬುದನ್ನು ಮನ ಮಿಡಿಯುವಂತೆ ಚಿತ್ರಿಸಿದ್ದಾರೆ ಬೇಂದ್ರೆ. ಯಾವುದೋ ಒಂದು ಘಳಿಗೆಯಲ್ಲಿ ಏನೋ ಒಂದು ತಪ್ಪು ನಡೆಯುತ್ತದೆ. ಪುನಃ ಪುನಃ ಅದನ್ನು ಕೆದಕುವುದು ಗಾಯದ ಮೇಲೆ ಬರೆ ಎಳೆದಂತೆ, ಅಂದುದನೆ ಅಂದು ಮನವ ಕುಟುಕಬೇಡ ಎಂದು ಕೇಳುವಲ್ಲಿ ಕವಿ ಸಂಯಮದ ಆಳವನ್ನು ನಾವಿಲ್ಲಿ ಅರಿಯಬೇಕಾಗುತ್ತದೆ. ದಾಂಪತ್ಯದ ರಾಗಕ್ಕೆ ಸಂಯಮದ ತಾಳವು ಜೊತೆಗೂಡಬೇಕು. ಆಗಲೇ ಬದುಕಿನ ಹಾಡು ಅಪಸ್ವರವಾದರೂ ಅದನ್ನು ಸರಿಪಡಿಸುವ ಚೈತನ್ಯ ತಾನಾಗಿಯೇ ಬಂದೊದಗುತ್ತದೆ. ಕವಿ ತನ್ನ ಸಂಗಾತಿಯನ್ನು ಗೆಳತಿ ಎಂದು ಸಂಬೋಧಿಸುವಲ್ಲಿ ಕವಿ ತನ್ನ ಪತ್ನಿಗೆ ನೀಡಿದ ಸ್ಥಾನದ ಅರಿವು ನಮಗೆ ಉಂಟಾಗುತ್ತದೆ. ಪತ್ನಿಯನ್ನು ಗುಲಾಮಿಯಂತೆ ನಡೆಸಿಕೊಳ್ಳುವ ಪತಿರಾಯರು ಹೆಚ್ಚಿರುವ ಈ ಲೋಕದಲ್ಲಿ ಹೆಂಡತಿಯನ್ನು ಗೆಳತಿ ಎಂದು ಕರೆದಿರುವ ಬೇಂದ್ರೆಯಂತ ಒಲವ ಜೀವಿಗಳು ಅಪರೂಪದ ಅನರ್ಘ್ಯ ರತ್ನಗಳಂತೆ ಓದುಗರೆದುರು ಗೋಚರವಾಗುತ್ತಾರೆ ಎಂದರೆ ಇದು ಅತಿಶಯೋಕ್ತಿಯಾಗಲಾರದು.

ಒಲವೆಂಬುದೇ ಹಾಗೆ. ಎಲ್ಲಿ ಯಾರನ್ನು ಯಾವ ಕ್ಷಣದಲ್ಲಿ ತನ್ನೊಳಗೆ ಬಂಧಿಸಿಬಿಡುತ್ತದೋ ಹೇಳಲಿಕ್ಕಾಗದು. ಎಲ್ಲಿಯ ಗಂಡನ್ನೋ ಇನ್ನೆಲ್ಲಿಯ ಹೆಣ್ಣನ್ನು ಪರಸ್ಪರ ಅಪರಿಚಿತರಾದರೂ ಅವರೊಳಗೊಂದು ಸೆಳೆತವನ್ನು ಆಕರ್ಷಣೆಯನ್ನು ತಂದು ಪರಸ್ಪರ ಇಬ್ಬರನ್ನು ಒಂದುಗೂಡಿಸುವ ಪ್ರೀತಿಯ ಶಕ್ತಿಯನ್ನು ನೆನೆದರೆ ಮನ ರೋಮಾಂಚನಗೊಳ್ಳದೆ ಇರಲಾರದು. ಪ್ರೀತಿಯ ಶಕ್ತಿಯನ್ನು ನೆನೆದು ಚಿರಂತನ ಎಂಬ ಕವಿತೆಯಲ್ಲಿ ಕವಿ ಹೀಗೆ ಹೇಳುತ್ತಾರೆ.

ಆ ಮುಖಾ ಈ ಮುಖಾ
ಯಾವ ಗಂಡೊ ಯಾವ ಹೆಣ್ಣೊ
ಪ್ರೀತಿಯೆಂಬ ಚುಂಬಕಾ ಕೂಡಿಸಿತ್ತು[೧೦]

ಬೇಂದ್ರೆಯವರು ಬರೆದ ಅದ್ಭುತ ಒಲವ ಕವಿತೆ ನಾನು ಬಡವಿ, ಕವಿತೆಯುದ್ದಕ್ಕೂ ಒಲವನ್ನು ಚಿತ್ರಿಸಿರುವ ರೀತಿ ಅಮೋಘ. ಕವಿತೆಯ ಸಾಲುಗಳು ಹೀಗಿವೆ:

ನಾನು ಬಡವಿ ಆತ ಬಡವ
ಒಲವೆ ನಮ್ಮ ಬದುಕು
ಬಳಸಿಕೊಂಡೆವದನೆ ನಾವು
ಅದಕು ಇದಕು ಎದಕು[೧೧]

ಹೃದಯ ಶ್ರೀಮಂತಿಕೆಯಿಂದ ಬಾಳುವ ದಂಪತಿಗಳಿಗೆ ಬಡತನ ಎಂದೂ ಅಡ್ಡಿ ಉಂಟು ಮಾಡದು. ಒಲವಿನ ಒರತೆ ಬತ್ತಿದಾಗ ಮಾತ್ರ ಬದುಕು ಖಾಲಿ ಖಾಲಿ ಎನ್ನಿಸಬಹುದೇ ಹೊರತು ಒಲವು ಜೊತೆಗಿದ್ದರೆ ಅದು ಬದುಕನ್ನೇ ಗೆಲುವಾಗಿಸುತ್ತದೆ ಎನ್ನುವುದಕ್ಕೆ ಬೇಂದ್ರೆಯವರ ಕವಿತೆ ಸಾಕ್ಷಿಯಾಗಿದೆ.

ದಾಂಪತ್ಯದಲ್ಲಿ ಬಂಗಾರ ಒಡವೆಗಳು ಮುಖ್ಯವಲ್ಲ ಹಾಗೂ ಶಾಶ್ವತವೂ ಅಲ್ಲ. ಜೊತೆಗೆ ಅವುಗಳ ನೆನಪು ದಿನಗಳವರೆಗೆ ಹಸಿಯಾಗಿರುತ್ತದೆ. ಆದರೆ ಬೇಂದ್ರೆ ಇವುಗಳನ್ನು ಮೀರಿ ಅನುರಾಗ ನೀಡುವ ಅಪರೂಪದ ಒಡವೆ, ಚಿನ್ನಗಳತ್ತ ತಮ್ಮ ಒಲವನ್ನು ತೋರಿದ್ದಾರೆ.

ಆತ ಕೊಟ್ಟ ವಸ್ತು ಒಡವೆ
ನನಗೆ ಅವಗೆ ಗೊತ್ತು
ತೋಳುಗಳಿಗೆ ತೋಳುಬಂದಿ
ಕೆನ್ನೆ ತುಂಬ ಮುತ್ತು[೨]

ಮಾನವ ಮಾಡಿದ ವಸ್ತುಗಳಿಗೆ ಬೆಲೆಯಿದೆ ಆದರೆ ಸೃಷ್ಟಿ ಸಹಜ ಒಲವಿನ ಆಲಿಂಗನ ಮತ್ತು ಅಧರಗಳ ಸುಖಕ್ಕೆ ಬೆಲೆಕಟ್ಟಲಾಗದು. ಹಾಗೂ ಇವುಗಳ ನೆನಪು ಸದಾ ಹಸಿರಾಗಿರುತ್ತದೆ. ಇಂತಹ ನೆನಪುಗಳು ದಾಂಪತ್ಯ ಜೀವನವನ್ನು ಬೆಚ್ಚಗಿರಿಸುತ್ತವೆ. ಇವು ಸುಖದ ಸೋಪಾನದ ಹೆಬ್ಬಾಗಿಲುಗಳು ಎಂದರೆ ಅತಿಶಯೋಕ್ತಿ ಎನಿಸಲಾರದು. ಇವುಗಳಿಂದಲೂ ದಾಂಪತ್ಯ ಯೋಗದ ಸಾಧನೆ ಹಾಗೂ ಸಿದ್ಧಿ ಸಾಧ್ಯ. ದಾಂಪತ್ಯ ಯೋಗದ ಸಾಧನೆ ಹಾಗೂ ಸಿದ್ಧಿ ಎನ್ನುವುದು ಬೇಂದ್ರೆಯವರ ಒಲವಿನ ಸಿದ್ಧಾಂತಗಳಲ್ಲಿ ಒಂದಾಗಿದ್ದು ಇದನ್ನು ಪ್ರತಿಯೊಬ್ಬ ಪತಿ-ಪತ್ನಿಯರು ಅಳವಡಿಸಿಕೊಳ್ಳಬೇಕಾದ ಅಗತ್ಯವಿದೆ. ಬೇಂದ್ರೆಯವರ ಸಿದ್ಧಾಂತವು ಸಾರ್ವಕಾಲಿಕ ಸತ್ಯವೂ ಆಗಿದೆಯೆನಿಸುತ್ತದೆ.

ಪ್ರೇಮ ಕವಿ ಎಂದೇ ಕನ್ನಡ ಸಾಹಿತ್ಯಪ್ರಿಯರಿಗೆ ಕೆ.ಎಸ್.ನ ಪರಿಚಿತರಾದವರು. ಮೊದಲ ಕವನ ಸಂಕಲನ 'ಮೈಸೂರು ಮಲ್ಲಿಗೆ'ಯ ಮೂಲಕ ಪ್ರೀತಿಯ ಕಂಪನ್ನು ಕನ್ನಡ ಕಾವ್ಯ ಸಾರಸ್ವತ ಲೋಕಕ್ಕೆ ಹರಡಿದರು. ಮೈಸೂರು ಮಲ್ಲಿಗೆ ಕವನ ಸಂಕಲನದ ಹೆಚ್ಚು ಕವಿತೆಗಳು ದಾಂಪತ್ಯ ಪ್ರೇಮ ಗೀತೆಗಳೇ ಆಗಿವೆ. ಪ್ರೇಮದ ಕಂಪನ್ನು ಹರಡಿದ್ದಕ್ಕೋ ಏನೋ ಈ ಕವನ ಸಂಕಲನ ಇಪ್ಪತ್ತೆರಡಕ್ಕೂ ಹೆಚ್ಚಿನ ಮುದ್ರಣಗಳನ್ನು ಕಂಡಿದೆ. ಈ ಸಂಕಲನವು ಕೆ.ಎಸ್.ನ ಅವರನ್ನು ಕೀರ್ತಿಯ ಉತ್ತುಂಗಕ್ಕೇರಿಸುವಲ್ಲಿ ಸಹಕಾರಿಯಾಯಿತು.

ಕೆ.ಎಸ್.ನ ಅವರ ಕಾವ್ಯ ಹೆಚ್ಚಾಗಿ ಕಲ್ಪಿತವಾದದ್ದಲ್ಲ. ಅಂತೆಯೇ ಕಾವ್ಯದಲ್ಲಿ ಅಭಿವ್ಯಕ್ತವಾಗಿರುವ ಒಲವು ಅನನ್ಯ ದಾಂಪತ್ಯದ ಅಪಾರ ಅನುಭವದಿಂದ ಕೂಡಿರುವಂಥದ್ದಾಗಿದೆ. ಕೆ.ಎಸ್.ನ ಅವರ ಒಲವ ಕವಿತೆಗಳನ್ನು ಓದುತ್ತಿದ್ದರೆ ಅವು ನಮ್ಮ ನಿಮ್ಮ ಬದುಕಿನ ನಿತ್ಯದ ಸಂಗತಿಗಳೇನೋ ಅನ್ನುವಷ್ಟು ಸಹಜವಾಗಿವೆ ಹಾಗೂ ಕೆ.ಎಸ್.ನ. ಅವರೂ ಕೂಡ ಜೀವನದ ನೈಜತೆಯನ್ನು ತಮ್ಮ ಕಾವ್ಯದಲ್ಲೂ ಉಳಿಸಿಕೊಂಡಿದ್ದಾರೆ.

ನವಿಲೂರಿನೊಳಗೆಲ್ಲ ನೀನೆ ಬಲು ಚೆಲುವೆ

ಅದಕೆ ನಮ್ಮಿಬ್ಬರಿಗೆ ನಾಳೆಯೇ ಮದುವೆ ||
ಉಟ್ಟ ರೇಸಿಮೆಗಿಂತ ನಿನ್ನ ಮೈ ನುಣುಪು;
ಬೆಟ್ಟದರಗಿಳಿಗಿಂತ ನಿನ್ನ ನುಡಿ ಇಂಪು;
ತುಂಬು ಹರೆಯದ ಹುಡುಗಿ ನೀನೊಲುಮೆಗೀಡು:
ನಂಬಿ ನನ್ನನು ವರಿಸಿ ಸಂತಸದಿ ಬಾಳು
ನವಿಲೂರಿನೊಳಗೆಲ್ಲ......[೧೩]

ಕವಿತೆಗಳಲ್ಲಿ ಬರುವ ಸರಳ ಪದಗಳ ಬಳಕೆಯು ಕೂಡ ಕವಿತೆಯ ಸೊಬಗನ್ನು ಹೆಚ್ಚಿಸಿವೆ. ಗಮನಿಸಬೇಕಾದ ಇನ್ನೊಂದು ಮುಖ್ಯ ಸಂಗತಿಯೆಂದರೆ ಕೆ.ಎಸ್.ನ ಕವಿತೆಗಳಲ್ಲಿ ಕಂಡುಬರುವುದು ದೇಶಿಯತೆಯ ಒಲವು. ಇಲ್ಲಿ ಭಾರತದೇಶದ ಸಂಪ್ರದಾಯಕ್ಕನುಗುಣವಾಗಿ ನಡೆವ ಭಾರತೀಯ ನಾರಿಯು ಕಣ್ಮುಂದೆ ಬರುತ್ತಾಳೆ.

ಹಸುರು ಸೀರೆಯನ್ನುಟ್ಟು, ಕೆಂಪು ಬಳೆಗಳ ತೊಟ್ಟು
ತುಂಬುದನಿಯಲಿ ಕರೆವಳೆನ್ನ ಚೆಲುವೆ
ಹಣೆಯನಾಳುವುದವಳ ಕುಂಕುಮದ ನಿಡು ಬಟ್ಟು
ಲಕ್ಷ್ಮಿಯವಳೆನ್ನ ಮನೆಗೆ
ನಮಗಿದುವೆ ಸೊಗಸು ಬದುಕಿನ ಬಣ್ಣಗಳ ಸಂತೆ
ನಮಗಿಲ್ಲ ನೂರು ಚಿಂತೆ
ನಾವು ಗಂಧರ್ವರಂತೆ[೧೪]

ಹಸಿರು ಸೀರೆ, ಕೆಂಪು ಬಳೆ, ಕುಂಕುಮದ ನಿಡುಬಟ್ಟು ಇವು ನಮ್ಮ ದೇಶದ ಸಂಪ್ರದಾಯದ ಆಚರಣೆಯ ಸಂಕೇತವಾಗಿವೆ. ದೇಶವನ್ನು ಪ್ರೀತಿಸುವ ರಾಷ್ಟ್ರಪ್ರೇಮ ಜೊತೆಗೆ ಪತ್ನಿಯನ್ನು ಪ್ರೀತಿಸುವ ದಾಂಪತ್ಯ ಪ್ರೇಮಗಳೆರಡು ಸಮ್ಮಿಳಿತಗೊಂಡಿರುವುದನ್ನು ಇಲ್ಲಿ ಕಾಣಬಹುದು! ಬದುಕು ಯಾಂತ್ರಿಕವಾಗುತ್ತಿರುವ ಆಧುನಿಕ ದಿನಮಾನಗಳಲ್ಲಿ ಒಲವೆಂಬುದು ಮರೀಚಿಕೆಯಾಗುತ್ತಿರುವುದು ವಿಷಾದದ ಸಂಗತಿ. ಪ್ರೀತಿಸಲು ಪುರುಸೊತ್ತಿಲ್ಲದ, ಎಲ್ಲಿಯೂ ನಿಲ್ಲದೇ ಓಡುವ ಕುದುರೆ ಓಟದ ದುರಂತ ಬದುಕಿನ ಕಾಲವಿದು.

ಅತ್ತು ಸತ್ತು ಹೋಹ ಬದುಕು
ನೆತ್ತಿ ತುಂಬಿ ಜೀವಕಳೆಯ
ಮುತ್ತನಿಟ್ಟು ರೆಪ್ಪೆಯೆತ್ತಿ
ಕಣ್ಣಿನೊಳಗೆ ದೀಪ ಹಚ್ಚಿ
ಎದೆಯ ಹೊರೆಯನಿಳಿಸಿ, ಮೇಲೆ
ಬರುವ ನಗುವೆ ಬದುಕ ಬೆಲೆ

ನಕ್ಕರೆ ನಗಬಲ್ಲುದಿಳೆ[೧೫]

ಕವಿ ಹೇಳಿದಂತೆ ಅತ್ತು ಸತ್ತು ದಿಕ್ಕೆಟ್ಟು ಹೋಗುವ ಈ ಬದುಕಿನಲ್ಲಿ ನಗುವ ಮಾತು ಕಷ್ಟ ಸಾಧ್ಯ! ಕಣ್ಣಿನೊಳಗೆ ದೀಪ ಹಚ್ಚಿ, ಮುತ್ತನಿಟ್ಟು ನಕ್ಕು ಎದೆಯ ಹೊರೆಯನಿಳಿಸು ಎನ್ನುವ ಕವಿಯ ಆಮಂತ್ರಣವು ಒಲವಿಂದ ಬದುಕು ಸಿಂಗಾರಗೊಳ್ಳುವ ಬಗೆಯನ್ನು ಸೂಚಿಸುತ್ತದೆ. ಒಲವು ಬದುಕಿನ ಜೀವಕಳೆ. ಒಲವಿಲ್ಲದಿದ್ದಲ್ಲಿ ಬದುಕು ಕಳೆಹೀನವಾಗುತ್ತದೆ. ಅರ್ಥಹೀನವಾಗುತ್ತದೆಂಬುದು ಇಲ್ಲಿನ ತಾತ್ಪರ್ಯವಾಗಿದೆ.

ಕೆ.ಎಸ್.ನ ಕಾವ್ಯಗಳಲ್ಲಿ ಚಿತ್ರಿತನಾಗಿರುವ ನಾಯಕನು ನೇರ ನಡೆ-ನುಡಿವುಳ್ಳವನಾಗಿದ್ದಾನೆ. ಸಂಸಾರದಲ್ಲಿ ಸಹಜವಾದ ಪ್ರೇಮ ಕಾಮಗಳನ್ನು ತೀರಾ ಖಾಸಗೀ ರಹಸ್ಯಗಳೇನೋ ಎಂಬ ಭಾವದಿಂದೀಚೆ ಬಂದು ಅವು ಸಹಜ ಭಾವವೆಂಬಂತೆ ಅಷ್ಟೇನೂ ಮಡಿವಂತಿಕೆ ತೋರದೆ,

ಮದುವೆಯಾಗಿ ತಿಂಗಳಿಲ್ಲ
ನೋಡಿರಣ್ಣ ಹೇಗಿದೆ!
ನಾನು ಕೂಗಿದಾಗಲೆಲ್ಲ
ಬರುವಳೆನ್ನ ಶಾರದೆ!
ಹಿಂದೆ ಮುಂದೆ ನೋಡದೆ
ಎದುರು ಮಾತನಾಡದೆ[೧೬]

ಎಂದು ಬಿಚ್ಚುಮನಸ್ಸಿನಿಂದಲೇ ಎಲ್ಲವನ್ನು ಸಜ್ಜನಿಕೆಯಿಂದಲೇ ಹೇಳುವ ಮನೋಸ್ಥೈರ್ಯವುಳ್ಳವನಾಗಿದ್ದಾನೆ. ಹಿಂದೆ ಮುಂದೆ ನೋಡದೆ ಎದುರು ಮಾತನಾಡದೆ ಕೂಗಿದಾಗಲೆಲ್ಲಾ ಸಖಿ ಬರುವುದು ಸಖನ ಮೇಲಿನ ಒಲವಿನಿಂದಾಗಿಯೇ ಹೊರತು ಅವನ ಬಗೆಗಿರುವ ಹೆದರಿಕೆಯಿಂದಲ್ಲ. ಆದಾಗ್ಯೂ ಒಲವಿರುವಲ್ಲಿ ಹೆದರಿಕೆ, ಭಯಗಳ ಮಾತು ಬರುವುದಾದರೂ ಎಲ್ಲಿಂದ? ಒಲವಿನ ಸಾಮರಸ್ಯತೆಯ ಶರಧಿಯಲ್ಲಿ ಬದುಕಿನ ದೋಣಿ ಹೇಗೆ ಹಾಯಾಗಿ ತೇಲುತ್ತಿದೆ ಎಂಬುದನ್ನು ಇಲ್ಲಿ ನಾವು ಕಾಣಬಹುದು!

ಒಲವೆಂಬುದು ಕೇವಲ ಮಾನವ ಸಮುದಾಯದ ಸ್ವತ್ತಲ್ಲ. ಅದು ಪ್ರಕೃತಿಯ ಕೂಸು. ಅದು ಸರ್ವಾಂತರ್ಯಾಮಿ! ಪ್ರೀತಿ ಅಂಕುರತೆಗೆ ಪ್ರಕೃತಿಯ ಪಾತ್ರವು ಅಗಾಧ. ಸಂಜೆ ಬಾನಿನಲ್ಲಿ ಮೂಡಿದ ಸೂರ್ಯನ ವರ್ಣಮಯ ಚಿತ್ತಾರ, ಸಂಜೆ ಅರಳುವ ಮಲ್ಲಿಗೆ ಕಂಪು, ಬೀಸುವ ತಂಗಾಳಿ ಎಂತವರಲ್ಲೂ ಒಂದು ಬಗೆಯ ಒಲವನ್ನು ಆಹ್ಲಾದವನ್ನು ಹುಟ್ಟು ಹಾಕುತ್ತದೆ. ಅದಕ್ಕೆ ಕವಿ ಕವಿತೆಯೊಂದರಲ್ಲಿ ತನ್ನ ಸಖಿಗೆ ಸಂಜೆಯಾಗುವುದೆಂದಿಗೆ? ಎಂದು ಪಕೃತಿ ಚಿತ್ರಣಗಳೊಂದಿಗೆ, ಸಂಗತಿಗಳೊಂದಿಗೆ ಒಲವಿನ ಆಹ್ವಾನ ನೀಡ ಹೊರಟಿದ್ದಾನೆ.

ಸಂಜೆಗರಳುವುದಿಲ್ಲಿ ಮಲ್ಲಿಗೆ
ಮೇಲೆ ನಗುವುದು ಸಂಜೆ ತಾರೆಗೆ:

ಬೀಸುವುದು ತಂಬೆಲರು ಮೆಲ್ಲಗೆ
ಆಗ ನಿನ್ನನು ಕರೆವೆನು.
ತುಂಬು ಹೂಗಳ ಮುಡಿದು ಬರುವೆಯ?
ಹಂಬಲಿನ ಹೊಳೆ ತರುವೆಯ?[೧೭]

ದಾಂಪತ್ಯ ಜೀವನ ಮಾನವ ಬದುಕಿನ ಒಂದು ಪ್ರಮುಖ ಘಟ್ಟ. ದಾಂಪತ್ಯವೆಂಬುದು ಬದುಕ ಬೇಸಿಗೆಯಲ್ಲಿ ಕಂಡ ಅಪರೂಪದ ಜೀವ ಸೆಲೆ. ಇಂತಹ ದಾಂಪತ್ಯ ಗೀತೆ ಒಲವಿಂದ ಕೂಡಿದರಂತೂ ಸ್ವರ್ಗವೇ ಧರೆಗಿಳಿದಂತೆ. ದಾಂಪತ್ಯ ಜೀವನವನ್ನು ತುಂಬು ಅಕ್ಕರೆಯಿಂದ ಸುಖಿಸಿದವರು ಕವಿ ಕೆ.ಎಸ್.ನ.

ಹೆಂಡತಿಯೊಬ್ಬಳು ಮನೆಯೊಳಗಿದ್ದರೆ
ನನಗದೆ ಕೋಟಿ ರೂಪಾಯಿ!
ಹೆಂಡತಿಯೊಬ್ಬಳು ಹತ್ತಿರವಿದ್ದರೆ
ನಾನೂ ಒಬ್ಬ ಸಿಪಾಯಿ.[೧೮]

ಗಂಡ-ಹೆಂಡತಿ ಕವಿತೆಯಲ್ಲಿನ ಈ ಸಾಲುಗಳನ್ನೇ ನೋಡಿ. ಹಣದ ಅಮಲಿನಲ್ಲಿ ಮುಳುಗಿದ ಜಗತ್ತಿನಲ್ಲಿ ಮಾನವ ಸಂಬಂಧಗಳಿಗೆ ಬೆಲೆಯೇ ಇಲ್ಲದಂತಾಗಿದೆ. ಕವಿ ತನ್ನ ಪತ್ನಿ ಮನೆಯಲ್ಲಿರುವುದೇ ತನಗೆ ಕೋಟಿ ರೂಪಾಯಿ ಎಂಬ ಭಾವ ಅಮೋಘ! ಹಣದ, ಘನತೆಯ, ಭೇದ-ಭಾವಗಳ ಸಣ್ಣ ಸುಳಿವು ಕೂಡ ಇಲ್ಲಿ ಸುಳಿಯುವುದಿಲ್ಲ. ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಯ ಸಮಾಜದಲ್ಲಿ ಹೆಣ್ಣನ್ನು ಗುಲಾಮಿಯಂತೆ ಕಂಡ ಪುರುಷ ಉದಾಹರಣೆಗಳು ಸಾಕಷ್ಟಿರುವ ಈ ಕಾಲದಲ್ಲೂ ಹೆಂಡತಿ ಹತ್ತಿರವಿದ್ದರೆ ತಾನೂ ಒಬ್ಬ ಸಿಪಾಯಿ ಎಂದು ಹೇಳುವ ಕವಿಯ ಒಲವಿನ ಆಳವನ್ನು ಊಹಿಸಲು ಸಾಧ್ಯವೇ? ಪ್ರೇಮವೆ ಹಾಗೆ ಅದು ಉದ್ದಗಲ ಆಳಗಳ ಅಳತೆಗೆ ನಿಲುಕದು. ಪ್ರೀತಿಯನ್ನು ಪ್ರೀತಿಯಿಂದ ಮಾತ್ರ ಗೆಲ್ಲಬಹುದೆಂಬುದು ಮಾತ್ರ ವಸ್ತು ಸತ್ಯವಾಗಿದೆ.

ಹೆಂಡತಿಯೊಂದಿಗೆ ಬಡತನ, ದೊರೆತನ
ಏನೂ ಭಯವಿಲ್ಲ
ಹೆಂಡತಿಯೊಲುಮೆಯ ಭಾಗ್ಯವನರಿಯದ
ಗಂಡಿಗೆ ಜಯವಿಲ್ಲ.[೧೯]

ಪ್ರತಿಪುರುಷನ ವಿಜಯದ ಹಿಂದೆ ಮಹಿಳೆಯೊಬ್ಬಳು ಇರುತ್ತಾಳೆಂಬುದು ಬಹುಶಃ ಇದಕ್ಕೆ ಇರಬೇಕು. ಗಂಡು ಹೊರ ಜಗತ್ತಿನಲ್ಲಿ ದುಡಿದು ಬರುವವನು. ಅವನು ಹೊರ ಜಗತ್ತಿನಲ್ಲಿ ಯಶಸ್ಸನ್ನು ಸಾಧಿಸಬೇಕಾದರೆ ಹೆಂಡತಿಯ ಒಲವು ಪ್ರೋತ್ಸಾಹ, ಸಹಕಾರ ಅಗತ್ಯವಾಗಿದೆ. ಹೆಂಡತಿಯ ಒಲವನ್ನು ಗಳಿಸುವುದು ಕೂಡ ಒಂದು ಭಾಗ್ಯವೆಂದೇ ಕವಿ ಇಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಕೆ.ಎಸ್.ನ. ಅವರು ಕೇವಲ ದಾಂಪತ್ಯ ಪ್ರೇಮಗೀತೆಗಳನ್ನಷ್ಟೇ ಬರೆಯಲಿಲ್ಲ. ಜೊತೆಗೆ ಪ್ರೇಮದ ವಿವಿಧ ಸ್ವರೂಪವನ್ನು ತಮ್ಮ ಕವಿತೆಗಳಲ್ಲಿ ಚಿತ್ರಿಸಿರುವುದನ್ನು ನಾವು ಕಾಣಬಹುದು.

ನಿಜದ ಸಂತಸದಲ್ಲಿ ಬಿರಿದ ಮಲ್ಲಿಗೆಯಿಂದ
ಬರುವ ಕಂಪಿನ ಹೆಸರು ಪ್ರೇಮವೆಂದು;
ನೀಲಾಂತರಿಕ್ಷದಲಿ ಹೊಳೆವ ನಕ್ಷತ್ರಗಳ
ಕಣ್ಣ ಸನ್ನೆಯ ಹೆಸರು ಪ್ರೇಮವೆಂದು[೨೦]

ಪ್ರಕೃತಿಯನ್ನು ಆರಾಧಿಸುವ, ಪ್ರೀತಿಸುವ ಕವಿಗೆ ಮಲ್ಲಿಗೆಯಿಂದ ಬರುವ ಕಂಪು ಕೂಡ ಪ್ರೇಮವೆಂದೇ ತೋರುತ್ತದೆ. ಆಕಾಶದಲ್ಲಿನ ತಾರೆಗಳ ನೋಟವು ಕೂಡ ಪ್ರೀತಿಯ ಪ್ರತಿರೂಪಗಳಂತೆ ಗೋಚರಿಸುತ್ತವೆ. ಜಗದ ಎಲ್ಲ ವಿದ್ಯಮಾನಗಳು ಪರೋಕ್ಷವಾಗಿ ಪ್ರೀತಿಯ ಪರಿಧಿಯಲ್ಲಿಯೇ ಜರುಗುತ್ತವೆ ಏನೋ ಎಂಬ ಬೆರಗು ಇಲ್ಲಿ ವ್ಯಕ್ತವಾದಂತಿದೆ.

ಜಿ. ಎಸ್. ಶಿವರುದ್ರಪ್ಪನವರು ಮಾನವೀಯ ಮೌಲ್ಯಗಳಿಗೆ ಹೆಚ್ಚು ಬೆಲೆ ಕೊಟ್ಟ ವಿಶಾಲ ಮನೋಭಾವವುಳ್ಳ ಕವಿ. ಸೌಂದರ್ಯೋಪಾಸಕರಾಗಿರುವ ಜಿ. ಎಸ್. ಎಸ್. ರು ಅಖಂಡ ಜೀವನ ಪ್ರೀತಿ ಉಳ್ಳವರಾಗಿದ್ದಾರೆ. ಹಾಗೂ ಅದನ್ನೇ ತಮ್ಮ ಕವಿತೆಗಳಲ್ಲಿ ಅಭಿವ್ಯಕ್ತಿಸುತ್ತಾ ಬಂದಿದ್ದಾರೆ. "ಕುವೆಂಪುರವರ ಜೀವನ ಹಾಗೂ ಕವಿತೆಯ ಪ್ರಭಾವ ಜಿ. ಎಸ್. ಎಸ್. ರವರ ಮೇಲಾಗಿದೆ".[೨೧] ಎಂದು ಡಾ. ದೊಡ್ಡರಂಗೇಗೌಡರು ಅಭಿಪ್ರಾಯಪಟ್ಟಿರುವುದೂ ಇದೆ.

ಪ್ರೀತಿಸುವ ಮನಗಳು ಜಗದಲ್ಲಿ ಲೆಕ್ಕಕ್ಕೆ ಸಿಗದಷ್ಟಿವೆ. ಆದರೆ ಆ ಎಲ್ಲ ಜೀವಗಳಿಗೂ ಪ್ರೀತಿ ಎಂದರೇನು ಎಂಬ ಪ್ರಶ್ನೆಗೆ ಉತ್ತರ ತಿಳಿದಿರುವುದಿಲ್ಲ. ತಿಳಿದರೂ ಅದು ಬಾಯಿ ಮಾತಿನಲ್ಲಿ ಹೇಳುವಂತದ್ದು ಸುಲಭವೂ ಅಲ್ಲ. ಪ್ರೀತಿಸುವಾಗ ಪ್ರೀತಿ ಎಂದರೇನು? ಎಂಬ ಪ್ರಶ್ನೆ ಎಷ್ಟೋ ಪ್ರೇಮಿಗಳಿಗೆ ಕಾಡಿದ್ದೂ ಉಂಟು. ಹೀಗೆ ಕಾಡುವುದು ಕುತೂಹಲವು ಔಚಿತ್ಯಪೂರ್ಣವೂ ಹೌದೆನಿಸುತ್ತದೆ. ಆದರೆ ಬಹುಜನರು ಇದಕ್ಕೆ ಉತ್ತರ ನೀಡಲು ತಡಕಾಡುತ್ತಾರೆ, ತೊಳಲಾಡುತ್ತಾರೆ! ಕವಿಯು ಒಮ್ಮೆ ತನ್ನ ಸಂಗಾತಿ ಕೇಳುವ ಪ್ರೀತಿಯೆಂದರೇನು ಹೇಳಿ ಎಂಬ ಪ್ರಶ್ನೆಗೆ ಕ್ಷಣದಲ್ಲಿ ಉತ್ತರಿಸಲಾಗದೆ ತೊಳಲಾಡಿದ್ದೂ ಉಂಟು. ಅಂಥ ಒಂದು ಚಿತ್ರಣ ಪ್ರಶ್ನೆ ಎಂಬ ಕವಿತೆಯಲ್ಲಿದೆ.

ಪ್ರೀತಿ ಎಂದರೇನು ಎಂದು
ನೀನು ನನ್ನ ಕೇಳಿದೆ
ನಾನು ಮಿಡುಕಿ ತಡಕಾಡಿದೆ
ಉತ್ತರ ಕೊಡಲಾರದೆ[೨೨]

ಸಂಗಾತಿ ಪ್ರಶ್ನೆ ಕೇಳಿದ ಕೂಡಲೇ ಅವಕ್ಕಾದ ಕವಿ ತನ್ನ ಕಲ್ಪನೆಯ ಕುದುರೆಯನ್ನೇರಿ ಪ್ರಕೃತಿಯ ಮೊರೆ ಹೋಗುತ್ತಾನೆ ಉತ್ತರ ಹುಡುಕಲು! ಹೀಗೆ ಸವಾರಿ ಮಾಡುತ್ತಲೇ:

ಪ್ರೀತಿ ಎಂದರೇನು ಹೇಳಿ
ಆಕಾಶವ ಕೇಳಿದೆ
ಸೂರ್ಯ ಚಂದ್ರ ಚಿಕ್ಕೆ ಬಳಗ
ಮಾತಾಡದೆ ತಿರುಗಿವೆ

ಹೊಳೆಗಳೆಲ್ಲ ಕಡಲಿಗೋಡಿ
ಅಪ್ಪಿಕೊಂಡು ಕರಗಿವೆ.
ಮೋಡವೆಲ್ಲ ಕೆಳಗೆ ಸುರಿದು
ನೆಲಕೆ ಮುತ್ತನೊತ್ತಿವೆ.

ಸಿಂಗಾರದ ಹೂವ ಮುಡಿದು
ಮರಗಿಡಗಳು ನಿಂತಿವೆ.
ಬಂಗಾರದ ರಂಗನೆರಚಿ
ಬೈಗು ಬೆಳಗು ಆಡಿವೆ.

ತಾಯಿ ಕೊಟ್ಟ ಮೊಲೆ ಹಾಲಿನ
ರುಚಿಯಲಿ ಮಗು ಬೆಚ್ಚಗೆ
ಗಂಡು ಹೆಣ್ಣಿನಪ್ಪುಗೆಯಲಿ
ಸುತ್ತ ಎಲ್ಲ ಹಚ್ಚಗೆ![೨]

ಈ ಎಲ್ಲ ವಿದ್ಯಮಾನಗಳನ್ನು ವೀಕ್ಷಿಸಿದ ಕವಿ ತಾನು ಕಂಡ ಎಲ್ಲ ಸಂಗತಿಗಳಲ್ಲೂ ಪ್ರೀತಿಯ ಛಾಯೆ ದಟ್ಟವಾಗಿರುವುದನ್ನು ಕಂಡು ಭಾವಪರವಶನಾಗುತ್ತಾನೆ. ಪ್ರೀತಿಯ ದಾರಿಯಲ್ಲೇ ಬದುಕನ್ನು ಸವೆಸಿದರೂ ಕೂಡ ಪ್ರೀತಿ ಎಂದರೇನು ಎಂದು ಕೇಳಿದರೆ ಉತ್ತರಿಸುವುದು ಕಷ್ಟ. ಇದನ್ನು ಪ್ರೇಮ ಮರ್ಮವೆಂತಲೂ ನಾವು ಕರೆಯಬಹುದು. ಪ್ರಸ್ತುತ ಕವಿತೆಯಲ್ಲಿ ತಾಯಿಯ ವಾತ್ಸಲ್ಯ ಪ್ರೇಮ, ನಿಸರ್ಗ ಪ್ರೇಮ, ಗಂಡು ಹೆಣ್ಣಿನ ಅಪ್ಪುಗೆಯ ಮಾನವ ಸಹಜ ಪ್ರೇಮ ಅನಾವರಣಗೊಂಡಿವೆ. ಪ್ರಸ್ತುತ ಕವಿತೆಯಲ್ಲಿನ ಸೂರ್ಯ ಚಂದ್ರ ಚಿಕ್ಕೆಗಳ ಮುನಿಸು ಕೂಡ ಇಲ್ಲಿ ಮುಖ್ಯವಾದ ಒಂದು ಅಂಶವನ್ನು ನಮ್ಮೆದುರು ತೆರೆದಿಡುತ್ತದೆ. ಅಂದರೆ ಪ್ರೀತಿ ವ್ಯಾಖ್ಯಾನ ಸುಲಭವಲ್ಲ. ಪ್ರೇಮ ಭಾಷೆಯಾಚೆಗಿನದು. ಅದು ಭಾವ ಸಂಬಂಧಿಯಾದುದು. ಭಾವಕ್ಕೆ ಮಾತ್ರ ನಿಲುಕುವಂತದ್ದು. ಒಂದು ವೇಳೆ ಭಾಷೆಯ ಮೂಲಕ ಅದು ಅಭಿವ್ಯಕ್ತಗೊಂಡರೂ ಅದು ಪೂರ್ಣವಾಗುವುದಿಲ್ಲ. ನಂತರವೂ ಪ್ರೇಮದ ಬಗೆಗೆ ಹೇಳುವುದು ಏನೋ ಉಳಿದಿದೆಯೆಂಬ ಅಸಮಾಧಾನದ ಭಾವ ನಮ್ಮನ್ನು ಕಾಡುತ್ತದೆ ಎಂಬುದು ಮುಖ್ಯವಾಗುತ್ತದೆ.

ಕವಿ ಪ್ರಸ್ತುತ ತನ್ನ ಕಾವ್ಯದಲ್ಲಿ ನೀಡಿದ ಎಲ್ಲ ಚಿತ್ರಣಗಲ್ಲೂ ಪ್ರೀತಿ ಐಕ್ಯವಾಗಿದೆ. ಆದರೆ ಅದು ಅಮೂರ್ತ ಸ್ವರೂಪವನ್ನು ತಾಳಿದೆ. ಒಳಗಣ್ಣು ತೆರೆದು ನೋಡಿದರೆ ಅದು ಖಂಡಿತವಾಗಿಯೂ ತನ್ನ ರೂಪವನ್ನು ನೆಮ್ಮೆದುರು

ತೆರೆದಿಡುತ್ತದೆ. ಕವಿ ಇಲ್ಲಿ ಒಳಗಣ್ಣು ತೆರೆದು ನೋಡಿದ್ದಾರೆ. ಹಾಗಾಗಿಯೇ ಪ್ರಕೃತಿ ವ್ಯಾಪಾರದಲ್ಲಿನ ಪ್ರೇಮವನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ. ಪ್ರೀತಿಯ ಮರ್ಮವನ್ನರಿತ ಕವಿ ಕೊನೆಗೆ ತನ್ನ ಸಂಗಾತಿಗೆ ಪ್ರೀತಿ ಎಂದರೇನು ಹೇಳಿ ಎಂಥ ಪ್ರಶ್ನೆ ನಿನ್ನದೆ ಎಂದು ಕೇಳುತ್ತ ಹತ್ತಿರ ಬಾ ಹೇಳುತ್ತೇನೆ ಇಳಿದು ನೋಡು ನನ್ನೆದೆ ಎಂದು ಪ್ರೀತಿಯ ಸವಾಲೆಸೆಯುತ್ತಾನೆ. ಈ ಮೂಲಕ ಪ್ರೀತಿ ಎದೆಯಾಳದ ಧ್ವನಿ ಎಂಬುದನ್ನು ಸಾರಿ ಹೇಳಿದ್ದಾರೆ.

ಪ್ರೇಮ ಸಹಜ ಆದರೆ ಅದರಲ್ಲಿ ಸ್ವಾರ್ಥವೇಕೆ? ಸ್ವಾರ್ಥಮಯ ಪ್ರೇಮದಿಂದ ಯಾವ ಸಂಬಂಧಗಳು ಗಟ್ಟಿಯಾಗಿ ನಿಲ್ಲುವುದಿಲ್ಲ. ಎಲ್ಲವೂ ಕೊನೆಗೆ ಗಾಳಿಗೋಪುರವಾಗುತ್ತವೆ. ಹಾಗೆ ನೋಡಿದರೆ ಪ್ರೇಮ ಹುಟ್ಟುವುದೇ ನಂಬಿದವರ ಹಿತಕಾಯುವುದಕ್ಕೆ. ಫಲಾಪೇಕ್ಷೆಯಿಂದ ಕೂಡಿದ ಪ್ರೇಮಕ್ಕೆ ಇಲ್ಲಿ ಅಸ್ತಿತ್ವ ಇಲ್ಲ. ಪ್ರೇಮ ನಿಸ್ವಾರ್ಥಪರತೆಯಿಂದ ಕೂಡಿದ್ದು. ಪ್ರೇಮದಲ್ಲಿ ಸ್ವಾರ್ಥದ ಬಿರುಕು ಕಾಣಿಸಿಕೊಂಡರೆ ಬದುಕು ಹೇಗೆ ಕಂದರಗಳ ಆಗರವಾಗುತ್ತದೆ ಎಂಬುದನ್ನು ಕವಿ ತಮ್ಮ ಕವಿತೆಯೊಂದರಲ್ಲಿ ಚಿತ್ರಿಸಿದ್ದಾರೆ.

ಬಾಳ ಗಿರಿ ಕಂದರದ ಮೇಗಡೆ ಸ್ವಾರ್ಥದೊಲುಮೆಯ ಕತ್ತಲು
ಹಬ್ಬಿ ಮುಳುಗಿಸಿ ಎಲ್ಲ ಒಂದೇ ಎನ್ನುವ ಭ್ರಾಂತಿಯ ಬಿತ್ತಲು
ಎಂದೊ ಒಮ್ಮೆಗೆ ಮಿಂಚು ಮಿಂಚಲು, ಹಾ, ಅಗಾಧದ ಕಂದರ!
ನನಗು ನಿನಗೂ ನಡುವೆ ಹಾಸಿದೆ ಮುಗಿಲಿನಗಲದ ಅಂತರ!
....
....
ನಾನು ಅರಿತೆನು, ತಪ್ಪು ನಮ್ಮದು, ಸ್ವಾರ್ಥದೊಲುಮೆಯು ನಮ್ಮದು
ಅದಕೆ ತಳಹದಿ ಭದ್ರವಿಲ್ಲದೆ ಮುರಿದು ಬಿದ್ದಿತು ಗೋಪುರ
ಇಂಥ ವೇದನೆಯಿಂದ ಜೀವವು ಪಡೆದು ಬಾಳಿನ ಅನುಭವ
ಹಿರಿಯ ಒಲುಮೆಯನರಸಿ ನಡೆವುದು ಕಣ್ಣ ತುಂಬಿಸಿ ದಿವ್ಯವ[೨೨]

ಕವಿ ಕವಿತೆಯುದ್ದಕ್ಕೂ ಸ್ವಾರ್ಥ ಪ್ರೇಮದ ಪರಿಣಾಮಗಳನ್ನು ಸೂಕ್ಷ್ಮವಾಗಿ ತಿಳಿಸುತ್ತ ಕೊನೆಗೆ ಸಂಯಮ, ತ್ಯಾಗಪರತೆ ಒಲವನ್ನು ಜೀವಂತವಾಗಿಡುವಲ್ಲಿ ಸಹಕರಿಸುತ್ತವೆ ಎಂಬುದನ್ನು ಇಲ್ಲಿ ತಿಳಿಸಿದ್ದಾರೆ.

ದಾಂಪತ್ಯದಲ್ಲಿ ಪ್ರೇಮ ಸಮೃದ್ಧಿಯಾಗಿದ್ದರೆ ಹರಿವ ಪ್ರಣಯ ಹೊನಲಿಗೇನು ಕೊರತೆಯೇ ಸುಖದ ಸಿರಿಗೇನು ಎಲ್ಲೆಯೇ? ಕವಿ ದಾಂಪತ್ಯ ಪ್ರೇಮದಲ್ಲಿ ಮೈ ಮರತಾಗ ಅನಿರೀಕ್ಷಿತ ಪ್ರಣಯದ ಆಗಮನ ಪತಿ ಪತ್ನಿಯರಿಬ್ಬರ ಮೈಮನಗಳಿಗೂ ಉಲ್ಲಾಸ ತಂದಿದೆ. ಅದು ಹೊಸದೊಂದು ಚೈತನ್ಯಕ್ಕೆ ದಾರಿ ಮಾಡಿದೆ. ಈ ಭಾವ ಮುತ್ತುಗಳ ಕೆಲ ತುಣುಕುಗಳು 'ಪ್ರಣಯ' ಎಂಬ ಕವಿತೆಯಲ್ಲಿವೆ.

ನೀನು ಮುಗಿಲು ನಾನು ನೆಲ
ನಿನ್ನ ಒಲವೆ ನನ್ನ ಬಲ

ನಮ್ಮಿಬ್ಬರ ಮಿಲನದಿಂದ
ಉಲ್ಲಾಸವೆ ಶ್ಯಾಮಲ!

ನಾನು ಎಳೆವೆ, ನೀನು ಮಣಿವೆ
ನಾನು ಕರೆವೆ, ನೀನು ಸುರಿವೆ
ನಮ್ಮಿಬ್ಬರ ಒಲುಮೆ ನಲುಮೆ
ಜಗಕಾಯಿತು ಹುಣ್ಣಿವೆ![೨೫]

ಅಹಂಭಾವ, ಸ್ವಾರ್ಥ, ದುರಾಸೆ ಮುಂತಾದ ದುರ್ಗುಣಗಳಿಂದ ಬದುಕು ದುರ್ಬರವಾಗುತ್ತಿರುವುದು ಆದಿಯಿಂದಲೂ ನಡೆದು ಬಂದ ಒಂದು ಪ್ರಕ್ರಿಯೆ. ಕಂದಾಚಾರ, ಧರ್ಮಾಂಧತೆ, ಜಾತೀಯತೆ ಮುಂತಾದ ಸಂಘರ್ಷಗಳಿಂದ ಬದುಕು ಬಂದೀಖಾನೆಯಾಗಿದೆ. ಬದುಕು ಮತ್ತು ಪ್ರೀತಿಯ ಮಹತ್ವವನ್ನು ತಿಳಿಸುವ ಕವಿತೆಯೊಂದನ್ನು ಕವಿ ರಚಿಸಿದ್ದಾರೆ.

ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ ಸ್ನೇಹಗಳ
ಗುರುತಿಸದಾದೆನು ನಮ್ಮೊಳಗೆ[೨೬]

ಸದಾ ಸುಖವನ್ನೇ ಅರಸುವ ಮಾನವ ಸಮುದಾಯವು ಹುಡುಕಾಟದ ಹಂಗಿನಲ್ಲೇ ತನ್ನ ಬದುಕನ್ನು ಸವೆಸುತ್ತಿದೆ. ಅನ್ವೇಷಣೆಯ ಭಾವವು ಮಾನವ ಜೀವನದ ಮೂಲ ಲಕ್ಷಣಗಳಲ್ಲಿ ಒಂದು. ಶಾಂತಿ, ನೆಮ್ಮದಿ, ಬಯಸಿ ನಿತ್ಯವು ಎಲ್ಲೋ ಇರುವ ದೇವರ ದರುಶನಕ್ಕೆ ಹೋಗುವುದು, ಜಪತಪ ಮಾಡುವುದನ್ನು ಮಾಡುತ್ತೇವೆ. ಪೂಜೆ, ಪುನಸ್ಕಾರ, ಹೋಮ ಹವನಗಳಿಗಂತು ಲೆಕ್ಕವೇ ಇಲ್ಲ. ಕೊನೆಗೆ ಶಾಂತಿ ದೊರಕುತ್ತಾ? ಎಂದು ಕೇಳಿದರೆ ಮತ್ತೂ ಏನೋ ಕೊರತೆಯ ಭಾವ ನಮ್ಮನ್ನು ಕಾಡುತ್ತದೆ. ಆದರೆ ನಾವು ಮುಖ್ಯವಾಗಿ ನಮ್ಮೊಳಗಿನ ಪ್ರೇಮ-ಸ್ನೇಹಗಳನ್ನು ಗುರುತಿಸಿದ್ದೇ ಆದರೆ ಪ್ರೀತಿ ಸ್ನೇಹಗಳೇ ದೇವರೆಂದು ಪೂಜಿಸಿದ್ದೇ ಆದರೆ ಬದುಕು ಹರ್ಷದ ಪನ್ನೀರಿನಿಂದ ತುಂಬಿ ತುಳುಕುತ್ತದೆ. ಮಾನವ ಸ್ವಭಾವ ಅಂತಹದ್ದು. ಅದು ಇಲ್ಲದುದರ ಕಡೆಗೆ ಹೆಚ್ಚು ತುಡಿಯುತ್ತದೆ. ಇದು ಸಹಜ. ಆದರೆ ಒಲವಿನ ಸಮ್ಮುಖದಲ್ಲಿ ನಮ್ಮನ್ನು ನಾವು ಅರಿಯಲು ಸನ್ನದ್ಧರಾಗಬೇಕಿದೆ ಎಂಬುದನ್ನು ಕವಿ ಸೂಕ್ಷ್ಮವಾಗಿ ತಿಳಿಸುತ್ತಾರೆ.

ಪ್ರೇಮದ ವ್ಯಾಪ್ತಿಯನ್ನು ವಿಸ್ತರಿಸಿದ ಅಖಂಡ ಪ್ರೀತಿಯ ವ್ಯಾಖ್ಯಾನದ ಕುರುಹುಗಳನ್ನು 'ಪ್ರೀತಿ ಇಲ್ಲದ ಮೇಲೆ' ಎಂಬ ಕವಿತೆಯಲ್ಲಿ ಕಾಣಬಹುದು.

ಪ್ರೀತಿ ಇಲ್ಲದ ಮೇಲೆ
ಮಾತಿಗೆ ಮಾತು ಕೂಡೀತು ಹೇಗೆ?

ಅರ್ಥ ಹುಟ್ಟೀತು ಹೇಗೆ?
ಬರೀ ಪದಕ್ಕೆ ಪದ ಜೊತೆಗಿದ್ದ ಮಾತ್ರಕೆ
ಪದ್ಯವಾದೀತು ಹೇಗೆ?
ಪ್ರೀತಿ ಇಲ್ಲದ ಮೇಲೆ

ದಕ್ಷಿಣಾಫ್ರಿಕದ ಕಗ್ಗತ್ತಲಿಗೆ
ಬೆಳಕು ಮೂಡೀತು ಹೇಗೆ?
ಸೆರೆಮನೆಯ ಕಂಬಿಯ ನಡುವೆ
ಕಮರುವ ಕನಸು ಕೊನರೀತು ಹೇಗೆ?
ಬಿಳಿ ಜನರ ಕರಾಳ ಕಪ್ಪು ಹೃದಯಕ್ಕೆ
ಕ್ರಿಸ್ತನ ಕರುಣೆ ಅರ್ಥವಾದೀತು ಹೇಗೆ?[೨೨]

ದೇಶಭಾಷೆಗಳ ಎಲ್ಲೆ ಮೀರಿದ ವಿಶ್ವ ಪ್ರೇಮದ ಪರಿಯನ್ನು ನಾವಿಲ್ಲಿ ಕಾಣಬಹುದು.

ಒಟ್ಟಾರೆಯಾಗಿ ಇಲ್ಲಿ ಅಧ್ಯಯನಕ್ಕೆ ಒಳಗು ಮಾಡಲಾಗಿರುವ ಕುವೆಂಪು, ದ.ರಾ.ಬೇಂದ್ರೆ, ಕೆ.ಎಸ್.ನರಸಿಂಹಸ್ವಾಮಿ, ಜಿ. ಎಸ್. ಶಿವರುದ್ರಪ್ಪ ಈ ಪ್ರಮುಖ ಕವಿಗಳ ಕೆಲವು ಕವಿತೆಗಳನ್ನು ಅನುಲಕ್ಷಿಸಿ ಹೇಳುವುದಾದರೆ, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಒಂದು ಮೌಲ್ವಿಕ ಪ್ರೇಮ ಮೀಮಾಂಸೆಯ ಹೆಜ್ಜೆ ಗುರುತುಗಳನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು. ಕುವೆಂಪು ಈ ಮೊದಲೇ ತಿಳಿಸಿದಂತೆ ಪ್ರಕೃತಿಯೊಂದಿಗೆ ಹೆಚ್ಚು ಒಡನಾಟವಿದ್ದುದರ ಫಲವಾಗಿ ಅವರಲ್ಲಿ ಆಧ್ಯಾತ್ಮದ ಸಸಿ ಚಿಗುರೊಡೆಯಿತೆನ್ನಬಹುದು. ಇದರ ಫಲವಾಗಿ ಪ್ರೇಮದ ಪ್ರಭೆಯ ವಿಕಸನವೂ ಆಯಿತೆನ್ನಬಹುದು. ಹಾಗೆ ನೋಡಿದರೆ ಕುವೆಂಪುರವರು ಆಧ್ಯಾತ್ಮಿಕತೆಯ ಬೆಳಕಿನಲ್ಲೇ ಪ್ರೇಮದ ಸಾರವನ್ನು ಹುಡುಕ ಹೊರಟವರು. ಪ್ರಕೃತಿ-ಆಧ್ಯಾತ್ಮಗಳಿಂದ ಸಮ್ಮಿಳಿತವಾಗಿದ್ದ ಕುವೆಂಪು ಬದುಕು ಪ್ರೇಮ ಸಾಕ್ಷಾತ್ಕಾರ ಪಡೆಯುವುದರ ಮೂಲಕ ಪೂರ್ಣತ್ವದ ಕಡೆಗೆ ಸಾಗಿತೆನ್ನಬಹುದು. ಈ ಹಿನ್ನೆಲೆಯಲ್ಲಿ ಹೇಳುವುದಾದರೆ, ಕುವೆಂಪು ಪ್ರೇಮ ಮೀಮಾಂಸೆಯು ಆಧ್ಯಾತ್ಮಿಕಾನುಭವದಿಂದ ಕೂಡಿದ್ದಾಗಿದೆ ಎಂದು ಹೇಳಬಹುದು.

ಪ್ರೀತಿಗೆ ಗಂಡು, ಹೆಣ್ಣು, ವಯಸ್ಸು ಎಂಬ ಬಂಧನವಿಲ್ಲ, ಅದು ನಿರ್ಜರ ಗುಣ, ಅಲ್ಲಿ ನಿತ್ಯ ನೂತನ ತತ್ವ ಕಂಡವರು ಬೇಂದ್ರೆಯವರು. ಪ್ರೇಮ ಎಂಬುದು ಶ್ರೀಕೃಷ್ಣ ತತ್ವ. ಅದು ಏಕಕಾಲಕ್ಕೆ ಎಲ್ಲೆಡೆಗೂ ಇರುತ್ತದೆ. ಅದರ ಸಂಪೂರ್ಣ ಜ್ಞಾನವನ್ನು ಮಾಡಿಕೊಳ್ಳುವುದೇ ಪ್ರತಿಯೊಬ್ಬನ ಜೀವನ ಸಾಧನೆಯಾಗಬೇಕು ಎಂಬುದು ಬೇಂದ್ರೆಯವರ ಸ್ವತಂತ್ರ ವಿಚಾರವಾಗಿದೆ. (ಔದುಂಬರ ಗಾಥೆ, ಅಂಬಿಕಾತನದತ್ತರ ಸಮಗ್ರ ಸಖೀಗೀತ, ಸಂಪುಟ-೮, ಪು. xxxiii).

ಇಬ್ಬರ ಜೀವನವು 'ಚಿತ್ತದಾಗಿನ ಚಿತ್ರಗಾರ ಬರೆದ ಮಹಾಚಿತ್ರ'ವಾಗಬೇಕು. ಅದು ಪ್ರದರ್ಶನ ವಸ್ತುವಾಗಬಾರದು. ಪರಸ್ಪರರಿಗೆ ಹುಟ್ಟುವ ಮಕ್ಕಳನ್ನು ಮುಂಗಯ್ಯ ಮೇಲಿನ ಗಿಣಿಗಳಂತೆ ಸಾಕಬೇಕು. ಪರಸ್ಪರರು

ಬೆಳಕಿನ ಹಣ್ಣಾಗಬೇಕು ಎಂಬುದು ಬೇಂದ್ರೆ ಇಚ್ಛೆ. ಇದು ಬೇಂದ್ರೆ ತಮ್ಮ ಬಾಳಸಂಗಾತಿಯನ್ನು ಕೈಹಿಡಿಯುವಾಗ ಮಾಡಿಕೊಂಡ ಮನೋಜ್ಞ ಮನೋಸ್ಪಂದವಾಗಿದೆ. ಇಂಥ ಮಹೋನ್ನತ ಅಂಶಗಳ ಹಿನ್ನೆಲೆಯಲ್ಲಿ ಅರಳಿದ ಸತ್ಯಕಲ್ಪನೆ ಬೇಂದ್ರೆಯವರ ಸಖೀಗೀತ. ಗಂಡ ಹೆಂಡತಿಯರಿಬ್ಬರು ಸಖ ಸಖಿಯರಂತಿರಬೇಕು ಎಂಬುದು ಬೇಂದ್ರೆ ಮಧುರ ಭಾವ ಈ ಬಗೆಯ ಸಖ-ಸಖೀಭಾವವೇ ಬೇಂದ್ರೆ ಕಾವ್ಯಗಳ ಪ್ರೇಮಮೀಮಾಂಸೆಯಾಗಿದೆ ಎಂದು ಹೇಳಬಹುದು.

ಸೃಷ್ಟಿ ಸೊಬಗಿನ ಸಹಜತೆಯಂತೆ ಪತಿ-ಪತ್ನಿಯ ಭಾವದಲ್ಲೂ ಸಹಜತೆ, ಸರಳತೆಯನ್ನು ಕಾಣಲು ಬಯಸಿದವರು ಕವಿ ಕೆ. ಎಸ್. ನ. ಇಲ್ಲಿ ಈಗಾಗಲೇ ತಿಳಿದಂತೆ ಲೋಕ ದಾಂಪತ್ಯದ ಸಹಜ ತಿಳುವಳಿಕೆಗಳು ಅನಾವರಣಗೊಂಡಿವೆ. ಈ ಹಿನ್ನೆಲೆಯಲ್ಲಿ ದಾಂಪತ್ಯ ಭಾವವೇ ಕೆ. ಎಸ್. ನ. ಕವಿತೆಗಳ ಪ್ರೇಮ ಮೀಮಾಂಸೆಯಾಗಿದೆ ಎಂದು ತಿಳಿಯಬಹುದು.

ಕೊನೆಯದಾಗಿ ಜಿ. ಎಸ್. ಶಿವರುದ್ರಪ್ಪನವರ ಕಾವ್ಯಗಳ ಪ್ರೇಮಮೀಮಾಂಸೆ ಇವರೆಲ್ಲರಿಗಿಂತ ಭಿನ್ನವಾಗಿದೆ ಎಂದೇ ಹೇಳಬೇಕು. ಕಾರಣ ಅವರ ಪ್ರೇಮ ಕವಿತೆಗಳಲ್ಲಿ ಸಾಮಾಜಿಕ ಎಚ್ಚರವು ಕಣ್ಣು ಬಿಟ್ಟಿರುವ ಅಂಶವನ್ನು ನಾವು ಗುರುತಿಸಬಹುದು. ಅದು ಎಲ್ಲದರ ಎಲ್ಲೆಯನ್ನು ಮೀರಿ ಅನಂತ ಮಾನವೀಯತೆ ಕಡೆಗೆ ತುಡಿಯುವಂತದ್ದಾಗಿದೆ. ಇದನ್ನು ಗಮನಿಸಿ ಹೇಳುವುದಾದರೆ ಸಾಮಾಜಿಕ ಭಾವವೇ ಜಿ. ಎಸ್. ಎಸ್. ಕಾವ್ಯದ ಪ್ರೇಮ ಮೀಮಾಂಸೆಯ ಮೂಲ ಬೇರಾಗಿದೆ ಎಂದು ಹೇಳಬಹುದು.

ಕುವೆಂಪು, ಬೇಂದ್ರೆ, ಕೆ.ಎಸ್.ನ., ಜಿ.ಎಸ್.ಎಸ್. ಇವರೆಲ್ಲರೂ ಪ್ರೇಮ ಕವಿತೆಗಳನ್ನು ರಚಿಸಿದರೂ ಕೂಡ ಇವರ ಪ್ರೇಮಮೀಮಾಂಸೆಯ ನೆಲೆಗಳು ಮಾತ್ರ ಹೇಗೆ ಭಿನ್ನವಾಗಿವೆ ಎಂಬುದನ್ನು ಪ್ರಸ್ತುತ ಅಧ್ಯಯನದಿಂದ ನೋಡಬಹುದು.

ಟಿಪ್ಪಣಿ

೧. ಕನ್ನಡದಲ್ಲಿ ಭಾವಗೀತೆ, ಪ್ರಭುಶಂಕರ, ಪು.೩೧೭

೨. ಪ್ರೇಮಾದ್ವೈತ, ಕುವೆಂಪು ಸಮಗ್ರ ಕಾವ್ಯ, ಸಂಪುಟ ೧, ಪು. ೭೫೨

೩. ಸಿದ್ಧಿ, ಕುವೆಂಪು ಸಮಗ್ರ ಕಾವ್ಯ, ಸಂಪುಟ ೧, ಪು. ೭೮೫

೪. ಪ್ರಿಯನು ಪ್ರೇಯಸಿಗೆ, ಕುವೆಂಪು ಸಮಗ್ರ ಕಾವ್ಯ, ಸಂಪುಟ ೧, ಪು. ೮೧೮

೫. ಎಂತು ನಿನ್ನನು ಗೆಲುವೆ?, ಕುವೆಂಪು ಸಮಗ್ರ ಕಾವ್ಯ, ಸಂಪುಟ ೧, ಪು. ೮೧೯

೬. ಮುಳುಗಿದರೇನ್ ಸಾವೆ?, ಕುವೆಂಪು ಸಮಗ್ರ ಕಾವ್ಯ, ಸಂಪುಟ ೧, ಪು. ೮೨೧

೭. ಜೇನಾಗುವಾ, ಕುವೆಂಪು ಸಮಗ್ರ ಕಾವ್ಯ, ಸಂಪುಟ ೧, ಪು. ೯೧೭

೮. ವಿರಹ ಚಿತೆ, ಕುವೆಂಪು ಸಮಗ್ರ ಕಾವ್ಯ, ಸಂಪುಟ೧, ಪು. ೯೩೭

೯. ಮನದನ್ನೆ, ಅಂಬಿಕಾತನಯದತ್ತರ ಸಮಗ್ರ ಕಾವ್ಯ, ಸಂಪುಟ ೩, ಪು. ೭೨

೧೦. ಚಿರಂತನ, ಅಂಬಿಕಾತನಯದತ್ತರ ಸಮಗ್ರ ಕಾವ್ಯ, ಸಂಪುಟ ೨, ಪು. ೨೪೦

೧೧. ನಾನು ಬಡವಿ, ಅಂಬಿಕಾತನಯದತ್ತರ ಸಮಗ್ರ ಕಾವ್ಯ, ಸಂಪುಟ ೩, ಪು. ೭೯

೧೨. ಅದೇ.,

೧೩. ಹಳ್ಳಿಯ ಚೆಲುವಿಗೆ, ಮಲ್ಲಿಗೆಯ ಮಾಲೆ, ಸಮಗ್ರ ಕವನ ಸಂಕಲನ, ಪು. ೫

೧೪. ಗೃಹಲಕ್ಷ್ಮಿ, ಮಲ್ಲಿಗೆಯ ಮಾಲೆ, ಸಮಗ್ರ ಕವನ ಸಂಕಲನ, ಪು. ೪

೧೫. ನಕ್ಕು ನಗಿಸು, ಮಲ್ಲಿಗೆಯ ಮಾಲೆ, ಸಮಗ್ರ ಕವನ ಸಂಕಲನ, ಪು. ೧೦

೧೬. ಬಾರೆ ನನ್ನ ಶಾರದೆ, ಮಲ್ಲಿಗೆಯ ಮಾಲೆ, ಸಮಗ್ರ ಕವನ ಸಂಕಲನ, ಪು. ೬

೧೭. ಸಂಜೆಯಾಗುವುದೆಂದಿಗೆ?, ಮಲ್ಲಿಗೆಯ ಮಾಲೆ, ಸಮಗ್ರ ಕವನ ಸಂಕಲನ, ಪು. ೪೩

೧೮. ಗಂಡ - ಹೆಂಡತಿ, ಮಲ್ಲಿಗೆಯ ಮಾಲೆ, ಸಮಗ್ರ ಕವನ ಸಂಕಲನ, ಪು. ೭೨

೧೯. ಅದೇ.,

೨೦. ಪ್ರೇಮ, ಮಲ್ಲಿಗೆಯ ಮಾಲೆ, ಸಮಗ್ರ ಕವನ ಸಂಕಲನ, ಪು. ೪೩೦

೨೧. ಕನ್ನಡ ನವೋದಯ ಕಾವ್ಯ, ಡಾ. ದೊಡ್ಡರಂಗೇಗೌಡ, ಪು. ೩೩೦

೨೨. ಪ್ರಶ್ನೆ, ಜಿ. ಎಸ್. ಶಿವರುದ್ರಪ್ಪ, ಸಮಗ್ರಕಾವ್ಯ, ಪು. ೧೪೬

೨೩. ಅದೇ.,

೨೪. ಮುರಿದ ಒಲುಮೆಗೆ, ಜಿ. ಎಸ್. ಶಿವರುದ್ರಪ್ಪ, ಸಮಗ್ರಕಾವ್ಯ, ಪು. ೧೪೪

೨೫. ಪ್ರಣಯ, ಜಿ. ಎಸ್. ಶಿವರುದ್ರಪ್ಪ, ಸಮಗ್ರಕಾವ್ಯ, ಪು. ೧೩೩

೨೬. ಅನ್ವೇಷಣೆ, ಜಿ. ಎಸ್. ಶಿವರುದ್ರಪ್ಪ, ಸಮಗ್ರಕಾವ್ಯ, ಪು. ೧೩೧

೨೭. ಪ್ರೀತಿ ಇಲ್ಲದ ಮೇಲೆ, ಜಿ. ಎಸ್. ಶಿವರುದ್ರಪ್ಪ, ಸಮಗ್ರಕಾವ್ಯ, ಪು. ೧೪೮

ಭಾಗ-೨

ಅಧ್ಯಾಯ ೧ : ಬಿ.ಆರ್. ಲಕ್ಷ್ಮಣರಾವ್

ಕವಿತೆಗಳಲ್ಲಿ ಪ್ರೇಮದ ಆಖ್ಯಾನ

ಅಧ್ಯಾಯ ೨ : ಪ್ರೇಮ ಮೀಮಾಂಸೆ

ಮತ್ತು ಸಖಿಸಖಿ ಕಲ್ಪನೆ

ಅಧ್ಯಾಯ ೩ : ಆಯ್ದ ಕವಿತೆಗಳ ಅನ್ವಯಿಕ ವಿಶ್ಲೇಷಣೆ

೧. ವಸ್ತು ಪ್ರಧಾನ

೨. ಕಥನ ಪ್ರಧಾನ

೩. ಭಾವ ಪ್ರಧಾನ

೪.ರಸ ಪ್ರಧಾನ

೫.ನಾಟ್ಯ ಪ್ರಧಾನ

ಅಧ್ಯಾಯ ಒಂದು

ಬಿ. ಆರ್. ಲಕ್ಷ್ಮಣರಾವ್ ಕವಿತೆಗಳಲ್ಲಿ ಪ್ರೇಮದ ಆಖ್ಯಾನ

ಅಧ್ಯಾಯ ಒಂದು

ಬಿ. ಆರ್. ಲಕ್ಷ್ಮಣರಾವ್ ಕವಿತೆಗಳಲ್ಲಿ ಪ್ರೇಮದ ಆಖ್ಯಾನ

ಬಿ.ಆರ್. ಲಕ್ಷ್ಮಣರಾವ್ ಅವರ ಪ್ರೇಮ ಕವಿತೆಗಳು ಭಿನ್ನ ನೆಲೆಗಳಿಂದ ರೂಪುತಾಳಿದಂತವುಗಳಾಗಿವೆ. ಅದಕ್ಕೆ ಅವರ ಬದುಕಿನ ಭಿನ್ನ ದಾರಿಯ ವಿಭಿನ್ನ ಅನುಭವಗಳು ಚಿಂತನೆಗಳು ಕಾರಣವಾಗಿರಬಹುದು. ಅವರ ಮೊದಲ ಕವನ ಸಂಕಲನ 'ಗೋಪಿ ಮತ್ತು ಗಾಂಡಲೀನದ' ಪ್ರೇಮ-ಗೀಮ ಕವಿತೆಯಲ್ಲಿ ಅವರು ನೇರವಾಗಿಯೇ ಹೇಳುತ್ತಾರೆ.

ನಾನು
ಕಳ್ಳ ಟಂಕಸಾಲೆಯಿಂದ
ಪೊಳ್ಳು ಹಾವಗಳನ್ನು, ಭಾವಗಳನ್ನು, ನೋವುಗಳನ್ನು
ಯಾವುಗಳನ್ನೂ
ಚಕಚಕ್ಕನೆ ಅಚ್ಚುಹಾಕಿ
ಚಲಾವಣೆಗೆ ತರಲಾರೆ.
ಇಗೊ, ಒಪ್ಪಿಕೊಂಡೆ: ನನ್ನದಲ್ಲ ಶುದ್ಧ ಪ್ರೇಮದ ಹಾದಿ.[೧]

ಬಿ.ಅರ್. ಲಕ್ಷಣರಾವ್ ಮುಖ್ಯವಾಗಿ ಯುವ ಜನಾಂಗದಲ್ಲಿ ಕಂಡು ಬರುವ ಕಾಮಪ್ರೇರಿತ ಪ್ರೇಮದ ಇನ್ನೊಂದು ಮುಖವನ್ನು ಇಲ್ಲಿ ಬಿಚ್ಚಿಟ್ಟಿದ್ದಾರೆ. ಪ್ರೇಮ ಅಂಕುರಿಸುವ ಬಗೆಯೇ ಅಚ್ಚರಿ ತರುವಂಥದ್ದು. ಅದು ಅನೇಕ ಮೂಲಗಳಿಂದ ಉದಿಸುತ್ತದೆ. ಅದು ಪ್ರೀತಿಸುವವರನ್ನು ಆಧರಿಸಿರುತ್ತದೆ. ಆದರೆ ವಯೋ ಸಹಜ ದೃಷ್ಟಿಕೋನದ ನೆಲೆಯಲ್ಲಿ ನೋಡಿದಾಗ ಹೆಚ್ಚು ಜನರಲ್ಲಿ ಪ್ರೇಮ ಹುಟ್ಟುವುದು ಸೌಂದರ್ಯಾನು ಭೂತಿಯಿಂದಲೇ ಎಂದು ಹೇಳಬಹುದು. ಎಂದರೆ: ದೈಹಿಕ ಆಕರ್ಷಣೆಯು ಪ್ರೇಮಾಂಕುರದ ಮೂಲಗಳಲ್ಲಿ ಒಂದಾಗಿದೆ ಎಂಬ ಅಂಶ ಸ್ಪಷ್ಟವಾಗುತ್ತದೆ. ಆದರೆ ಎಷ್ಟೋ ಯುವ ಪ್ರೇಮಿಗಳಿಗೆ ಇದರಿಂದುಂಟಾಗುವ ಪರಿಣಾಮಗಳ ಅರಿವು ಸಹ ಇರುವುದಿಲ್ಲ.

ಪ್ರಾರಂಭದ ಪ್ರೇಮವೇ ಹಾಗೆ. ಪ್ರೇಮಿಗಳಿಬ್ಬರು ಪರಸ್ಪರರನ್ನು ಹೊಗಳುತ್ತಾರೆ. ತೆಗಳಿಕೆಯ ಮಾತು ಅಲ್ಲಿ ಪ್ರಸ್ತಾಪವಾಗುವುದೇ ಇಲ್ಲ. ಸುಳ್ಳುಗಳನ್ನು ಹೇಳಿಯಾದರೂ ಸಂಗಾತಿಯನ್ನು ಒಲಿಸಿಕೊಳ್ಳುವ ಪ್ರಯತ್ನಗಳು ಮೊದಲ ಪ್ರೇಮದ ಅಂಕಣದಲ್ಲಿ ಹೆಚ್ಚು ಕಂಡು ಬರುತ್ತವೆ. ದುರಂತವೆಂದರೆ ಸುಳ್ಳುಗಳನ್ನು ಪರಾಮರ್ಶಿಸಿ

ನೋಡುವ ಸಂಯಮವು ಅಲ್ಲಿರುವುದಿಲ್ಲ. ಅಲ್ಲಿ ಸುಳ್ಳುಗಳೇ ಸತ್ಯವಾಗುತ್ತವೆ ಕಾರಣ ಪ್ರೇಮದ ಸಾನ್ನಿಧ್ಯವೇ ಅಂಥದ್ದು ಅದು ಏನನ್ನೂ ಹೆಚ್ಚಾಗಿ ವಿಮರ್ಶಿಸದ, ಎಲ್ಲವನ್ನು ಒಪ್ಪಿಕೊಳ್ಳುವ ಆತುರತೆಯ ಭಾವ ಅಲ್ಲಿ ಎದ್ದು ಕಾಣುತ್ತದೆ. 'ಪೊಳ್ಳು ಹಾವಗಳನ್ನು, ಭಾವಗಳನ್ನು, ನೋವುಗಳನ್ನು', ಎನ್ನುವಲ್ಲಿ ಹೆಚ್ಚಾಗಿ ಯುವಕರು ತಮ್ಮ ಸಂಗಾತಿಗೆ ಹೇಗೆ ಹುಸಿ ಹಾವ ಭಾವಗಳನ್ನು ಪ್ರದರ್ಶಿಸಿ ಅವುಗಳ ಮೂಲಕ ತಾವು ನಂಬಿಕೆಗೆ ಪ್ರೀತಿಸಲು ಅರ್ಹರು ಎಂಬ ಭಾವವನ್ನು ಹುಟ್ಟು ಹಾಕಲು ನಡೆಸುವ ಹುಡುಗರ ಹರಸಾಹಸಗಳು ಪ್ರಸ್ತುತ ಸಾಲುಗಳಲ್ಲಿ ಸ್ಪಷ್ಟವಾಗಿ ಅನಾವರಣಗೊಂಡಿವೆ. ಆದರೆ ಇಂಥ ವಯೋಮಾನದ ಹುಚ್ಚುತನಗಳನ್ನು ಮೀರಿ ಸಂಗಾತಿಯೆದುರು ಸತ್ಯವನ್ನು ನಿಷ್ಠೆಯಿಂದ ಹೇಳುವ ಎದೆಗಾರಿಕೆ ಲಕ್ಷ್ಮಣರಾವ್‌ರವರಲ್ಲಿ ಇರುವುದರಿಂದಲೇ ಅವರ ಪ್ರೇಮವು ಹೆಚ್ಚು ಮೌಲ್ಯಯುತವಾದದ್ದೆನಿಸುತ್ತದೆ. ಮುಂದುವರಿದು ಹೇಳುವ,

> ನನ್ನ ಪ್ರೇಮ,
> ಊಟವಾದೊಡನೆ ಎಲೆಗೋಮು [೨]

ಎಂಬ ಸಾಲುಗಳು ಸ್ವತಃ ಸತ್ಯವೇ ಗರಬಡಿದು ನಿಲ್ಲುವಂತೆ ಮಾಡುವಷ್ಟು ಶಕ್ತಿಶಾಲಿ ಅಂಶಗಳಾಗಿವೆ ಎಂದರೆ ತಪ್ಪಾಗಲಿಕ್ಕಿಲ್ಲ. ಪ್ರೇಮ ಪ್ರಸಂಗಗಳಲ್ಲಿ ಸನಿಹ - ವಿರಹಗಳು ಸಹಜ. ಆದರೆ ಪ್ರೀತಿಯ ಮಹತ್ವ ತಿಳಿಯುವುದು ಒಬ್ಬರನ್ನೊಬ್ಬರು ಅಗಲಿದಾಗಲೇ ಎಂದು ಹೇಳಬೇಕು. ಈ ಅಗಲುವಿಕೆ ಮನಕ್ಕೆ ನೋವನ್ನುಂಟು ಮಾಡುತ್ತದೆ. ಆದರೆ ಆ ನೋವಿನ ಘಳಿಗೆಯಲ್ಲೂ ಕೂಡ ಮನ ಮುದಗೊಳ್ಳಬೇಕಾದರೆ ನೆನೆಪುಗಳ ಸಿಹಿಗಾಳಿ ಎದೆಯಲ್ಲಿ ಬೀಸಲೇಬೇಕು. ಲಕ್ಷ್ಮಣರಾವ್ ತಮ್ಮ 'ನೆನೆಪು' ಎಂಬ ಕವಿತೆಯೊಂದರಲ್ಲಿ ತಮ್ಮ ಒಲವಿನ ಹಿಂದಿನ ನೆನೆಪುಗಳನ್ನು ಮೆಲುಕು ಹಾಕುವುದರ ಜೊತೆ ಜೊತೆಗೆ ಅನುರಾಗದ ಕೆಲವು ಸೂಕ್ಷ್ಮಗಳನ್ನು ನಮ್ಮೆದುರು ತೋರುತ್ತಾರೆ.

> ಶಕೂ, ಎಂಥ ಆತ್ಮವಂಚಕರು ನಾವು!
> ನನ್ನನ್ನು ಮನಸಾರೆ ಪ್ರೀತಿಸಿ ಕೈಕೊಟ್ಟೆ ನೀನು;
> ನಿನ್ನನ್ನು ಮರೆಯಲಾರೆನೆಂದು ಘೋಷಿಸಿ ಮರೆತುಬಿಟ್ಟೆ ನಾನು;
> ಮರೆಯುವುದು,ತೊರೆಯುವುದು ಇಷ್ಟು ಸುಲಭವೇನೆ?
> ಅಥವಾ ಇಂಥ ಭ್ರಮೆಗಳೂ ಮತ್ತೆ ಆತ್ಮವಂಚನೆಗೊ? [೩]

ಈ ಬದುಕಿಗೆ ದಿನಕ್ಕೊಂದು ತಿರುವು. ಬದುಕಿನ ಆಕಸ್ಮಿಕಗಳು ಬದುಕನ್ನು ಹೇಗೆ ಛಿದ್ರಗೊಳಿಸುತ್ತವೆ ಮತ್ತು ಹೊಸದೊಂದು ದಿಗಂತದ ಕಡೆಗೆ ನಮ್ಮನ್ನು ಹೇಗೆ ಕರೆದೊಯ್ಯುತ್ತವೆ ಹಾಗೂ ಅಂಥ ಘಳಿಗೆಗಳಲ್ಲಿ ಪ್ರೀತಿಸುವವರು ಪಡುವ ಪಾಡು ಹಾಡುಗಳ ಚಿತ್ರಣ ಈ ಕವಿತೆಯಲ್ಲಿದೆ. ಪ್ರೀತಿಸಿ ಮರೆಯುವುದು ತೊರೆಯುವುದು ಪ್ರೇಮಿಗಳಿಗೆ ಅಷ್ಟು ಸುಲಭದ ಸಂಗತಿ ಅಲ್ಲದಿದ್ದರೂ ಬದುಕಿನ ತಿರುವುಗಳು ನಮ್ಮನ್ನು ಹೇಗೆ ಆತ್ಮವಂಚಕರನ್ನಾಗಿ ಮಾಡುತ್ತವೆ ಹಾಗೂ ನಮ್ಮ ಭರವಸೆಗಳನ್ನೆಲ್ಲ ಭ್ರಮನಿರಸನವಾಗುವಂತೆ ಮಾಡುತ್ತವೆ ಎಂಬ ಅರಿವಿನ ಬೆಳಗಿನ

ಕಡೆಗೆ ಕವಿ ನಡೆಯುವುದರ ಜೊತೆಗೆಯೇ ಪ್ರೇಮ ಹೇಗೆ ಕೆಲವು ಸಲ ಬದುಕಿನ ಬಂದೀಖಾನೆಯಲ್ಲಿ ಬಂಧಿಯಾಗುತ್ತದೆಂಬ ಅಂಶವನ್ನು, ಪ್ರೇಮದ ನಿಸ್ಸಾಹಾಯಕತೆಯನ್ನು ಇಲ್ಲಿ ತುಂಬಾ ಸರಳವಾಗಿ ಚಿತ್ರಿಸಿದ್ದಾರೆ ಕವಿ ಬಿ. ಆರ್. ಲಕ್ಷ್ಮಣರಾವ್ ಅವರು.

ಏಕೆಂದರೆ
ಇಂದಿಗೂ ಒಮ್ಮೊಮ್ಮೆ ನನ್ನ ಕನಸಿನ ಗೊಂದಲದಲ್ಲಿ
ನಿಂತ ಮೆಟ್ಟಿಲು ತಟ್ಟನೆ ಹೂತು ಹೋದಂತಾಗಿ
ನಿನ್ನ ಕುಲುಕಲು ಕಣಿವೆಯಾಳಕ್ಕೆ
ಕಂಬನಿಯಂತೆ ಕುಸಿದು ಬೀಳುತ್ತೇನೆ;
ಚಿಟ್ಟೆಯಂತೆ ಹಗುರಾಗಿ ತೇಲುತ್ತಾ ಮೇಲೇಳುತ್ತೇನೆ;
ಸುತ್ತ ಮೈಮನ ತೆರೆದ ನಿನ್ನ ನಗೆಮಲ್ಲಿಗೆ ಹೂಗಳು;
ನನ್ನ ನಾಗರಿಕ ಪ್ರಜ್ಞೆಯಾಳದಲ್ಲೂ ನಿನ್ನ ಕೋಗಿಲೆ ಕುಹೂಗಳು;
ನಿನ್ನ ಕಣ್ಣು, ಅದರ ಭಾಷೆ, ಅದರ ಹ್ಞೂ, ಉಹ್ಞೂಗಳು;
ನೀನು ನನಗೆ ಎಣಿಸಿ ಎಣಿಸಿ ಕೊಡುತ್ತಿದ್ದ ಮುತ್ತು;
ಶಕೂ, ಖಂಡಿತ ನೀನು ನನ್ನವಳಾಗಬೇಕಿತ್ತು;
ಈ ಹಾಳು ಗೋಡೆಗಳೆಲ್ಲ ಕುಸಿದು ಬೀಳಬೇಕಿತ್ತು.[೪]

ಇಲ್ಲಿ ಕವಿ ಪ್ರೇಮದ ಕಲ್ಪನಾ ಲಹರಿಯಲ್ಲಿ, ನೆನೆಪಿನಲ್ಲಿ ತೇಲಾಡುತ್ತಾನೆ. ಅವಳ ಜೊತೆಗಿನ ಅನುಭವಗಳನ್ನು ಮಿದುವಾಗಿ ಮೆಲುಕು ಹಾಕುತ್ತಾನೆ. ಆದರೆ ಕೊನೆಗೆ ಈ ಹಾಳು ಗೋಡೆಗಳೆಲ್ಲ ಕುಸಿದು ಬೀಳಬೇಕಿತ್ತು ಎನ್ನುವಲ್ಲಿ ವಾಸ್ತವಕ್ಕೆ ಶರಣಾಗುತ್ತಾನೆ.

ಪ್ರೇಮದ ಪಂಜರದಲ್ಲಿ ಬಂಧಿಯಾದವರು ಬಹಳಷ್ಟು ಸಲ ಕಲ್ಪನೆಯ ಕೊಳದ ಸುತ್ತವೆ ವಿಹರಿಸುತ್ತಿರುತ್ತಾರೆ. ಅವರು ಹೆಚ್ಚಾಗಿ ಲೋಕ ವ್ಯವಹಾರಗಳಿಂದ ದೂರವಾಗುತ್ತಾರೆ. ನಿತ್ಯ ಬದುಕಿನ ಸಹಜ ಚಟುವಟಿಕೆಗಳಾದ ನಿದಿರೆ-ನೀರಡಿಕೆಗಳಿಂದಲೂ ಕೂಡ ಅವರು ದೂರ ಇರುವ ಸಂಭವಗಳುಂಟು. ಇದು ಪ್ರೇಮಕ್ಕೆ ಇರುವ ಅದ್ಭುತ ಶಕ್ತಿ ಕೂಡ. ಪ್ರಸ್ತುತ ಕವಿತೆಯಲ್ಲಿ ಕಲ್ಪನೆ-ವಾಸ್ತವ, ಪ್ರೀತಿ-ಬದುಕುಗಳ ನಡುವಿನ ಸಂಘರ್ಷ ಹಾಗೂ ಅವುಗಳ ಅಂತರ ಸಂಬಂಧಗಳನ್ನು, ತದ್ವಿರುದ್ಧತೆಯನ್ನು ಕೆಲವು ಸಂಗತಿಗಳ ಮೂಲಕ ಕವಿ ಕವಿತೆಯಲ್ಲಿ ಸ್ಪಷ್ಟಪಡಿಸುತ್ತಾ ಹೋಗುತ್ತಾರೆ. ಇದನ್ನೇ ಇಲ್ಲಿ ಕಾಣಬಹುದು:

ಈಗ ನಾನು ಮೊಗ್ಗುಗಳನ್ನು ಎಷ್ಟು ಸಲೀಸಾಗಿ ಚಿವುಟಿ ಹಿಗ್ಗಬಲ್ಲೆ,
ಗೊತ್ತ?
ಎಷ್ಟು ತರ್ಕಬದ್ಧವಾಗಿ ವಾದಿಸಬಲ್ಲೆ, ವ್ಯಾವಹರಿಕವಾಗಿ

ವರ್ಣಿಸಬಲ್ಲೆ, ಗೊತ್ತ?
ಹೂವಿನ ಪಕಳೆ ಹರಿದು ವೈಜ್ಞಾನಿಕವಾಗಿ ಪಾಠ ಹೇಳಬಲ್ಲೆ.
ಯಾವ ಹೂವು ನಸುನಕ್ಕು ಕುಲುಕಿದರೂ ತಟ್ಟನೆ ಪುಳಕಗೊಳ್ಳದೆ
ತಾಳಬಲ್ಲೆ;
ಈ ಪರಿಜ್ಞಾನಕ್ಕಾದರೂ ನಾನು ನಿನಗೆ ಚಿರಋಣಿಯಾಗಿರಬೇಕು
ಶಕೂ"

ಪ್ರೀತಿಸುವವರು ಕೇವಲ ತಮ್ಮ ಸುಖವನ್ನಷ್ಟೇ ಬಯಸುವುದಿಲ್ಲ. ಅವರು ಪ್ರಕೃತಿಯ ಚರಾಚರಗಳಲ್ಲೂ ಸುಖದ ಇರುವಿಕೆಯನ್ನು ಬಯಸುತ್ತಾರೆ. ಹಾಗೂ ನಿಸರ್ಗದ ಚೆಲುವಿನ ಹೂಗಳಲ್ಲೂ ನಗುವನ್ನು ಗುರುತಿಸುತ್ತಾರೆ. ನಿರ್ಜೀವದಲ್ಲೂ ಜೀವದ ಅಂಕುರತೆಯನ್ನು ಕಾಣುವ ಮನೋಭಾವದವರಾಗಿರುತ್ತಾರೆ. ಪ್ರೇಮಿಗಳು ಸಮಾಜದ ಸಂಗತಿಗಳಿಗೆ ಸ್ಪಂದಿಸುವುದಕ್ಕಿಂತ ಪ್ರಕೃತಿಯ ಬಗೆಗಿನ ನಿರಾಕಾರಣದ ಮೋಹಕ್ಕೆ ಹೆಚ್ಚಾಗಿ ಒಳಗಾಗತ್ತಾರೆ. ಈ ಬಗೆಯ ನಿರಾಕಾರಣದ ಮೋಹಗಳು ಕೂಡ ಅವರಲ್ಲಿ ಒಂದು ಬಗೆಯ ಆನಂದದ ಅನುಭೂತಿಯನ್ನುಂಟು ಮಾಡುವ ಜೀವ ಸೆಲೆಗಳಂತೆ ಗೋಚರವಾಗುತ್ತವೆ. ಇದರ ಹಿನ್ನೆಲೆಯಲ್ಲಿ ಹೇಳುವುದಾದರೆ ಅವರು ತಮ್ಮದೇ ಆದ ಪ್ರೇಮಲೋಕದಲ್ಲಿ ಸಂಚರಿಸುತ್ತಿರುತ್ತಾರೆ. ಆದರೆ ಪ್ರೇಮಿಗಳಿಗೆ ವಿರಹಾಗ್ನಿಯ ಸ್ಪರ್ಶ ಎಂದು ಸೋಕುವುದೋ ಆಗ ಮಾತ್ರ ವಾಸ್ತವ ಲೋಕಕ್ಕೆ ಮರಳುತ್ತಾರೆ. ಆನಂತರದಲ್ಲಷ್ಟೇ ತಮ್ಮ ಕಣ್ಣಿಗೆ ಅಡರಿದ್ದ ಪ್ರೇಮದ ಪೊರೆಯನ್ನು ಕಳಚುತ್ತಾರೆ. ಅಲ್ಲಿಂದ ಅವರ ಆಲೋಚನೆಗಳು ತರ್ಕಬದ್ಧದ ಮಾರ್ಗವನ್ನು ಹಿಡಿಯುತ್ತವೆ. ಅವರ ಅನುರಾಗ, ಸ್ನೇಹ ಇನ್ನಿತರ ಸಂಬಂಧಗಳೆಲ್ಲವೂ ಲಾಭ, ನಷ್ಟಗಳ ವ್ಯವಹಾರದ ಪರಿಧಿಯಲ್ಲೇ ರೂಪುಗೊಂಡು ಬದುಕಿನ ಅರ್ಥವನ್ನು ಕಳೆದು ಕೊಳ್ಳುತ್ತವೆ ಎಂದು ಹೇಳಬಹುದು. ಅದಕ್ಕೆ "ಯಾವ ಹೂವು ನಸುನಕ್ಕು ಕುಲುಕಿದರೂ ತಟ್ಟನೆ ಪುಳಕಗೊಳ್ಳದೆ ತಾಳಬಲ್ಲೆ" ಎಂಬ ಸಾಲುಗಳು ಪ್ರೇಮದಿಂದ ಮುಕ್ತಿ ಹೊಂದಿದ ಬಳಿಕ ಬದುಕು ತಾಂತ್ರಿಕವಾಗುತ್ತದೆ, ಜಡವಾಗುತ್ತದೆ. ಸಂಬಂಧಗಳು ಹೇಗೆ ಪ್ಲಾಸ್ಟಿಕ್ ಹೂವಿನ ಪರಿಮಳದಂತಾಗುತ್ತವೆ ಎಂಬುದಕ್ಕೆ ಕವಿ ನೀಡಿದ ಸಮರ್ಥ ನಿದರ್ಶನಗಳಾಗಿವೆ ಎಂದೇ ಇಲ್ಲಿ ಹೇಳಬೇಕಾಗುತ್ತದೆ.

ಪ್ರೇಮಿಗಿರಬೇಕಾದ ಸಹಜ ಕುತೂಹಲ ಪ್ರಶ್ನೆಯೆಂದರೆ ಪ್ರೀತಿಯೆಂದರೇನು ಎಂಬುದು. ಆ ಭಾವ ಒಂದಲ್ಲ ಒಂದು ಬಾರಿ ಪ್ರೇಮಿಗಳನ್ನು ಕಾಡಿರುತ್ತದೆ. ಪ್ರೀತಿಯೆಂದರೆ ಏನು ಎಂಬುದಕ್ಕೆ ಒಬ್ಬೊಬ್ಬರದು ಒಂದು ಬಗೆಯ ಉತ್ತರವಿರುತ್ತದೆ. ಆದು ಪ್ರೀತಿಸುವ ವ್ಯಕ್ತಿಗಳ ಜೀವನಾನುಭವ ಮತ್ತು ಚಿಂತನೆಗಳಿಗನುಗುಣವಾಗಿ ಅಭಿವ್ಯಕ್ತವಾಗುತ್ತದೆ. ಆದರೆ ಲಕ್ಷ್ಮಣರಾವ್ ಅವರು ಈ ರೀತಿ ವ್ಯಾಖ್ಯಾನಿಸುವಲ್ಲಿ ಪ್ರಶ್ನಾರ್ಥಕವಾಗಿಯೇ ಉಳಿಯುತ್ತಾರೆ.

ಪ್ರೀತಿಯೆಂದರೆ
ಹೌದೇ ಮೈಮಾಟ?
ಅಲ್ಲವೇ ಕಣ್ಣ ಮಿಂಚು?

ಪ್ರೀತಿಯೆಂದರೆ
ಹೌದೇ ತುಟಿ ಮುತ್ತು
ಅಲ್ಲವೇ ಕಿರುನಗೆ?[೧]

ಇಲ್ಲಿ ಪ್ರೀತಿ ಬಗ್ಗೆ ಹೇಳುವಲ್ಲಿ ಎಲ್ಲೋ ಒಂದು ಕಡೆ ಕವಿ ದೈಹಿಕ ಆಕರ್ಷಣೆಗೆ ಹೆಚ್ಚು ಒತ್ತುಕೊಟ್ಟಂತೆ ಕಾಣುತ್ತದೆ ಹಾಗೂ ದೈಹಿಕ ನೆಲೆಯಲ್ಲಿಯೇ ಪ್ರೀತಿಯನ್ನು ವ್ಯಾಖ್ಯಾನಿಸಲು ಹೋದಂತಿದೆ. ಜಿ.ಎಸ್. ಶಿವರುದ್ರಪ್ಪನವರು ಒಂದು ಕಡೆ, 'ಪ್ರೀತಿ ಎನ್ನುವುದು ಆತ್ಮದ ಆಕರ್ಷಣೆ' ಎಂದಿದ್ದಾರೆ. (ಸೌಂದರ್ಯದೆಡೆಗೆ, ಪು.೩೫೬) ಇದು ಲಕ್ಷ್ಮಣರಾವ್ ಅವರ ವ್ಯಾಖ್ಯಾನಕ್ಕೆ ತದ್ವಿರುದ್ಧವಾಗಿ ತೋರುತ್ತದೆ. ಪ್ರೀತಿ ಎನ್ನುವುದು ಆತ್ಮದ ಆಕರ್ಷಣೆ. ಇದು ನೂರಕ್ಕೆ ನೂರರಷ್ಟು ಸತ್ಯ. ಪ್ರೀತಿಯ ಆವಿರ್ಭವಿಸುವಿಕೆ ಇರುವುದು ಆತ್ಮದಲ್ಲಿಯೇ. ಕಾರಣ ಆತ್ಮ ಅನಂತವಾದುದು ಅದು ನಿತ್ಯ ಚಿರಂಜೀವಿ, ಚೇತನವುಳ್ಳದ್ದು ಆದರೆ ದೇಹ ಕ್ಷಣಿಕವಾದದ್ದು, ಜೀವವಿರುವವರೆಗೆ ಮಾತ್ರ ಅದಕ್ಕೆ ಬೆಲೆ ತದನಂತರ ಅದಕ್ಕೆ ಅಸ್ತಿತ್ವವಿಲ್ಲ, ಜೊತೆಗದು ಕಳಾಹೀನವಾಗುತ್ತದೆ. ಆದರೆ, ಪ್ರೀತಿಗೆ ಅದರ ಭಯವಿಲ್ಲ. ಆತ್ಮದಂತೆ ಪ್ರೀತಿಯು ಕಾಲ ಕಟ್ಟಳೆಗಳ ಎಲ್ಲೆಯನ್ನು ಮೀರುವಂಥದ್ದು, ಅದು ಅಮೂರ್ತವಾದದ್ದು, ಅಖಂಡವಾದುದು. ಪ್ರೀತಿಗೂ ಆತ್ಮಕ್ಕೂ ಅವಿನಾಭಾವ ಸಂಬಂಧವಿದೆಯೆಂಬುದನ್ನು ಹಾಗೂ ಪ್ರೀತಿ ದೇಹದ ಹಂಗನ್ನು ತೊರೆಯುವಂಥದ್ದು ಎಂಬುದನ್ನು ಅಲ್ಲಮ ಪ್ರಭುವಿನ "ಒಲುಮೆಯ ಕೂಟಕ್ಕೆ ಹಾಸಿಗೆಯ ಹಂಗೇಕೆ?" ಎಂಬ ಮಾತು ಹೆಚ್ಚು ಸಮರ್ಥನೀಯವಾಗಿಸುತ್ತದೆ.

ಪ್ರೀತಿಯೆಂದರೇನು? ಎಂಬುದಕ್ಕೆ ಉತ್ತರ ಎಷ್ಟು ಒಗಟೋ ಹಾಗೆಯೇ ಪ್ರೀತಿಸಲು ಕಾರಣವೇನು? ಎಂಬುದರ ಉತ್ತರವು ಅಷ್ಟೇ ಕ್ಲಿಷ್ಟಕರವಾದದ್ದು. ಸಾಮಾನ್ಯವಾಗಿ ಪ್ರೀತಿ ಸಕಾರಣವಾದದ್ದಾಗಿದ್ದರೂ ಸಹ ಕೆಲವೊಮ್ಮೆ ಅದು ವಿನಾಕಾರಣವೂ ಆಗಿರುತ್ತದೆ. ದ್ವೇಷಿಸಲು ನೂರಾರು ಕಾರಣಗಳು ಸಿಗಬಹುದು ಆದರೆ ಪ್ರೀತಿಸಲು ಒಂದು ಕಾರಣಗಳು ಸಿಗದೇ ಇರಬಹುದು. ಅಂದರೆ ಅದು ಒಂದು ಕಾರಣಕ್ಕೆ ನಿಲುಕುವಂತದ್ದಲ್ಲ. ಸುಮ್ಮನೆ ಇಷ್ಟವಾಗುವ ಆಕಾಶದಂತೆ, ಹಸಿರಿನ ಧರೆಯಂತೆ, ಹೂವಿನಂತೆ, ಅದರ ಪರಿಮಳದಂತೆಯೇ ಪ್ರೀತಿ ಕೂಡಾ. ಆಕ್ಷಣಕ್ಕೆ ಇಷ್ಟವಾದರೆ ಮುಗಿಯಿತು. ಅಲ್ಲಿಂದ ಮುಂದೆ ಅದಕ್ಕೆ ಕಾರಣಗಳೇ ಬೇಕಾಗದಿರಬಹುದು. ಅದು ಎಲ್ಲ ಕಾರಣಗಳ ಆಣೆಕಟ್ಟನ್ನು ದಾಟಿ ಸುಮ್ಮನೆ ಹರಿಯುವ ಪ್ರಶಾಂತ ಝರಿಯಂತೆ.

ಕವಿ ಲಕ್ಷ್ಮಣರಾವ್ 'ಪ್ರೀತಿಯೆಂದರೆ' ಎಂಬ ಕವಿತೆಯಲ್ಲಿ ದೈಹಿಕ ತೃಪ್ತಿಯ ನೆಲೆಯಲ್ಲಿಯೇ ಪ್ರೀತಿಯ ವ್ಯಾಖ್ಯಾನ ಕಾಣಹೋದಂತೆ ಕಂಡರೂ ಕೊನೆಗೆ ಪ್ರೀತಿಯ ವಿನಾಕಾರಣವನ್ನು ; ಕಾರಣಗಳಿಲ್ಲದೆಯೂ ಅದು ಬಾಳಿನಲ್ಲಿ ಓರಣವಾಗಿ ರೂಪುಗೊಳ್ಳುವ ಬಗೆಯನ್ನು ತುಂಬಾ ಸುಂದರವಾಗಿ ವರ್ಣಿಸಿದ್ದಾರೆ ಅದನ್ನಿಲ್ಲಿ ನೋಡಬಹುದು:

ಪ್ರೀತಿಯೆಂದರೆ
ಹೌದೇ ಒಪ್ಪ ಓರಣ?
ಅಲ್ಲವೇ ವಿನಾಕಾರಣ?[೨]

ಇನ್ನು ಮುಂದುವರಿದು ಕವಿ, ದೇವರು ಅಮೂರ್ತವಾದರೂ ಕೂಡ ನಮ್ಮನ್ನು ಕಾಯುವಂತೆ ಪ್ರೀತಿಯು ಕೂಡ ನಮಗೆ ಕಾಣದಿದ್ದರೂ ನಮ್ಮನು ಅನುಗಾಲ ಕಾಯುತ್ತ ಬದುಕು ಶಾಂತಿ, ಸುಖಗಳಿಂದ ಸಮೃದ್ಧವಾಗುವಂತೆ ಮಾಡುತ್ತದೆ ಎನ್ನುತ್ತಾರೆ ಕವಿ ಲಕ್ಷ್ಮಣರಾವ್ ಅವರು.

ಪ್ರೀತಿಯೆಂದರೆ
ಹೌದೇ ಕಾಣದ ದೊರೆ?
ಅಲ್ಲವೇ ಕಾಯುವ ಧರೆ?[೮]

ಪ್ರಸ್ತುತ ಸಾಲುಗಳಲ್ಲಿ ತಾಯಿಗಿರುವ ಅಗಾಧವಾದ ವಾತ್ಸಲ್ಯ ಪ್ರೀತಿಯನ್ನು ಚಿತ್ರಿಸಲಾಗಿದೆ. ಪ್ರೇಮದಲ್ಲಿ ವಿರಸ ಹೇಗೆ ಸಹಜವೋ ಹಾಗೆಯೇ ವಿಘುಟನೆಯು ಸಹಜ.ಸಂಬಂಧಗಳ ವಿಘುಟನೆಗೆ ಕಪಟತನ, ವಂಚನೆ, ತಪ್ಪು ತಿಳುವಳಿಕೆ, ಅನುಮಾನ ಇತ್ಯಾದಿ ಬದುಕಿನ ಆಕಸ್ಮಿಕ ಅವಘುಡಗಳು ಕಾರಣವಾಗಿವೆ.

ಪ್ರೇಮದಲ್ಲಿ ಪರಸ್ಪರರು ಹೇಗೆ ಪ್ರೀತಿಸುವುದು ಮುಖ್ಯವೋ ಹಾಗೆಯೇ ಅಂತಹ ಪ್ರೀತಿಯನ್ನು ಕೊನೆವರೆಗೂ ಸಂಯಮದಿಂದ ಜತನದಿಂದ ಹೊಂದಾಣಿಕೆಯಿಂದ ಕಾಯ್ದುಕೊಳ್ಳುವುದು ಅಷ್ಟೇ ಮುಖ್ಯ. ಪ್ರೇಮದಲ್ಲಿ ಬಿರುಕು ಮೂಡಿದ ಕ್ಷಣ ಮನ ಅದಕ್ಕೆ ಸ್ಪಂದಿಸುವ ಬಗೆ ಯಾವ ರೀತಿ ಇರುತ್ತದೆಂಬುದನ್ನು ಕವಿ ತಮ್ಮ ಕವಿತೆಯಲ್ಲಿ ಚಿತ್ರಿಸಿದ್ದಾರೆ.

ಏಕೆ ಈ ನಿಟ್ಟುಸಿರು? ಈ ವ್ಯರ್ಥ ಕಂಬನಿ?
ಮರೆತುಬಿಡು ಅವಳನ್ನು, ಮನವೇ
ಅವಳೊಲವು ಮುತ್ತಲ್ಲ, ಮುಂಜಾವಿನಿಬ್ಬನಿ
ಮರೆತುಬಿಡು ಅವಳನ್ನು, ಮನವೇ[೯].

ಅಸಮಾಧಾನದಿಂದ ಕವಿ ತನ್ನ ಮನಕ್ಕೆ ಮರೆತುಬಿಡು ಅವಳನ್ನು ಮನವೇ ಎಂದು ಸಂತೈಸ ಹೊರಟಿದ್ದಾರೆ. ಆದರೆ ಪ್ರೇಮದ ನೆನಪುಗಳು ಅಷ್ಟು ಬೇಗನೆ ಸಾಯುವಂತವುಗಳಲ್ಲ. ದುಃಖಗಳಿಂದ ದೂರಾಗುವುದಕ್ಕೆ ಮರೆವು ಬೇಕು ಆದರೆ ಪ್ರೇಮವೇ ಹಾಗೆ ಅದರಿಂದ ದೂರಾದರೂ ಅದರ ನೆನಪು ಮಾತ್ರ ಮನವನ್ನು ಕಲಕುತ್ತದೆ, ಪುಳಕಗೊಳ್ಳುವಂತೆ ಮಾಡುತ್ತದೆ. ಪರಿಪರಿಯಾಗಿ ಒತ್ತಾಯ ಪೂರ್ವಕವಾಗಿ ಇವುಗಳಿಂದ ಮುಕ್ತನಾಗಲು ಕವಿ ಹಾತೊರೆಯುತ್ತಿರುವುದನ್ನು ಇಲ್ಲಿ ಕಾಣಬಹುದು.

ಪ್ರೀತಿಸುವವರು ಜಗದಲ್ಲಿ ಎಲ್ಲಿದ್ದಾರೋ ಅಲ್ಲಿ ದ್ವೇಷಿಸುವವರು ಇರುತ್ತಾರೆಂಬುದು ಸಹಜ. ಪ್ರೀತಿಯು ನಮ್ಮ ಬಾಳನ್ನು ಬೆಳಗುವ ಜ್ಯೋತಿ, ಅದು ಆನಂದದ ಬುಗ್ಗೆ ಎಂದು ಏನೆಲ್ಲಾ ಹೇಳಿದರೂ ನಮ್ಮ ಪರಂಪರೆಯಲ್ಲಿ ಪ್ರೀತಿಗೆ ಸಿಕ್ಕ ಬೆಲೆ ಕಡಿಮೆ ಎಂದೇ ಹೇಳಬೇಕು. ಪರಂಪರೆಯ ಮುಖ್ಯ ಲಕ್ಷಣ ಸಂಪ್ರದಾಯಗಳ ಆಚರಣೆ. ಸಂಪ್ರದಾಯಗಳೆಂದರೆ ಒಂದು ಬಗೆಯಲ್ಲಿ ಕಟ್ಟಳೆಗಳೆಂದರೆ ತಪ್ಪಾಗಲಾರದು. ಪರಂಪರೆಯು ಪ್ರೀತಿಯನ್ನು ಸದಾ ತನ್ನ ಕಾಲ್ತುಳಿತಕ್ಕೆ ಒಳಗು ಮಾಡಿದೆ ಹಾಗೂ ಪ್ರೀತಿ ತನಗೆ ತಲೆಬಾಗಬೇಕು ತನ್ನ ಅಧೀನದಲ್ಲಿಯೇ ಅದು

ಕಳೆದು ಹೋಗಬೇಕೆಂಬುದು ಪರಂಪರೆಯ ಆಶಯ. ಈ ಹಿನ್ನಲೆಯಲ್ಲಿ ಹೇಳುವುದಾದರೆ ತೀರಾ ಮೊದಲಿನಿಂದಲೂ ಪರಂಪರೆ ಮತ್ತು ಪ್ರೀತಿ ಎರಡು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಚಲಿಸುವಂತವುಗಳಾಗಿವೆ. ಇವುಗಳಿಗೆ ಒಂದೊಂದಕ್ಕೂ ಒಂದೊಂದು ತತ್ವ ಆಶಯಗಳು ಇರುತ್ತವೆ. ಪರಂಪರೆಯು ತನ್ನ ತತ್ವಗಳನ್ನು ಸಡಿಲಗೊಳಿಸುವುದಿಲ್ಲ.ಇತ್ತ ಪ್ರೀತಿಯು ತನ್ನ ರೀತಿಯನ್ನು ಬಿಟ್ಟು ಅನ್ಯಮಾರ್ಗ ತುಳಿಯುವುದಿಲ್ಲ. ಎರಡೂ ಕಠಿಣ. ಆ ಕಠಿಣತೆಯನ್ನು ಉಳಿಸಿಕೊಳ್ಳುವುದರಲ್ಲಿಯೇ ಅವುಗಳ ಮಹತ್ವವು ಅಡಗಿದೆ ಎಂದರೆ ತಪ್ಪಾಗಲಾರದು. ಪರಂಪರೆ ಮತ್ತು ಪ್ರೀತಿಯ ನಡುವೆ ಹೀಗೆ ಅನೇಕ ವೈರುಧ್ಯಗಳು ಕಂಡು ಬರುತ್ತವೆ. ಇವೆರಡರ ನಡುವೆ ಒಂದು ಬಗೆಯ ದೀರ್ಘ ಸಂಘರ್ಷ ಇದ್ದೇ ಇದೆ. ಹೀಗಿದ್ದಾಗ ಜಯ ಪರಂಪರೆಗಾಗಬಹುದು ಅಥವಾ ಪ್ರೀತಿಗೂ ಆಗಬಹುದು. ಅದು ಕಾಲವನ್ನು, ಪ್ರೀತಿಸುವ ವ್ಯಕ್ತಿಗಳನ್ನು, ಕೆಲವೊಮ್ಮೆ ಪರಿಸರವನ್ನು ಅವಲಂಬಿಸಿರುತ್ತದೆ ಎಂದು ಹೇಳಬಹುದು. ಗೆಲ್ಲುವುದು ಇಲ್ಲವೇ ಸೋಲುವುದು ಇವೆರಡೇ ಪರಂಪರೆಗಿರುವ ಮಾರ್ಗಗಳು. ಇದು ಪರಂಪರೆಗಿರುವ ವ್ಯಾಪಕತೆ ಆದರೆ ಪ್ರೀತಿ ಹಾಗಲ್ಲ ಸೋಲುವುದು, ಗೆಲ್ಲುವುದನ್ನು ಮೀರಿಯೂ ಪ್ರೀತಿ ಸೋತು ಗೆಲ್ಲುವ ಕಲೆಯನ್ನು ತನ್ನಲ್ಲಿ ಕರಗತ ಮಾಡಿಕೊಂಡಿದೆ ಈ ಕಲೆಯಿಂದಲೇ ಪ್ರೀತಿಗೆ ಪರಂಪರೆಗಿಂತ ಹೆಚ್ಚಿನ ಮಹತ್ವ ದೊರೆಯುತ್ತದೆ ಹಾಗೂ ಅಂತಿಮವಾಗಿ ಸತ್ಯದ ಗೆಲುವು ಅನ್ನುವುದಿದ್ದರೆ ಅದು ಪ್ರೀತಿಯಿಂದ ಮಾತ್ರ ಸಾಧ್ಯ ಎಂಬುದು ನಾವು ಗಮನಿಸಬೇಕಾದ ಸಂಗತಿಯಾಗಿದೆ.

ಹೀಗೆ ಪರಂಪರೆ ಮತ್ತು ಪ್ರೀತಿಯ ಹಿನ್ನೆಲೆಯಲ್ಲಿ ಕವಿ ಲಕ್ಷ್ಮಣರಾವ್ ಒಂದು ಕವಿತೆ ರಚಿಸಿದ್ದಾರೆ,

ಜಗವೇ ನಮಗಿಂದು ಹಗೆಯಾಗಿದೆ
ಬೇರಾಗಬೇಕಂದಿದೆ, ನಾವು
ದೂರಾಗಬೇಕೆಂದಿದೆ.
ಕುಲವೇ ನಮಗಿಂದು ಹೊಲೆಯಾಗಿದೆ
ತಲೆ ಬಾಗಬೇಕೆಂದಿದೆ, ಪ್ರೀತಿ
ಬಲಿಯಾಗಬೇಕೆಂದಿದೆ.[೧೦]

ಇಲ್ಲಿ ವ್ಯಕ್ತವಾಗಿರುವ ಭಾವ ತುಂಬಾ ಔಚಿತ್ಯಪೂರ್ಣವಾದದ್ದು. ಪರಂಪರೆಯ ಭೂತ ಪ್ರೀತಿಯನ್ನು ಹೇಗೆ ಬೆನ್ನುಹತ್ತಿದೆ ಎಂಬುದು ಈ ಮೇಲಿನ ಸಾಲುಗಳಿಂದ ಸ್ಪಷ್ಟವಾಗುತ್ತ ಹೋಗುತ್ತದೆ. ಅಂದರೆ ಜಗದ ಸತ್ಯಕ್ಕೂ ಪ್ರೀತಿಯ ಸತ್ಯಕ್ಕೂ ತುಂಬಾ ವ್ಯತ್ಯಾಸವಿದೆ. ಜಗದ ಪರಿಧಿಯಲ್ಲೇ ಕಳೆದುಹೋಗಬೇಕಾದ ಬದುಕಿನ ಒಂದು ಭಾಗವೇ ಪ್ರೀತಿ. ಆದರೆ ಪ್ರೀತಿಯೇ ಜಗತ್ತಲ್ಲ ಎಂಬ ತಿಳಿವಳಿಕೆ ಜಗತ್ತಿನದಾದರೆ, ಪ್ರೀತಿಯಿಂದಲೇ ಜಗತ್ತು. ಪ್ರೀತಿಯನ್ನು ಅನುಭವಿಸುವುದಕ್ಕಾಗಿಯೇ, ಸವಿಯುವುದಕ್ಕಾಗಿಯೇ ಜಗತ್ತಿನ ಚರಾಚರಗಳ ಸೃಷ್ಠಿಯಾಗಿರುವುದು. ಪ್ರೀತಿಯೇ ಇಲ್ಲಿ ನೃಪ ಉಳಿದ ಜಗತ್ತೆಂಬುದೆಲ್ಲವೂ ಬರೀ ನೆಪ ಎಂಬುದು ಪ್ರೀತಿಯ ತಿಳಿವಳಿಕೆ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಜಗದ ಅಂತಿಮ ಸತ್ಯವೆಂದರೆ ಅದು ಪ್ರೀತಿ ಒಂದೇ ಎಂದು ಹೇಳಬಹುದು. ಪರಂಪರೆಯ ಬೇರುಗಳಲ್ಲಿ ಒಂದಾದ ಕುಲವೆಂಬುದು ಕೂಡ ತುಂಬಾ ಹಿಂದಿನಿಂದಲೂ ಪ್ರೇಮಕ್ಕೆ

ಅಷ್ಟಿ ಆತಂಕ ಉಂಟು ಮಾಡಿದೆ ಹಾಗೂ ತನ್ನ ಅಟ್ಟಹಾಸಕ್ಕೆ ಅದು ಎಷ್ಟೋ ಪ್ರೀತಿಯ ಜೀವಗಳನ್ನು ಬಲಿತೆಗೆದುಕೊಂಡಿರುವುದು ಸತ್ಯ ಸಂಗತಿ. ಪ್ರೀತಿಯ ಕಾಲಡಿಯಲ್ಲಿ ಬದುಕಬೇಕಿದ್ದ ಜಗವಿಂದು ಜಾತಿ, ಧರ್ಮ, ಸಂಕೋಲೆಗಳಲ್ಲಿ ಬಂಧಿಯಾಗಿ ಪ್ರೀತಿಯನ್ನೇ ತನ್ನ ಕಾಲ್ತುಳಿತಕ್ಕೆ ಸಿಕ್ಕಿಸಿ ಸಾಯಿಸುವಷ್ಟು ಜಗತ್ತು ಇಂದು ಕ್ರೂರವಾಗುತ್ತಿದೆ ಇದು ಇಂದು ನಿನ್ನೆಯ ಮಾತಲ್ಲ. ಹಿಂದಿನಿಂದ ಹರಿದುಬಂದ ಪರಂಪರೆಯಲ್ಲೇ ನಾವು ಇದನ್ನು ಗುರುತಿಸಬಹುದಾಗಿದೆ ಎಂಬುದು ಕವಿ ಲಕ್ಷ್ಮಣರಾವ್ ಅವರ ಅನನ್ಯ ಪ್ರಜ್ಞೆಯಾಗಿದೆ ಎಂದೇ ಹೇಳಬೇಕು. ಮುಂದುವರಿದು ಕವಿ ಕೊನೆಗೆ ಹೀಗೆ ಹೇಳುತ್ತಾರೆ,

> ಜಗವೇ ನಮಗಿಂದು ಹಗೆಯಾದರೂ
> ದಿಗಿಲುಂಟೆ ಪ್ರೀತಿಗೆ? ಬೇರೆ
> ಮಿಗಿಲುಂಟೇ ಪ್ರೀತಿಗೆ[೧೦] ?

ಜಗದೊಳಗಿದ್ದು ಜಗದಂತಾಗದೇ ತನ್ನತನದಿಂದಲೇ ತನ್ನ ಜೀವಂತಿಕೆಯನ್ನು ಕಾಯ್ದುಕೊಳ್ಳುವ ಮೂಲಕ ಹೇಗೆ ಪ್ರೀತಿ ಅಜರಾಮರವಾಗುತ್ತದೆಂಬ ವಿಸ್ಮಯವನ್ನು ಕವಿ ತುಂಬಾ ಸರಳವಾಗಿಯೇ ನಮ್ಮ ಕಣ್ಣೆದುರು ಕಟ್ಟಿಕೊಡುತ್ತಾರೆ. ಪ್ರೀತಿಗೆ ದಿಗಿಲು ಇಲ್ಲ, ಪ್ರೀತಿಗೆ ಮಿಗಿಲು ಇಲ್ಲ ಎನ್ನುವಲ್ಲಿ ಪ್ರೀತಿಯನ್ನೇ ಎತ್ತಿಕೊಂಡು ಮುದ್ದಾಡುವ ಕವಿ ಭಾವ ಅಮೂಲ್ಯವಾದುದೆಂದು ಹೇಳಬಹುದು.

> ಮನೆಯೇ ಸೆರೆಮನೆಯಾಗಿ, ಸಂಬಂಧ ಬಂಧನವಾಗಿ
> ಕಾಲವೇ ಕಾಲ್ತೊಡಕಾಗಿ ನಮ್ಮನ್ನು ಕಾಡಿದೆ
> ನೆತ್ತಿಯಲ್ಲಿ ಕತ್ತಿ ತೂಗಿದ್ದರೂ ಅಂಜುವುದೇ ಪ್ರೀತಿಯು?
> ಅದುಮಿದಷ್ಟೂ ಮೇಲೆ ಚಿಮ್ಮುವುದೇ ಪ್ರೀತಿಯ ರೀತಿಯು.[೧೧]

ಕವಿ ಇಲ್ಲಿ ಪ್ರೀತಿಯ ರೀತಿಯನ್ನು ತುಂಬಾ ಎಚ್ಚರಿಕೆಯಿಂದ ಹೇಳಿದ್ದಾರೆ. 'ಅದುಮಿದಷ್ಟೂ ಮೇಲೆ ಚಿಮ್ಮುವುದೇ ಪ್ರೀತಿಯ ರೀತಿಯು' ಎನ್ನುವಲ್ಲಿ, ಪ್ರೀತಿಯು ಅದುಮಿಡಲಾಗದ್ದು ಎಂಬ ಭಾವವು ಸೇರಿದೆ. ಪ್ರೀತಿ ಅದುಮಿಡಲಾಗದ್ದು ಎಂದು ಅದನ್ನು ಅಭಿವ್ಯಕ್ತಿಸ ಹೋದರೆ ಅದರ ಅಭಿವ್ಯಕ್ತಿಯು ಅಪೂರ್ಣ ಅಂದರೆ ಕೊನೆ ಮುಟ್ಟಲಾರದ್ದು ಎಂದು ಅರ್ಥ ಅಂದರೆ ಪ್ರೀತಿಗೆ ಮೊದಲಿಲ್ಲ ಕೊನೆಯಿಲ್ಲ. ಒಂದು ಬಗೆಯಲ್ಲಿ ಅದು ಕುವೆಂಪುರವರ ಕಲ್ಪನೆ ಅನಿಕೇತನಕ್ಕೆ ಹತ್ತಿರವಾದುದೆಂದೇ ಹೇಳಬಹುದು ಅಥವಾ ಪ್ರೇಮ ಅನಿಕೇತನವಾದುದೆಂತಲೂ ನಾವು ಹೇಳಬಹುದು.

ಪ್ರಕೃತಿಯ ಮಡಿಲಲ್ಲಿ ನದಿ, ಹಳ್ಳ-ಕೊಳ್ಳ ಕಡಲು ಹೀಗೆ ಏನೆಲ್ಲಾ ಇವೆ. ಈ ಕಡಲಿನಿಂದ ಮುತ್ತು ಹವಳಗಳು ಸಿಗಬಹುದು. ಕೆಲವು ಸಂದರ್ಭದಲ್ಲಿ ಪ್ರಕೃತಿ ವೈಪರೀತ್ಯಗಳಿಂದ ಅಲ್ಲಿ ಕೋಲಾಹಲವು ಉಂಟಾಗಬಹುದು. ಆದರೆ ಪ್ರೇಮಕವಿ ಲಕ್ಷ್ಮಣರಾವ್ ಅವರು ಇವುಗಳಿಂದ ದೂರನಿಂತು ತನ್ನವಳ ಹೃದಯದ ವಿಶಾಲ ಕಡಲಿನ ಕಡೆಗೆ ನಮ್ಮನ್ನು ಕರೆದೊಯ್ಯುತ್ತಾರೆ.

ಅವಳ ಹೃದಯ ವಿಶಾಲ ಕಡಲಿನ ಹಾಗೆ
ಅದರಲ್ಲಿ ಮುಳುಗಿದೆ ನಾನು ನಿಧಿ ಶೋಧಕೆ
ಹವಳವೆ? ಮುತ್ತೆ? ಅಲ್ಲಿ, ತಳದಲೇನಿದೆ?
ಅಲ್ಲುಂಟು ಭಾಗ್ಯಶಾಲಿಗೆ ಪ್ರೀತಿಯ ಸುಧೆ[೧೩]

ಅವಳ ಎದೆಯಾಳದ ಕಡಲಲ್ಲಿ ಹವಳ ಮುತ್ತುಗಳಿಲ್ಲ ಅದಕ್ಕೂ ಮಿಗಿಲಾದ , ಬೆಲೆಕಟ್ಟಲಾಗದ ಪ್ರೀತಿಯ ಸುಧೆ ಇದೆ ಅದೇ ನಮ್ಮನ್ನು ಬದುಕಿಸುವುದು ಎಂಬ ಅರಿವಿನ ಬೆಳಗನ್ನು ತಮ್ಮ ಸಹೃದಯಿಗಳೆದುರು ತೋರುತ್ತಾರೆ.

ಪ್ರೀತಿಯ ಅಸ್ತಿತ್ವವನ್ನು ಸಾಮಾನ್ಯವಾಗಿ ಹೆಚ್ಚಾಗಿ ಮಾನವ ಸಮುದಾಯದಲ್ಲಿ ಮಾತ್ರ ಗುರುತಿಸುತ್ತೇವೆ. ಆದರೆ ಕವಿ 'ಒಡನಾಟ' ಎಂಬ ಕವಿತೆಯಲ್ಲಿ ಪ್ರೀತಿಯ ಒಡನಾಟ ಹೇಗೆ ಎಲ್ಲೆಲ್ಲಿ ಅದು ಅಭಿವ್ಯಕ್ತವಾಗುತ್ತೆಂಬುದನ್ನು ಸೂಕ್ಷ್ಮವಾಗಿ ವಿವರಿಸುತ್ತ ಹೋಗಿದ್ದಾರೆ. ಪ್ರಕೃತಿಯ ಸರಸ ಸಲ್ಲಾಪಗಳನ್ನು, ಪ್ರೇಮವನ್ನು ಅರಿಯಲು ಒಳಗಣ್ಣು ಬೇಕು. ಲಕ್ಷ್ಮಣರಾವ್ ಅದನ್ನು ತೆರೆದು ನೋಡಿದ್ದಾರೆ.

ಗಾಳಿ ಮರಕ್ಕೆ
ಕಚಗುಳಿಯಿಟ್ಟಿತು.
ಮರ ತೊನೆದಾಡಿ
ಕಿಲಕಿಲ ನಕ್ಕಿತು.[೧೪]

ಪ್ರೀತಿ ತಾನಿರುವ ಸ್ಥಳದಲ್ಲಿ ಒಂದು ಬಗೆಯ ಸಂಚಲನವನ್ನುಂಟು ಮಾಡಬಲ್ಲ ಶಕ್ತಿ ಸ್ವರೂಪಿ. ಪ್ರಕೃತಿಯಲ್ಲಿ ಜೀವ ಕಳೆಯುತ್ತಿರುವ ಮೂರ್ತರೂಪದ ಮರಕ್ಕೂ ನಮ್ಮನ್ನು ಸ್ಪರ್ಶಿಸಿದರೂ ನಮ್ಮ ವಿಚಾರಕ್ಕೆ ನಿಲುಕದ ಅಮೂರ್ತ ಗಾಳಿಗೂ ಸಂಬಂಧ ಕಲ್ಪಿಸಿದ್ದಾರೆ ಕವಿ ಇಲ್ಲಿ. ಈ ಸಂಬಂಧದಲ್ಲಿ ಪ್ರಣಯವಿದ್ದರೂ ಅದರ ಪ್ರಾರಂಭ ಮಾತ್ರ ಪ್ರೇಮದಿಂದಲೇ ಎಂದು ಹೇಳಬಹುದು. ಆದರೆ ಇದು ಇಲ್ಲಿ ಮುಖ್ಯವಲ್ಲ. ಮೂರ್ತಕ್ಕೂ ಅಮೂರ್ತಕ್ಕೂ, ಆಕಾರಕ್ಕೂ, ನಿರಾಕಾರಕ್ಕೂ ನಡುವೆ ಉಂಟಾಗುವ ಪ್ರೇಮದ ಪರಿಯನ್ನು ಕವಿ ಲಕ್ಷ್ಮಣರಾವ್ ಚಿತ್ರಿಸಿರುವುದು ಬೆರಗು ಹುಟ್ಟಿಸುವಂತದ್ದಾಗಿದೆ. ಅಂದರೆ ಪ್ರೇಮಕ್ಕೆ ಭೇದ ಭಾವವಿಲ್ಲ. ಆಕಾರವಿದ್ದು ನಿರಾಕಾರ, ಮೂರ್ತವಾದರೂ ಅಮೂರ್ತ, ಕೈಗೆ ಸಿಕ್ಕಂತೆನಿಸಿದರೂ ಅಪ್ಪಿಕೊಳ್ಳಲಾಗದಷ್ಟು ನಿಗೂಢ ಈ ಪ್ರೇಮ ಎಂದು ಹೀಗೆ ಪ್ರೇಮದ ಮೂಲ ರಹಸ್ಯಗಳನ್ನು ಬಿಡಿಸಿ ಹೇಳುತ್ತಾರೆ ಲಕ್ಷ್ಮಣರಾವ್ ಅವರು.

ಭ್ರಮೆಗೂ ಬದುಕಿಗೂ ನಡುವೆ ತುಂಬಾ ಅಂತರವಿದೆ. ಅಂದರೆ ಬದುಕಿನಲ್ಲಿ ಉಂಟಾಗುವ ಅವಘಡಗಳಿಂದ ನಾವು ಇಟ್ಟ ನಂಬಿಕೆಗಳು, ಭರವಸೆಗಳು ಹುಸಿ ಎನಿಸಿಬಿಡುತ್ತವೆ.ಅಂತಹ ಸಮಯಮಗಳಲ್ಲಿಯೇ ಬದುಕು, ನಲ್ಮೆ ಎಲ್ಲವೂ ಭ್ರಮೆಯಾದಂತೆನಿಸುತ್ತವೆ ಆದರೆ ಲಕ್ಷ್ಮಣರಾವ್ ಅವರು ಭ್ರಮೆ ಎಂಬುದೇ ಭ್ರಮೆ. ಬದುಕಿನ ಹತಾಶೆ, ನಿರಾಶೆಗಳು ಭ್ರಮಾತ್ಮವನ್ನು ನಮ್ಮಲ್ಲಿ ಹುಟ್ಟು ಹಾಕುತ್ತವೆ. ಅದಕ್ಕಾಗಿ ಭ್ರಮೆಯ ಗೂಡನ್ನು ಸೇರಬಾರದು. ಅದು ಬದುಕಿನ ಅಧಃಪತನಕ್ಕೆ ಹಾದಿ ಮಾಡುತ್ತದೆ. ಅದಕ್ಕಾಗಿ ಒಲವಿನ ಬಂಧನದಲ್ಲಿಯೇ ಈ ಬದುಕು

ಬಂಧಿಯಾಗಿರಬೇಕು. ಆಗ ಮಾತ್ರ ಬದುಕು ನಂದನವಾಗುತ್ತದೆಂಬ ಸಂದೇಶವನ್ನು ಪ್ರಸ್ತುತ ಕವಿತೆಯಲ್ಲಿ ತಿಳಿಸಿದ್ದಾರೆ.

ಈ ಬುವಿಯನು ಈ ಬಾಳನು
ಭ್ರಮೆಯನ್ನೆಬಹುದೇ ಈ ಒಲವನು?
ಎಂದೆಂದೂ ನಮಗಿರಲಿ ಈ ಬಂಧನ
ಇಲ್ಲೇ ಇದೆ ನಂದನ [೧೫]

ಆಧುನಿಕತೆಯ ಈ ಯಾಂತ್ರಿಕ ದಿನಗಳಲ್ಲಿ ಬದುಕಿನ ಗತಿಯೇ ಬದಲಾಗಿ ಹೋಗಿದೆ. ಬದುಕು ಕೂಡ ಯಂತ್ರಗಳ ತಿರುಗುವಿಕೆಯಂತೆ ಸುಖಾಸುಮ್ಮನೆ ತಿರುಗಿ ಲಾಭ-ನಷ್ಟಗಳ ಸುಳಿಯಲ್ಲಿಯೇ ಅಂತ್ಯವಾಗುವ ದುರಂತ ಇಂದು ನಮ್ಮನ್ನು ಮುಖಾಮುಖಿಯಾಗಿದೆ. ಇಂದು ನಗರೀಕರಣದ ಬೆಳವಣಿಗೆ ತೀವ್ರಗತಿಯಲ್ಲಿ ಸಾಗಿದೆ. ಈ ಬೆಳವಣಿಗೆಯಿಂದ ಸಂಬಂಧಗಳಿಗೆ ಬೆಲೆಯೇ ಇಲ್ಲದಂತಾಗಿದೆ. ಜೊತೆಗೆ ಅವಿಭಕ್ತ ಕುಟುಂಬಗಳು ವಿಘಟನೆ ಹೊಂದಿ ವಿಭಕ್ತ ಕುಟುಂಬಗಳು ಹೆಚ್ಚಾಗುತ್ತಿವೆ. ಈ ವಿಭಕ್ತ ಕುಟುಂಬಗಳ ಜೋಡಿಗಳಲ್ಲಿ ಅಂತರ್ಜಾತಿ ವಿವಾಹವಾದವರೇ ಹೆಚ್ಚು! ಎಲ್ಲಿಯ ಹೆಣ್ಣೋ ಇನ್ನೆಲ್ಲಿಯ ಗಂಡೋ ಹೊಟ್ಟೆಪಾಡಿನ ನಿಮಿತ್ಯ ನಗರಕ್ಕೆ ಬಂದು, ತನಗೆ ಅಂತ ಯಾರು ನೆರೆ-ಹೊರೆ, ಬಂಧು-ಬಳಗವಿಲ್ಲದೇ ಏಕಾಂಗಿಯಾಗಿ ಬದುಕನ್ನು ಕಳೆಯುವಾಗ ಬದುಕಿನ ಸಾಂಗತ್ಯಕ್ಕಾಗಿ ಅನಿವಾರ್ಯವಾಗಿ ಅಪರಿಚಿತರಾದರೂ ಒಬ್ಬರನ್ನೊಬ್ಬರು ಕೂಡುತ್ತಾರೆ. ಪ್ರೇಮಿಸುತ್ತಾರೆ. ವಿವಾಹವಾಗುತ್ತಾರೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪ್ರೇಮದ ಈ ಪ್ರಕ್ರಿಯೆಗಳಲ್ಲಿ ಅವಸರವು ಮನೆ ಮಾಡಿಕೊಂಡಿರುತ್ತದೆ. ಇಂದು ಪರಿಚಯ, ನಾಳೆ ಪ್ರೀತಿಸುವಿಕೆ, ನಾಡಿದ್ದು ಪ್ರಣಯ ಹೀಗೆ ಪ್ರೇಮದ ಮೋಹದಲ್ಲಿ ಯಾವುದನ್ನೂ ಹೆಚ್ಚಾಗಿ ಚಿಂತಿಸದೇ ತೆಗೆದುಕೊಳ್ಳುವ ಅವಸರದ ನಿರ್ಣಯಗಳಿಂದ ಬದುಕು ಕೆಲವೊಮ್ಮೆ ಕಂಪಿಸುವುದುಂಟು. ಹೀಗೆ ಬದುಕು ಕಂಪಿಸಿದಾಗ ಸಂಬಂಧಗಳ ನಡುವೆ ಸಹಜವಾಗಿ ಬಿರುಕುಗಳು ಗೋಚರವಾಗಿ ಬದುಕು ಗಾಳಿಗೋಪುರವಾದಂತೆನಿಸುತ್ತದೆ. ಎಳೆವಯಸ್ಸಿನಲ್ಲಿ ಅರಳಿದ ಒಲವು ಕಾಲದ ಮರ ಬಲಿತಾಗಲೂ ಮೊದಲ ಪ್ರೀತಿ ಮೊದಲಿನಂತೆ ತನ್ನತನವನ್ನು ಉಳಿಸಿಕೊಂಡರೆ ಅಲ್ಲಿ ಪ್ರೀತಿಯ ಸಾರ್ಥಕ್ಯವನ್ನೂ ಕಾಣಬಹುದು. ಆದರೆ ಈ ಬಗೆಯ ಪ್ರೇಮ ಸಾರ್ಥಕ್ಯವನ್ನು ಕಾಣುವ ಪ್ರೇಮಗಳು ಇಂದು ತೀರಾ ವಿರಳ. ಕಾರಣ ಎಷ್ಟು ಬೇಗ ಪ್ರೇಮಿಸುತ್ತಾರೋ, ಕೂಡುತ್ತಾರೋ ಕೊನೆಗೆ ಮನಸುಗಳನರಿಯದೆ ವಿಚ್ಛೇದನವನ್ನು ನೀಡುವ ದುಃಖಾಂತ್ಯ ವಿವಾಹಗಳ ದುರ್ಭರ ಕಾಲವಿದು. ಅದಕ್ಕೆ ಕವಿ ಲಕ್ಷ್ಮಣರಾವ್ ಅವರು 'ಮದುವೆ' ಎಂಬ ತಮ್ಮ ಕವಿತೆಯಲ್ಲಿ ಹೀಗೆ ಹೇಳುತ್ತಾರೆ:

ಎಲ್ಲೋ ಕೆಲವರಿಗೆ ಮಾತ್ರ
ಪ್ರೇಮ ಮದುವೆ ಸುಸೂತ್ರ
ಕಾವಾರಿದ ನಂತರವೂ
ಕಾಪಾಡಿಕೊಳ್ಳುವರು ಒಲವು [೧೬]

ಒಬ್ಬರನ್ನು ನಾವು ಪ್ರೀತಿಸುವುದು ಎಷ್ಟೋ ಆ ಪ್ರೀತಿಯನ್ನು ಕೊನೆ ಉಸಿರಿರುವತನಕ ಕಾಯ್ದುಕೊಂಡು ಹೋಗುವುದು ಕೂಡ ಅಷ್ಟೇ ಮುಖ್ಯ ಎಂಬುದನ್ನು ನಾವಿಲ್ಲಿ ಮರೆಯುವಂತಿಲ್ಲ.

ಪ್ರೇಮ ಎಂಬುದು ಮುಗಿಯದ ಅಧ್ಯಾಯ. ಶತಮಾನಗಳಿಂದಲೂ ಪ್ರೇಮದ ಬಗ್ಗೆ ಬರೆಯುತ್ತ, ಬದುಕುತ್ತ, ಅನುಭವಿಸುತ್ತ ಎಲ್ಲರೂ ಸತ್ತರು. ಅವರು ಸತ್ತ ಮೇಲೂ ಉಳಿದಿರುವುದು ಪ್ರೇಮ. ಈಗಲೂ ಬರೆಯುತ್ತಾರೆ. ಬದುಕುತ್ತಾರೆ. ಇನ್ನು ಮುಂದೆಯೂ....! ಎಷ್ಟು ಬರೆದರೂ ಇನ್ನು ಉಳಿದಿರುತ್ತದೆ ಸಾವಿಲ್ಲದ ಅಕ್ಷರಗಳಂತೆ, ಅನಂತವಾಗಿರುವ ಆಕಾಶದಂತೆ, ಹುಟ್ಟು-ಸಾವುಗಳಂತೆ! ಪ್ರೇಮ ಕೆಲವರಿಗೆ ಬದುಕು ನಿದಿರೆ- ನೀರಡಿಕೆ, ಸರ್ವಸ್ವ. ಇನ್ನೂ ಕೆಲವರಿಗೆ ಹುಚ್ಚು ಹೊಳೆ, ಮುಳ್ಳು ಮಳೆ, ಸಿಹಿಯಾದ ವಿಷ ಇದನ್ನು ಕುರಿತು ಹೀಗೆ ಹೇಳುತ್ತಾರೆ ಕವಿ.

ಕೆಲವರ ಪ್ರೇಮ ಹುಚ್ಚು ಹೊಳೆ
ಕೆಲವರಿಗೋ ಅದು ಮುಳ್ಳು ಮಳೆ
ಎಲ್ಲೋ ಕೆಲವರ ಪಾಲಿಗೆ ಪ್ರೇಮ
ಬತ್ತದ ಒಳಸೆಲೆ[೧೭]

ಹೀಗೆ ಲಕ್ಷ್ಮಣರಾವ್ ಅವರು ತಮ್ಮ ಕವಿತೆಗಳುದ್ದಕ್ಕೂ ಪ್ರೀತಿಯ ಅನೇಕ ಆಯಾಮಗಳನ್ನು ಅನಾವರಣಗೊಳಿಸಿದರೂ ಅಂತಿಮವಾಗಿ ಅವರು ಪ್ರೇಮವೇ ನಿರಂತರ ಎಂಬ ಆಖ್ಯಾನದ ಕಡೆ ನಡೆಯುತ್ತಾರೆ.

ಪ್ರೇಮಿಗಳಲ್ಲಿ ಹಲವು ಥರ
ಪ್ರೇಮಕ್ಕುಂಟು ಹಲವು ಸ್ತರ
ದುರಂತವಿರಲಿ, ಸುಖಾಂತವಿರಲಿ
ಪ್ರೇಮ ನಿರಂತರ[೧೮]

ಒಟ್ಟಾರೆಯಾಗಿ ಈ ಪ್ರೇಮದ ಆಖ್ಯಾನದ ಅಧ್ಯಯನದಲ್ಲಿ ಪ್ರೇಮ ಮತ್ತು ಬದುಕಿನ ನಡುವೆ ಇರುವ ವೈರುಧ್ಯಗಳನ್ನು, ವಾಸ್ತವದ ನಗ್ನಸತ್ಯಗಳನ್ನು ನಮ್ಮೆದುರು ತಮ್ಮ ವಿಶಿಷ್ಟ ಕಾವ್ಯಶೈಲಿಯಿಂದ ಹೇಗೆ ತೆರೆದಿಡುತ್ತಾರೆಂಬುದನ್ನು ನೋಡಲಾಗಿದೆ. ಈ ಹಿನ್ನೆಲೆಯಲ್ಲಿ ಲಕ್ಷ್ಮಣರಾವ್ ಅವರ ಪ್ರೇಮದ ಆಖ್ಯಾನವನ್ನು ಗುರುತಿಸಲಾಗಿದೆ. ಲಕ್ಷ್ಮಣರಾವ್ ಅವರು ಕವಿಯಾಗಿ, ಪ್ರೇಮಿಯಾಗಿ ಕಲ್ಪನಾ ಲಹರಿಯಲ್ಲಿ ತೇಲಿದಷ್ಟೇ ಸಹಜವಾಗಿ ವಾಸ್ತವ ಬದುಕಿನ ಸಾಮಾನ್ಯ ವ್ಯಕ್ತಿಯಾಗಿಯೂ ಪ್ರತಿಕ್ರಿಯಿಸುತ್ತಾರೆಂಬುದು ಇಲ್ಲಿ ಗಮನಿಸಬೇಕಾದ ಸಂಗತಿಯಾಗಿದೆ.

ಟಿಪ್ಪಣಿ

೧. ಪ್ರೇಮ ಗೀಮ... ಕ್ಯಾಮೆರಾ ಕಣ್ಣು, ಸಮಗ್ರ ಪದ್ಯ, ಪು. ೭

೨. ಅದೇ...

೩. ನೆನಪು... ಕ್ಯಾಮೆರಾ ಕಣ್ಣು, ಸಮಗ್ರ ಪದ್ಯ, ಪು. ೭೫

೪. ಅದೇ

೫. ಅದೇ

೬. ಪ್ರೀತಿಯೆಂದರೆ, ಕ್ಯಾಮೆರಾ ಕಣ್ಣು, ಸಮಗ್ರ ಪದ್ಯ, ಪು. ೩೭೩

೭. ಅದೇ

೮. ಅದೇ

೯. ಮರೆತುಬಿಡು ಅವನನ್ನು, ಮನವೇ, ಕ್ಯಾಮೆರಾ ಕಣ್ಣು, ಸಮಗ್ರ ಪದ್ಯ,
ಪು. ೪೩೬

೧೦. ಪ್ರೀತಿಯ ರೀತಿ, ಕ್ಯಾಮೆರಾ ಕಣ್ಣು, ಸಮಗ್ರ ಪದ್ಯ, ಪು. ೪೫೬

೧೧. ಅದೇ

೧೨. ಅದೇ

೧೩. ನನ್ನವಳು, ಕ್ಯಾಮೆರಾ ಕಣ್ಣು, ಸಮಗ್ರ ಪದ್ಯ, ಪು. ೪೫೫

೧೪. ಒಡನಾಟ, ಕ್ಯಾಮೆರಾ ಕಣ್ಣು, ಸಮಗ್ರಪದ್ಯ, ಪು. ೫೬೨

೧೫. ಸ್ಪರ್ಶಮಣಿ, ಕ್ಯಾಮೆರಾ ಕಣ್ಣು, ಸಮಗ್ರ ಪದ್ಯ, ಪು. ೪೫೩

೧೬. ಮದುವೆ, ಕ್ಯಾಮೆರಾ ಕಣ್ಣು, ಸಮಗ್ರ ಪದ್ಯ, ಪು.೩೭೬

೧೭. ನಿರಂತರ, ಕ್ಯಾಮೆರಾ ಕಣ್ಣು, ಸಮಗ್ರ ಪದ್ಯ, ಪು. ೩೭೪

೧೮. ಅದೇ

ಅಧ್ಯಾಯ ಎರಡು

ಪ್ರೇಮ ಮೀಮಾಂಸೆ ಮತ್ತು ಸಖ ಸಖಿ ಕಲ್ಪನೆ.

ಅಧ್ಯಾಯ ಎರಡು

ಪ್ರೇಮ ಮೀಮಾಂಸೆ ಮತ್ತು ಸಖ ಸಖಿ ಕಲ್ಪನೆ.

ಮೀಮಾಂಸೆ ಎಂಬ ಪದ ನಮ್ಮಲ್ಲಿ ಹಿಂದಿನಿಂದಲೂ ಬಳಕೆಯಲ್ಲಿರುವುದು ನಮಗೆ ತಿಳಿದ ವಿಷಯವಾಗಿದೆ. ಇದನ್ನು ಶಾಸ್ತ್ರ ವಿಚಾರಗಳಿಗೆ ಸಂಬಂಧಿಸಿದಂತೆ ಅರ್ಥೈಸಲಾಗಿದೆ. ಮೀಮಾಂಸೆ ಎಂಬ ಪದವನ್ನು ಕೇಳಿದ ತಕ್ಷಣ ನಮಗೆ ನೆನಪಾಗುವ ಒಂದು ಮುಖ್ಯ ಕೃತಿಯೆಂದರೆ ತೀ.ನಂ. ಶ್ರೀ ಕಂಠಯ್ಯನವರ ಭಾರತೀಯ ಕಾವ್ಯ ಮೀಮಾಂಸೆ. ಭಾರತೀಯ ಕಾವ್ಯ ಮೀಮಾಂಸೆಯಂತೆ ಸೌಂದರ್ಯ ಮೀಮಾಂಸೆಯು ನಮ್ಮಲ್ಲಿರುವುದನ್ನು ನಾವು ಕಾಣಬಹುದು. ಪ್ರಸ್ತುತ ಅಧ್ಯಯನದಲ್ಲಿ ಪ್ರೇಮ ಮೀಮಾಂಸೆ ಮತ್ತು ಸಖ ಸಖಿ ಕಲ್ಪನೆ ಕುರಿತು ವಿವೇಚಿಸಲಾಗಿದೆ.

ಮುಖ್ಯವಾಗಿ ಮೀಮಾಂಸೆ ಎಂಬುದರ ಮೂಲ ಮೀಮಾಂಸ. 'ಮೀಮಾಂಸ'ಎಂದರೆ ಆಳವಾಗಿ ವಿಚಾರ ಮಾಡುವುದು; ಜಿಜ್ಞಾಸೆ ಎಂಬ ಅರ್ಥಗಳು ಬರುತ್ತವೆ. ಕಾವ್ಯದ ಸ್ವರೂಪ ಲಕ್ಷಣಾದಿಗಳನ್ನು ತಿಳಿಸುವ ಶಾಸ್ತ್ರ ಕಾವ್ಯ ಮೀಮಾಂಸೆ. ಸೌಂದರ್ಯದ ಸ್ವರೂಪವನ್ನು ವಿಚಾರ ಮಾಡುವುದು ಸೌಂದರ್ಯ ಮೀಮಾಂಸೆ ಎಂಂತೋ ಅಂತೆಯೇ ಪ್ರೇಮದ ಸ್ವರೂಪವನ್ನು ಅರಿಯುವುದು ಪ್ರೇಮ ಮೀಮಾಂಸೆಯಾಗಿದೆ ಎಂದು ಇಲ್ಲಿ ಸಂಕ್ಷಿಪ್ತವಾಗಿ ಹೇಳಬಹುದು.

"ಪ್ರೀತಿಯನ್ನು ಕುರಿತ ಯಾವುದೇ ಮೀಮಾಂಸೆಯಾದರೂ ಮಾನವನನ್ನು ಹಾಗೂ ಅವನ ಅಸ್ತಿತ್ವವನ್ನು ಕುರಿತ ಮೀಮಾಂಸೆಯಿಂದಲೇ ಮೊದಲಾಗಬೇಕು" ಎಂದು ಜರ್ಮನಿಯ ಎರಿಕ್ ಫ್ರಾಂ ತಮ್ಮ 'ಆರ್ಟ್ ಆಫ್ ಲವಿಂಗ್' ಕೃತಿಯಲ್ಲಿ ಪ್ರೇಮ ಮೀಮಾಂಸೆ ಕುರಿತು ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪ್ರಕೃತಿ ಮತ್ತು ಪ್ರಾಣಿ ಪಕ್ಷಿಗಳ ಅಸ್ತಿತ್ವಕ್ಕಿಂತ ಮಾನವನ ಅಸ್ತಿತ್ವಕ್ಕೆ ಯಾಕೆ ಹೆಚ್ಚು ಮಹತ್ವವಿದೆ ಎಂಬ ಪ್ರಶ್ನೆ ಎದುರಾಗಬಹುದು. ಅದಕ್ಕೆ ಉತ್ತರವನ್ನು ನಾವು ಹೀಗೆ ಕಂಡುಕೊಳ್ಳಬಹುದು. ಮಾನವನಿಗೆ ಪ್ರಾಣಿಗಳಿಗಿಂತಲೂ ಹೆಚ್ಚಾಗಿರುವ ಒಂದು ಮಹತ್ತರ ಶಕ್ತಿಯೆಂದರೆ ಅವನಲ್ಲಿರುವ ವಿಚಾರವಂತಿಕೆ. ಅವನು ತನ್ನ ವಿಚಾರಗಳಿಂದ ಪರಿಸರಕ್ಕಿಂತ, ಪ್ರಾಣಿಗಳಿಗಿಂತ ಭಿನ್ನವಾಗಿ ತೋರುತ್ತಾನೆ. ಈ ಬಗೆಯ ವಿವೇಕ ಪೂರ್ಣ ತಿಳುವಳಿಕೆ ಮಾನವನ ಅಸ್ತಿತ್ವಕ್ಕೆ ಒಂದು ಬೆಲೆ ತಂದು ಕೊಟ್ಟಿದೆ. ಹಾಗೂ ಈ ಜ್ಞಾನವೇ ಮಾನವನ ಅಸ್ತಿತ್ವದ ಪ್ರಬಲ ಸಾಧನವೂ ಆಗಿದೆಯೆಂದರೆ ತಪ್ಪಾಗಲಾರದು. ಮಾನವನಲ್ಲಿ ಕಾಣುವ ಇನ್ನೊಂದು ಮುಖ್ಯ ಸಂಗತಿಯೆಂದರೆ ಅವನು ಸಂಘಜೀವಿ ತನ್ನದೇ ಜನಾಂಗಗಳ ಗುಂಪುಗಳೊಂದಿಗೆ ಅವನು ಬೆಳೆಯುತ್ತ ತನ್ನ ಅಸ್ತಿತ್ವವನ್ನು ಗಟ್ಟಿಗೊಳಿಸುತ್ತಾ ಹೋಗುತ್ತಾನೆ. ಈಗಾಗಲೇ ನಮಗೆ ತಿಳಿದಂತೆ ಮಾನವನು ತನ್ನ ವಿವೇಚನ ಶಕ್ತಿಯಿಂದ ಅನೇಕ ಆಯ್ಕೆಗಳನ್ನು ತೆಗೆದುಕೊಳ್ಳುತ್ತ

ತನಗರಿವಿಲ್ಲದಂತೆ ತನ್ನ ಅನುಭವಗಳ ಮೂಲಕ ಬದುಕಿನ ಮೂಲವನ್ನು ಶೋಧಿಸುತ್ತ ಹೋಗುತ್ತಾನೆನ್ನಬಹುದು. ಅಂದರೆ ಮಾನವ ಬದುಕಿನಲ್ಲಿ ಆಯ್ಕೆಗಳು ಬಹುಮುಖ್ಯ ಅಂಶಗಳಾಗುತ್ತವೆ ಹಾಗೂ ಅವುಗಳೇ ಅವನ ಬದುಕನ್ನು ರೂಪಿಸುತ್ತವೆ ಎಂಬ ಸಂಗತಿ ಬೆಳಕಿಗೆ ಬರುತ್ತದೆ. ಲಕ್ಷ್ಮಣರಾವ್ ಅವರು ಮಾನವ ಅಸ್ತಿತ್ವದ ಪ್ರೇಮ ಮೀಮಾಂಸೆಯ ಹಿನ್ನೆಲೆಯಲ್ಲಿ ಮಾನವನ ಆಯ್ಕೆಯ ಕುರಿತು ಕವಿತೆಯೊಂದರಲ್ಲಿ ಹೀಗೆ ಹೇಳುತ್ತಾರೆ,

ಮಾವಿನ ಮರಕ್ಕೆ ಆಯ್ಕೆಯಿಲ್ಲ,
ಮಾವಿನ ಹಣ್ಣು;
ಬೇವಿನ ಮರಕ್ಕೆ ಆಯ್ಕೆಯಿಲ್ಲ,
ಬೇವಿನ ಹಣ್ಣು;
ನದಿಗೆ ಆಯ್ಕೆಯಿಲ್ಲ,
ಇಳಿಜಾರು;
ಬೆಟ್ಟಕ್ಕೆ ಆಯ್ಕೆಯಿಲ್ಲ,
ತುದಿ ಏರು;
ಮನುಷ್ಯನಿಗೆ ಆಯ್ಕೆಯಿದೆ
ಕೊನೆತನಕ-
ಆದ್ದರಿಂದ ಈ ಸ್ವರ್ಗ
ಈ ನರಕ.[೧]

ಮುಖ್ಯವಾಗಿ ಇಲ್ಲಿ ಲಕ್ಷ್ಮಣರಾವ್ ನಮ್ಮೆದುರು ಎರಡು ಅಂಶಗಳನ್ನು ತೆರೆದಿಡುತ್ತಾರೆ. ಮೊದಲನೆಯದಾಗಿ ಮಾನವ ಅಸ್ತಿತ್ವದ ಆಯ್ಕೆಯ ಸ್ವರೂಪ ಮತ್ತು ಎರಡನೆಯದಾಗಿ ಆಯ್ಕೆಯ ಫಲಿತಗಳು. ಮಾನವನ ಆಯ್ಕೆಗಳು ಸಕಾರಾತ್ಮವಾಗಿಯೂ, ನಕರಾತ್ಮಕವಾಗಿಯೂ ಇರುತ್ತವೆ. ಸಕಾರಾತ್ಮಕ ಆಯ್ಕೆ ಬದುಕನ್ನು ಸಾರ್ಥಕತೆಯೆಡೆಗೆ ಕೊಂಡ್ಯೊಯ್ದರೆ, ನಕರಾತ್ಮಕ ಆಯ್ಕೆಗಳು ಬದುಕನ್ನು ದುರಂತದ ಕಡೆಗೆ ಕರೆದೊಯ್ಯುತ್ತವೆ. ನಿಸರ್ಗದ ಜೀವಕೋಶಗಳಲ್ಲಿ ಒಂದಾಗಿರುವ ಗಿಡಮರಗಳಿಗೆ ಆಯ್ಕೆಯಿಲ್ಲ ಆಕಾರಣಕ್ಕಾಗಿ ಮಾವಿನ ಮರ ಮಾವಿನ ಹಣ್ಣನ್ನು, ಬೇವಿನ ಮರ ಬೇವಿನ ಹಣ್ಣನ್ನು ಕೊಡುತ್ತದೆಂಬುದು ಸತ್ಯಸಂಗತಿಯೇ ಆಗಿದೆ. ಆದರೆ ಈ ಸತ್ಯವನ್ನು ಮಾನವನ ಅಸ್ತಿತ್ವದ ಜೊತೆಗೆ ಸಮೀಕರಿಸಿದಾಗಲೇ ಮಾನವ ಅಸ್ತಿತ್ವ ಹೇಗೆ ಮತ್ತು ಏಕೆ ಭಿನ್ನವಾಗುತ್ತದೆ ಎಂಬ ಅಂಶ ನಮಗೆ ಸ್ಪಷ್ಟವಾಗುತ್ತದೆ. ಕವಿ ಆ ಕಾರ್ಯವನ್ನು ಇಲ್ಲಿ ತಮ್ಮ ಕವಿತೆಯ ಮೂಲಕ ಮಾಡಿದ್ದಾರೆ. ಮುಖ್ಯವಾಗಿ ಇಲ್ಲಿ ಆಯ್ಕೆಗಳೇ ಭಿನ್ನವಾಗಿರುವುದರಿಂದ ಆಯ್ಕೆಗಳ ಫಲಿತಗಳು ಕೂಡ ಸಹಜವಾಗಿಯೇ ಭಿನ್ನವಾಗುತ್ತ ಹೋಗುತ್ತವೆ. ಕವಿತೆಯ ಕೊನೆಯ ಪಂಕ್ತಿಯಲ್ಲಿ ಮಾನವನ ಆಯ್ಕೆ ಹಾಗೂ ಅದರ ಫಲಿತಗಳನ್ನು ಕವಿ ಲಕ್ಷ್ಮಣರಾವ್ ಸ್ಪಷ್ಟವಾಗಿ ಗುರುತಿಸಿರುವುದನ್ನು ನೋಡಬಹುದು. ಕವಿತೆಯನ್ನೇ ಅನುಸರಿಸಿ ಹೇಳುವುದಾದರೆ ಮನುಷ್ಯನಿಗೆ ಆಯ್ಕೆಯಿದೆ, ಈ ಆಯ್ಕೆಯ ಫಲ ಈ ಸ್ವರ್ಗ ಈ ನರಕಗಳು ಕೂಡ ಉದ್ಭವವಾಗಿವೆ. ಈ ಸ್ವರ್ಗ, ನರಕಗಳ ಮೂಲ ಇರುವುದಾದರೂ ಎಲ್ಲಿ ಅಂತ ನೋಡಿದರೆ ಅದು ಪ್ರೀತಿ ಮತ್ತು ದ್ವೇಷದಿಂದಲೇ

ಎಂದು ಹೇಳಬಹುದು. ಮಾನವ ಸಮುದಾಯದಲ್ಲಿ ಜೀವಿಸುತ್ತಿರುವುದರಿಂದ ಅವನ ಅಸ್ತಿತ್ವಕ್ಕೆ ಪ್ರೀತಿ ಅಮೃತವಾಗಿದೆಯೆಂದೇ ಹೇಳಬೇಕು. ಮಾನವನು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ ಸಮಾಜದ ಇತರರೊಂದಿಗೆ ಪರಸ್ಪರ ಪ್ರೀತಿ - ವಿಶ್ವಾಸಗಳಿಂದ ಬದುಕಬೇಕಾಗುತ್ತದೆ. ಪ್ರೀತಿಯಿಲ್ಲದೆ ಹೋದರೆ ಉಳಿಯುವುದು ಒಂದೇ ಮಾರ್ಗ ಅದು ದ್ವೇಷ. ದ್ವೇಷವು ಮಾನವನ ಅಸ್ತಿತ್ವಕ್ಕೆ, ನೆಮ್ಮದಿಗೆ ಧಕ್ಕೆ ತರುವಂತದ್ದಾಗಿದೆ.

ಮಾನವ ಬದುಕಿನಲ್ಲಿ ಪ್ರೀತಿಯ ಒಂದು ಅಂಶವಾದ 'ಹೊಂದಾಣಿಕೆ' ಪ್ರಮುಖ ಪಾತ್ರ ವಹಿಸುತ್ತದೆ. ಸಮಾಜದ ಇತರರೊಡನೆ ಹೊಂದಾಣಿಕೆ ಸಾಧ್ಯವಾಗದೇ ಹೋದರೆ ಬದುಕು ವಿಘಟನೆಯ ಹಾದಿ ತುಳಿಯುತ್ತದೆ. ಮನಸ್ಸು ಗೊಂದಲದ ಗೂಡಾಗುತ್ತದೆ. ಏಕಾಂತದ ನೋವುಗಳೇ ಚಿರಂತನವಾಗುತ್ತವೆ. ಮತ್ತು ಏಕಾಂತದ ಅವಧಿ ಕ್ಷಣಕಾಲ, ದಿನಗಳವರೆಗೆ ಆದರೆ ಅದು ಅಪಾಯಕಾರಿಯಲ್ಲ ಆದರೆ ಶಾಶ್ವತ ಏಕಾಂತವು ಅವನನ್ನು ಆಲೋಚನಾ ಹೀನನ್ನಾಗಿಸುತ್ತದೆ. ಅವನಲ್ಲಿ ನಕರಾತ್ಮಕ ದೃಷ್ಟಿಯು ಜಾಲಿಮರದಂತೆ ಹೆಮ್ಮರವಾಗಿ ಬೆಳೆಯುತ್ತದೆ. ಅದರ ಕರಿ ನೆರಳಲ್ಲಿ ಬದುಕು ದುರ್ಭರವಾಗುತ್ತದೆ. ಏಕಾಂತ ಮತ್ತು ಅದರ ಯಾತನೆಗಳ ಕೆಲವು ಎಳೆಗಳನ್ನು ಲಕ್ಷ್ಮಣರಾವ್ ಕವಿತೆಯೊಂದರಲ್ಲಿ ನಾವು ನೋಡಬಹುದು.

ಆದರೆ ಒಮ್ಮೊಮ್ಮೆ
ನಟ್ಟಿರುಳ ಕಟ್ಟೇಕಾಂತದಲ್ಲಿ
ಗಕ್ಕನೆ ಎಚ್ಚರಾಗಿ
ಯಾಕೋ ಹೌಹಾರಿ
ಬರೀ ಸೊನ್ನೆ
ಸುತ್ತುತ್ತೇನೆ
ಒಂದು ಎರಡು ಮೂರು
ಹತ್ತಾರು ಬಾರಿ ³

ಇಲ್ಲಿ ಪ್ರಸ್ತಾಪಿಸಲ್ಪಟ್ಟ ಒಂದು ಎರಡು ಮೂರು ಅಂಕಿಗಳು ಲೆಕ್ಕಾಚಾರವನ್ನು ತಿಳಿಸುತ್ತವೆ. ಅಂದರೆ ಅಲ್ಲಿ ಎಲ್ಲವೂ ಲೆಕ್ಕ, ಪ್ರೀತಿಯನ್ನು ಗುಣಿಸಲು, ಕೂಡಲು, ಕಳೆಯಲು, ಭಾಗಿಸಲು ಹೋಗಿ ಏನೋ ಗೊಂದಲಕ್ಕೆ ಸಿಕ್ಕು ಸಾಯುವ ತಳಬುಡವಿರದ ಲೆಕ್ಕ. ಏಕಾಂತವು ರಾತ್ರಿಗಳನ್ನು ಸುಖವಾಗಿರಿಸುವುದಿಲ್ಲ. ಅದು ಒಂದು ಬಗೆಯ ವಿಷಯಾಸಕ್ತವಲ್ಲದ ನಿರ್ಲಿಪ್ತ ಭಯವನ್ನು ಹುಟ್ಟುಹಾಕುವಂತದ್ದಾಗಿದೆ. ಮುಂದುವರೆದು ನೋಡುವುದಾದರೆ,

ಅದೃಷ್ಟಕ್ಕೆ
ಒಂದೊಂದು ಸಲ
ಎಲ್ಲೋ ದೂರದ ಅಗಮ್ಯದಲ್ಲಿ

ಅಥವಾ

ಆಳದ ನೀರವದಲ್ಲಿ

ಕಿಣಿಕಿಣಿ

ಗಂಟೆ ಬಡಿಯುತ್ತೆ;

ಯಾವುದೋ ನಿಗೂಢ ಧ್ವನಿ

ಪಿಸುಮಾತಿನಲ್ಲಿ

ಏನೋ ಹೇಳುತ್ತೆ,

ಪ್ರೀತಿಯ ಕಳಕಳಿಯಿಂದ

ಗುಟ್ಟಾಗಿ

ಅರ್ಥವಾಗುವುದಿಲ್ಲ,

ಯಾರು? ನೀ ಯಾರು?

ಚೀರುತ್ತೇನೆ

ಉತ್ತರವಿಲ್ಲ.

ಕೇವಲ

ಪ್ರತಿಧ್ವನಿ ರಾಚುತ್ತೆ;

'ಯಾರು? ನೀ ಯಾರು'?

ಮತ್ತೆ

ಬರಿ ಸೊನ್ನೆ

ಸುತ್ತುತ್ತೇನೆ

ಒಂದು ಎರಡು ಮೂರು.......[೩]

ಏಕಾಂತದ ಸೆರೆಮನೆಯಲ್ಲಿ ಬದುಕು ಬಂಧಿಯಾದಾಗ ಆತ್ಮವು ಅವನನ್ನು ಎಚ್ಚರಿಸ ಹೊರಡುತ್ತದೆ. ಎಂಥದೋ ಪಿಸು ಮಾತನ್ನು ಮನದಲ್ಲಿ ಉಸುರತೊಡಗುತ್ತದೆ. ಆದರೆ ಏಕಾಂತದ ನೋವು, ನಿರಾಸೆ, ಹತಾಶಗಳೇ ತುಂಬಿ ತುಳುಕುವ ಅವನ ಎದೆಯಾಳದ ಕಿವಿಗೆ ಆತ್ಮದ ಪಿಸು ಮಾತು ಕೇಳಿಸುವುದಿಲ್ಲ. ಕೇಳಿಸಿದರೂ ಅದು ಅಸ್ಪಷ್ಟ ಇಲ್ಲವೇ ಅರ್ಥವಾಗುವುದಿಲ್ಲ. ಮನವನ್ನು ಕಾಡುವುದೆಲ್ಲ ಬರೀ ಪ್ರಶ್ನೆಗಳೇ. ದುರಂತವೆಂದರೆ ಇವುಗಳಿಗೆ ಉತ್ತರಗಳೇ ಸಿಕ್ಕುವುದಿಲ್ಲ. ಉತ್ತರಗಳನ್ನು ಹುಡುಕುವಷ್ಟು ಕೂಡ ಮನಸ್ಸು ಸಮರ್ಥವಾಗಿರುವುದಿಲ್ಲ, ಅದಕ್ಕೆ ಅಗತ್ಯವಾದ ಸಂಯಮವನ್ನು ಅದು ದೂರ ತಳ್ಳಿರುತ್ತದೆ. 'ಯಾರು? ನೀ ಯಾರು'? ಎಂಬುದು ವ್ಯಕ್ತಿ ತನ್ನ ಅಸ್ತಿತ್ವದ ಅರಿವನ್ನು ಕೂಡ ಮರೆತಿರುವ ದುರಂತ ಚಿತ್ರಣಕ್ಕೆ ಇದು ಸಾಕ್ಷಿಯಾಗಿದೆ. ಕೊನೆಗೆ "ಮತ್ತೆ ಬರೀ ಸೊನ್ನೆ ಸುತ್ತುತ್ತೇನೆ" ಎನ್ನುವಲ್ಲಿ ಬದುಕು ಪ್ರೀತಿಯಿಂದ ವಂಚಿತವಾಗಿ ಹೇಗೆ ಶೂನ್ಯದ ಪರಿಧಿಯಲ್ಲಿ ನರಳುತ್ತದೆ ಎಂಬುದನ್ನು ಸುಸಂಗತ ಚಿತ್ರಣಗಳ ಮೂಲಕ ಕವಿ ಲಕ್ಷ್ಮಣರಾವ್ ಚಿತ್ರಿಸಿದ್ದಾರೆ. ಇಂತಹ ಅಸ್ತಿತ್ವದ ಕುರಿತ ಅಂಶಗಳಿಂದಲೇ ಕೆಲವೊಮ್ಮೆ ಲಕ್ಷ್ಮಣರಾವ್ ಅವರ ಕಾವ್ಯದ ಪ್ರೇಮದ ನೆಲೆಗಳು ಭಿನ್ನವೆನಿಸುತ್ತವೆ ಎಂದು ಹೇಳಬಹುದು.

ಮಾನವನ ಅಸ್ತಿತ್ವವನ್ನು ನಾವು ಬೇರೆ ಬೇರೆ ಅಂಶಗಳಿಂದ ಗುರುತಿಸಿದರೂ ಅದರ ಮೂಲ ಮಾತ್ರ ಜೀವನವನ್ನೇ ಹೊತ್ತು ನಿಂತ ಅವನ ದೇಹ ಎಂದು ಹೇಳಬಹುದು. ಪಂಚೇಂದ್ರಿಯ, ಹೃದಯ, ಮೆದುಳು, ಚಿಂತನೆ, ಉಸಿರಾಟ, ಬದುಕು - ಬವಣೆ ಹೀಗೆ ಹುಟ್ಟಿನಿಂದ ಸಾಯುವತನಕ ಕೊನೆವರೆಗೂ ಮಾನವನ ಸಾಂಗತ್ಯದಲ್ಲಿರುವುದು ಮಾಂಸ-ಖಂಡಗಳಿಂದ ತುಂಬಿದ ಅವನ ದೇಹ. ಹೀಗೆ ಮಾನವನಿಗೆ ಆಧಾರ ಸ್ತಂಭವಾಗಿರುವ ದೇಹವನ್ನೇ ಎಷ್ಟೋ ಜನರು ಜರಿಯುವುದುಂಟು ಆದರೆ ಹೀಗೆ ಜರಿಯುವವರ ಕಣ್ಣಿಗೆ ಕವಿ ಲಕ್ಷ್ಮಣರಾವ್ ಅವರು ಮೇಲ್ನೋಟಕ್ಕೆ ಲೋಕ ವಿರೋಧಿಗಳಂತೆ ಕಂಡುಬರುತ್ತಾರೆ. ಅವರು 'ನಾನು' ಕವಿತೆಯನ್ನು ನೋಡುವುದಾದರೆ,

ನಾನು ಕ್ರಮ
ವಾಗಿ ಪಂಚೇಂದ್ರಿಯ,
ಹೃದಯ,
ಮಿದುಳು
ಗಳ ದಾಸ.
ಈ ವ್ಯಾಸ
ದಲ್ಲೇ ನನ್ನ
ಭಾರತ, ಕುರುಕ್ಷೇತ್ರ
ಕರ್ಮಯೋಗ,
ವಿಶ್ವರೂಪ ದರ್ಶನ,
ಮುಕ್ತಿ.[೪]

ಲಕ್ಷ್ಮಣರಾವ್ ಅವರ ಈ ಕವಿತೆ ಹನ್ನೆರಡನೇ ಶತಮಾನದ ಬಸವಣ್ಣನವರ ವಚನವೊಂದನ್ನು ನೆನಪಿಗೆ ತರುತ್ತದೆ.

ಉಳ್ಳವರು ಶಿವಾಲಯವ ಮಾಡುವರು;
ನಾನೇನು ಮಾಡುವೆ ? ಬಡವನಯ್ಯ,
ಎನ್ನ ಕಾಲೇ ಕಂಭ, ದೇಹವೇ ದೇಗುಲ,
ಶಿರ ಹೊನ್ನ ಕಳಸವಯ್ಯ,
ಕೂಡಲ ಸಂಗಮದೇವ, ಕೇಳಯ್ಯ!
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲಾ! [೫]

ಇಲ್ಲಿ ಮುಖ್ಯವಾಗಿ ನಾವು ಗಮನಿಸಬೇಕಾದ ಸಂಗತಿಯೆಂದರೆ ಬಸವಣ್ಣನವರು ದೇಹವನ್ನು ಪ್ರೀತಿಸುತ್ತಾರೆ. ದೇಹವನ್ನೇ ದೇಗುಲವನ್ನಾಗಿ ಮಾಡಿಕೊಳ್ಳಿ ಎಂಬ ಸಂದೇಶ ಅನನ್ಯವಾದದ್ದು. ಇಲ್ಲಿ ಕವಿ ಲಕ್ಷ್ಮಣರಾವ್ ಕೂಡ

ಮಾನವ ಅಸ್ತಿತ್ವದ ಕೇಂದ್ರ ಬಿಂದುವಾದ ದೇಹವನ್ನು ಪ್ರೀತಿಸುತ್ತಾರೆ ಹಾಗೂ ಈ ದೇಹ ಸಹಿತವಾಗಿಯೇ ಅವರು ಭಾರತ, ಕುರುಕ್ಷೇತ್ರ, ಕರ್ಮಯೋಗ, ವಿಶ್ವರೂಪ ದರ್ಶನ, ಮುಕ್ತಿ ಕಾಣುವನೆಂಬ ಹಂಬಲ ಅರ್ಥಪೂರ್ಣವಾಗಿದೆ. ದೇಹಕ್ಕೆ ದಾಸನಾಗಿರುವುದು ದೇಹದ ಅಸ್ತಿತ್ವಕ್ಕೂ ಒಂದು ಸಾರ್ಥಕತೆಯನ್ನು ತಂದು ಕೊಡುವ ಪ್ರಕ್ರಿಯೆಯಾಗಿದೆ. ಹಾಗೆ ನೋಡಿದರೆ ಈ ಕವಿತೆಯ ಮೂಲಕ ಕವಿ ಲಕ್ಷ್ಮಣರಾವ್ ಬಸವಣ್ಣನವರನ್ನು ಮುಖಾ ಮುಖಿಯಾದಂತೆ ತೋರುತ್ತದೆ.

ಪ್ರೀತಿಯೇ, ನೆಮ್ಮದಿಯೇ,
ಉಲ್ಲಾಸದ ಚಿಲುಮೆಯೇ,
ಸಲ್ಲದ ಈ ಹೊತ್ತಿನಲ್ಲಿ,
ಸುತ್ತಲ ಆಪತ್ತಿನಲ್ಲಿ
ಎಲ್ಲಡಗಿರುವೆ ?
ಏನಾಗಿರುವೆ ? [೬]

ತನ್ನ ಪ್ರೀತಿಯ ಮೂಲಕವೂ ಕವಿ ಇಲ್ಲಿ ಸೃಜನಶೀಲತೆಯ ಹುಡುಕಾಟಕ್ಕೆ ಕೈ ಹಾಕಿದ್ದಾರೆ ಯಾಂತ್ರಿಕ ಬದುಕಿನ ಈ ಘಳಿಗೆಗಳಲ್ಲಿ ಸೃಜನಶೀಲತೆ, ಕ್ರಿಯಾಶೀಲತೆ ಎಂಬುದು ಮರೀಚಿಕೆಯಾಗತೊಡಗಿದೆ. ಕವಿಗೆ ಇದರ ಬಗ್ಗೆ ಆತಂಕವಿದೆ ಅದು ಇಲ್ಲಿನ ಕವಿತೆಯ ಮೂಲಕ ಅಭಿವ್ಯಕ್ತವಾಗಿದೆ.

ಇಲ್ಲಿದ್ದೇನೆ :
ಕಚನ ಹಾಗೆ ಬೂದಿಯಾಗಿ
ನಿನ್ನ ಹೊಟ್ಟೆಯಲ್ಲಿ,
ಜೀರ್ಣರಸಗಳಲ್ಲಿ.
ಸಂಜೀವಿನಿ ವಿದ್ಯೆಯನ್ನು
ಕಲಿಸು ನನಗೆ ಬೇಗ.
ಮತ್ತೆ ಬದುಕಿ ಬರುವೆನು.
ಒಡೆದು ನಿನ್ನ ಗರ್ಭ
ಉಳಿಯುವುದೀ ಜಗತ್ತು
ನಿನಗೂ ಸಹ ನೀಡುವೆ
ಮತ್ತೆ
ಹೊಸ ಹುಟ್ಟು [೭]

ಕಾವ್ಯಕ್ರಿಯೆ ಎಂಬುದು ಸೃಜನಶೀಲತೆಯೊಂದಿಗೆ ಆಗಾಗ್ಗೆ ಮರುಹುಟ್ಟು ಪಡೆಯುವಂತದ್ದು. ಜೊತೆಗೆ ಕವಿಯು ಮರುಹುಟ್ಟು ಪಡೆಯುತ್ತಾನೆ. ಈ ಮೂಲಕ ಹಳಸಲು ಪ್ರತಿಮೆಗಳಿಗೆ ತಿಲಾಂಜಲಿ ನೀಡಿ ನವಿನತೆಯ ಕಡೆ ಮುಖ ಮಾಡುತ್ತಾನೆಂದು ಹೇಳಬಹುದು. ಪ್ರೀತಿಯಲ್ಲೂ ಸೃಜನಶೀಲತೆಯ ಶೋಧವನ್ನು ಮಾಡುವ ಇವರನ್ನು 'ಪ್ರೇಮ ಕವಿ' ಎಂದು ಕರೆದರೆ ತಪ್ಪಾಗಲಾರದು.

ಬದುಕು ಹುಟ್ಟು ಸಾವುಗಳ ಮುಖಗಳನ್ನೊಳಗೊಂಡ ಒಂದು ಸುಂದರ ನಾಣ್ಯ. ಹುಟ್ಟು ಮಾನವ ಅಸ್ತಿತ್ವದ ಬುನಾದಿಯಾದರೆ, ಸಾವು ಅಸ್ತಿತ್ವವನ್ನೇ ಅಲುಗಾಡಿಸುವ ಭೂಕಂಪವಾಗಿದೆ. ಸಾವು ಸಂಭವಿಸುವ ಬಗೆ ಎರಡು ರೀತಿಯದು. ಒಂದು ಆಕಸ್ಮಿಕ ಅವಘಡಗಳಿಂದ ಉಂಟಾಗುವ ಸಾವು. ಎರಡನೆಯದು ವಯೋಸಹಜ ಸಾವು. ಬದುಕನ್ನು ಪ್ರೀತಿಸದವರು, ತನ್ನನ್ನು ತಾನು ಪ್ರೀತಿಸದವರು, ಅನ್ಯರನ್ನು ಪ್ರೀತಿಸದವರು ಸಹಜವಾಗಿ ಪ್ರತ್ಯೇಕತೆಯ ಹಾದಿ ತುಳಿಯುತ್ತಾರೆ. ಸಹಜವಾಗಿಯೇ ಇದು ಭಯವನ್ನು, ಆತಂಕವನ್ನು, ಆತ್ಮವಂಚನೆಯ ಮನಸ್ಥಿತಿಯನ್ನು ಸೃಷ್ಟಿಸಿಬಿಡುತ್ತದೆ. ಕೆಲವರು ಸಾವನ್ನಪ್ಪುವುದಕ್ಕೆ ಇರುವ ಕಾರಣಗಳನ್ನು ನೋಡಿದರೆ ಅವು ತೀರಾ ಸಣ್ಣವು ಅಥವಾ ಅಸಹಜ ಅನ್ನಿಸಲೂಬಹುದು. ಆದರೆ ಈ ಬಗೆಯ ಅನಾಹುತಗಳಿಗೆ ಸಾಯುವವರ ಮನಸ್ಥಿತಿಗಳೇ ಕಾರಣ. ಕೆಲವರು ಭಾವುಕರು. ಬದುಕನ್ನು ಸಮದೂಗಿಸುವವರ ಸಂಖ್ಯೆ ಕಡಿಮೆಯೆಂದೇ ಹೇಳಬೇಕು. ಸಂಬಂಧಗಳ ನಡುವಿನ ಸಂಘರ್ಷ, ಹೊಂದಿಕೆಯಾಗದ ಸ್ವಭಾವ, ಪ್ರೀತಿಯ ಕೊರತೆ ಇವು ಕೆಲವೊಮ್ಮೆ ಸಾವಿಗೆ ಶರಣಾಗುವಂತೆ ವ್ಯಕ್ತಿಯನ್ನು ಪ್ರೇರೇಪಿಸುವ ಸಂದರ್ಭಗಳೇ ಹೆಚ್ಚು. ಕವಿ ಲಕ್ಷ್ಮಣರಾವ್ ಅವರು ತಮ್ಮ 'ಎರಡು ಪ್ರಶ್ನೆಗಳು' ಎಂಬ ಕವಿತೆಯಲ್ಲಿ ಸಾವಿನ ಸ್ವರೂಪವನ್ನು ನಿರೂಪಿಸಿದ್ದಾರೆ.

ನಿನ್ನೆ ರಾತ್ರಿ
ತನ್ನ ಕೊಠಡಿಯಲ್ಲಿ
ಅವನು ಸತ್ತ.
ಅಲ್ಲ, ತನ್ನನ್ನೇ ಕೊಂದುಕೊಂಡ.
ಅವನು ಬಿಟ್ಟು ಹೋದ ಪತ್ರದ ಒಕ್ಕಣೆ
ಹೀಗಿತ್ತು:
"ನನ್ನ ಕಪ್ಪು ಕಾಫಿಯಲ್ಲಿ
ಸಕ್ಕರೆಯಿರಲಿಲ್ಲ.
ರಪ್ಪೆಂದು ಬಾಗಿಲು ಮುಚ್ಚಲು ಹೋಗಿ
ಬೆರಳು ಸಿಕ್ಕಿಕೊಂಡು
ಅಪ್ಪಚ್ಚಿಯಾಯಿತು.
ನಾನೇಕೆ ಸಾಯಬಾರದು ? "

ಈ ಕವಿತೆ ಮೇಲ್ನೋಟಕ್ಕೆ ವ್ಯಕ್ತಿಯ ಅಸ್ತಿತ್ವದ ವಿನಾಶ ಹಾಗೂ ವಿನಾಶಕ್ಕೆ ಕಾರಣಗಳನ್ನು ಸ್ಪಷ್ಟಪಡಿಸುವಂತೆ ಗೋಚರಿಸಿದರೂ, ಈ ಬಗೆಯ ಪ್ರಸಂಗಗಳ ಹಿಂದಿರುವ ಅಭಾವ ಯಾವುದು ಎಂಬುದನ್ನು ಇದು ಕೆದಕಿ ನೋಡುವ ಪ್ರಯತ್ನವಾಗಿದೆ ಎಂದೇ ಹೇಳಬೇಕಾಗುತ್ತದೆ. ಸುಖದ ಹೊಳೆಯಲ್ಲಿ ತೇಲಾಡುವ ಯಾವ ವ್ಯಕ್ತಿಯು ಸುಖಾಸುಮ್ಮನೆ ಸಾವಿಗೆ ಶರಣಾಗಲಾರ. ಕೊರತೆ ಅಥವಾ ಅಭಾವ ಇದ್ದಾಗಲೇ ವ್ಯಕ್ತಿ ಈ ದುರಂತಗಳಿಗೆ ಬಲಿಯಾಗುತ್ತಾನೆ ಎನ್ನಬಹುದು. ಪದ್ಯದ ಸಾಲುಗಳೇ ಒಂದು ಅಂಶವನ್ನು ಸ್ಪಷ್ಟಪಡಿಸುತ್ತವೆ. ಅದು ವ್ಯವಧಾನದ ಕೊರತೆ ಹಾಗೂ ಉದ್ವೇಗದ ಆತುರತೆ. ಇವೆರಡು ಏಕಕಾಲಕ್ಕೆ ಸಂಭವಿಸುವುದು ವ್ಯಕ್ತಿ ತನ್ನ ಸಹಜ ಭಾವನಾಲೋಕದಿಂದ ಮುಕ್ತನಾಗಿ ನಿರ್ಬಂಧಗಳ ಒತ್ತಡಕ್ಕೆ ಸಿಲುಕಿದಾಗ ಎಂದು ಹೇಳಬಹುದು. ಇವುಗಳ ಮೂಲ ಹುಡುಕಿದರೆ ಕವಿತೆಯ ನಾಯಕನಲ್ಲಿ ಎಲ್ಲವೂ ಇದೆ ಪ್ರೀತಿಯನ್ನು ಹೊರತು ಪಡಿಸಿ. ಪ್ರೀತಿಯಲ್ಲದೇ ಹೋದರೆ ಐಶ್ವರ್ಯವೂ ಕಾಲಕಸಕ್ಕೆ ಸಮಾನ. ಪ್ರೀತಿಗಿಂತ ಮಿಗಿಲಾದ ಐಶ್ವರ್ಯ ಜಗದಲ್ಲಿ ಯಾವುದೂ ಇಲ್ಲ. ಇಂಥ ಸತ್ಯಗಳನ್ನು ಅರಿಯದವರು ಮಾತ್ರ ಅವಸರದ ಆಯ್ಕೆಗಳಲ್ಲಿ ತಮ್ಮ ಅಪ್ಯಾಯಮಾನ ಬದುಕನ್ನು ಹಾಳುಮಾಡಿಕೊಳ್ಳುತ್ತಾರೆನ್ನಬಹುದು. ಹೀಗೆ ವಿವಿಧ ಆಯಾಮಗಳ ಹಿನ್ನೆಲೆಯಲ್ಲಿ ಲಕ್ಷ್ಮಣರಾವ್ ಕಾವ್ಯದ ಪ್ರೇಮ ಮೀಮಾಂಸೆ ಅಭಿವ್ಯಕ್ತವಾಗಿದೆ.

ಹಿಂದಿನ ಅಧ್ಯಾಯಗಳಲ್ಲಿ ಬೇಂದ್ರೆಯವರ ಸಖೀಗೀತದ ವಿಶ್ಲೇಷಣೆಯ ಮೂಲಕ ಸಖಿಸಖಿ ಕಲ್ಪನೆಯ ಸ್ವರೂಪವನ್ನು ನಾವು ಈಗಾಗಲೇ ನೋಡಿದ್ದೇವೆ. ಮುಖ್ಯವಾಗಿ ಸಖಿಸಖಿ ಕಲ್ಪನೆಯೆಂಬುದು ದಾಂಪತ್ಯದಲ್ಲಿನ ಗಂಡ ಹೆಂಡತಿಯರಿಬ್ಬರು ಬದುಕನ್ನು ಗೆಳೆಯ ಗೆಳತಿಯರಂತೆ ಕಳೆಯಬೇಕು. ಕಷ್ಟ ಸುಖದಲ್ಲೂ ಪರಸ್ಪರ ಭಾಗಿಯಾಗಿರಬೇಕು. ಪತಿ ಪತ್ನಿಯನ್ನು ಶೋಷಿಸುವುದಾಗಲೀ ಇಲ್ಲಿ ಸಲ್ಲದು ಎಂಬ ಮನೋಭೂಮಿಕೆಯಡಿಯಲ್ಲಿ ಇದು ಜನ್ಮತಾಳಿದೆ ಎನ್ನಬಹುದು. ಕವಿ ಲಕ್ಷ್ಮಣರಾವ್ ಅವರ ಪ್ರೇಮ ಕಾವ್ಯಗಳಲ್ಲೂ ಸಖಿಸಖಿಯ ಕಲ್ಪನೆಯನ್ನು ನಾವು ಕಾಣಬಹುದಾಗಿದೆ.

ಅಪ್ಪನ
ಹೊನ್ನ ಚೌಕಟ್ಟಿನ
ಕನ್ನಡಕದ
ಕಣ್ಣಿಗೆ
ಕುರೂಪಿಯಾಗಿ ಕಂಡ
ನನ್ನ ಬಡ ಹೆಣ್ಣೆ,
ಶಕೂ
ನನಗೆ ನೀನೇ ಬೇಕು. ೯

ಸಖಿಸಖಿಯರಲ್ಲಿ ಕಂಡುಬರುವ ಒಂದು ಪ್ರಮುಖ ಅಂಶವೆಂದರೆ ಇಬ್ಬರೂ ಪರಸ್ಪರರಿಗಾಗಿ ಬಾಳುವುದು. ತನ್ನ ಪ್ರೀತಿಯ ಸಖಿಗಾಗಿ ಸಖ ಹಂಬಲಿಸುವ ಬಗೆಯನ್ನು ಈ ಕವಿತೆ ಚಿತ್ರಿಸುತ್ತದೆ.

ಅಪ್ಪನಿಗೆ ಹತ್ತಿದೆ
ಸಂಪ್ರದಾಯದ ತೊನ್ನು, ಪ್ರತಿಷ್ಠೆಯ ಕುತ್ತ;
ನನ್ನ ಪುಸ್ತಕ ಮಸ್ತಕದಲ್ಲಿ
ಬೇರೂರುತ್ತಿದೆ
ನನ್ನತನದ ಬಿತ್ತ. [೧೦]

ಒಲುಮೆಯನ್ನು ಒಲಿಸಿಕೊಳ್ಳುವ ಕಾರ್ಯ ಸುಲಭದ ಮಾತಲ್ಲ. ಅದಕ್ಕೆ ನೂರಾರು ಅಡೆತಡೆ, ತಂದೆಯ ಸಂಪ್ರದಾಯ, ಪ್ರತಿಷ್ಠೆಗಳು, ಸಮಾಜದ ಜಾತಿ ಧರ್ಮಗಳು, ಪರಿಸ್ಥಿತಿಯ ಅಡಕತ್ತರಿಯಲ್ಲಿ ಸಿಕ್ಕ ತಾಯಿಯ ಕಣ್ಣೀರು ಹೀಗೆ ನೂರಾರು ಅಡ್ಡಿ ಆತಂಕ ಇವುಗಳನ್ನು ಮೀರಿ ಸಖಿಯನ್ನು, ಅವಳ ಪ್ರೀತಿಯನ್ನು ಪಡೆಯುವುದು ಸಾಧ್ಯವಾದರೂ ಕಷ್ಟ ಸಾಧ್ಯವೆಂದೇ ಹೇಳಬೇಕು. ಕಾರಣ ಪರಂಪರೆಯ ಬೇರುಗಳು ಅಷ್ಟು ಆಳ ಮತ್ತು ಅಗಲದಲ್ಲಿ ಬೇರೂರಿವೆ ಎಂದರೆ ತಪ್ಪಾಗಲಾರದು. ಯಾರಿಗೆ ಹೇಗೆ ಕಂಡರೂ ತನಗೆ ಮಾತ್ರ ನೀನೇ ಬೇಕು ಎಂಬ ಭಾವವೇ ಸಖಸಖಿಯ ಸುಖದ ಸೋಪಾನದ ಸೂತ್ರಕ್ಕೆ ನಾಂದಿ ಹಾಡುತ್ತದೆ. ಲಕ್ಷ್ಮಣರಾವ್ ಪ್ರೇಮವು ಕೇವಲ ವಯೋಸಹಜ ಪ್ರೇಮದ ಮಾರ್ಗವನ್ನಷ್ಟೇ ತುಳಿಯದೇ ದಾಂಪತ್ಯ ಭಾವದ ಕೌಟುಂಬಿಕ ಪ್ರೇಮದ ಜಾಡುಗಳಲ್ಲಿ ಅದು ಹರಿದು ಬರುತ್ತದೆ ಎನ್ನಬಹುದು.

ಬಾಳ ಗೆಳತಿಯೇ, ತರವೇ
ನನ್ನಲ್ಲಿ ಈ ಕೋಪ ?
ಮೊದಲಿನಂತೆ ನಾನಿಲ್ಲ
ಎನ್ನುವ ಆರೋಪ ?
ಮನೆಯ ತಲೆ ಬಾಗಿಲಲ್ಲಿ
ಒಣಗಿದ್ದರೆ ತೋರಣ
ನಾನೊಬ್ಬನೇ ಅಲ್ಲ
ನೀನೂ ಕಾರಣ. [೧೧]

ದಾಂಪತ್ಯದಲ್ಲಿ ನೋವು ನಲಿವು ಸಹಜ. ದಾಂಪತ್ಯದಲ್ಲಿ ಸರಸವು ಇರಬೇಕು, ವಿರಸವು ಇರಬೇಕು. ಆದರೆ ಅದರ ಜೊತೆ ಜೊತೆಗೆ ಬದುಕನ್ನು ಸರಿದೂಗಿಸಬಲ್ಲ ಸಾಮರಸ್ಯವು ಇರಬೇಕು. ಕವಿತೆಯ ಪ್ರಾರಂಭದ ಸಾಲುಗಳನ್ನು ಗಮನಿಸಿ ಹೇಳುವುದಾದರೆ, ದಾಂಪತ್ಯದಲ್ಲಿ ವಿರಸ ಉಂಟಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಆದರೆ ವಿರಸದ ಬೆಂಕಿಗೆ ನೀರನೆರಚುವ ಕಾಯಕವನ್ನು ಕವಿ ಇಲ್ಲಿ ಮಾಡಿದ್ದಾರೆ. ಕೋಪಕ್ಕೆ ಕೋಪ ಸಂಸಾರದ ಸಮಾಧಿಗೆ ನಾಂದಿ ಹಾಡುತ್ತದೆ. ಅದಕ್ಕಾಗಿಯೇ ಕವಿ ತನ್ನ ಜಾಣ್ಮೆಯಿಂದ, ಪ್ರೀತಿಯಿಂದ ತನ್ನ ಪತ್ನಿಗೆ ಗೆಳತಿ ಎದು ಸಂಭೋದಿಸಿದ್ದಾನೆ. ಅವಳು ಕೋಪಿಸಿಕೊಂಡಿದ್ದಕ್ಕೆ ತಾನು ಕೋಪಿಸಿಕೊಳ್ಳದೆ ಪರಿಸ್ಥಿತಿಯನ್ನು ತಿಳಿಗೊಳಿಸುವ ಪ್ರಯತ್ನಕ್ಕೆ ಕೈ ಹಾಕಿದ್ದಾರೆ.

ಪದ್ಯದ ಮುಂದುವರಿದ ಸಾಲುಗಳು ಪತಿ ಪತ್ನಿಯರ ನಡುವೆ ಒಣಗಿ ಹೋದ ಪ್ರೀತಿಯನ್ನು ಎತ್ತಿ ತೋರಿಸಿದರೂ ಅಲ್ಲಿಯು ಕವಿ ತನ್ನ ಸಖಿಯೊಂದಿಗೆ ಸಂವಾದಕ್ಕಿಳಿಯುತ್ತಾನೆ.

ಅಕ್ಷಯ ಪಾತ್ರೆಯಲ್ಲ
ದಾಂಪತ್ಯದ ನಲಿವು
ತಂದು ತುಂಬಬೇಕು
ನಾವೇ ಪ್ರತಿಸಲವೂ. [೧೨]

ದಾಂಪತ್ಯದಲ್ಲಿ ನಲಿವು ಸ್ಥಿರವಾಗಬೇಕಾದರೆ ಅದಕ್ಕಿರುವುದು ಒಂದೇ ಮಾರ್ಗ ಅದು ಪರಸ್ಪರರು ಪ್ರೀತಿಯನ್ನು ಹಂಚಿಕೊಳ್ಳುವುದು ಹಾಗೂ ಒಲವೇ ನಮ್ಮ ಬದುಕು ಎಂಬ ಪ್ರೇಮ ತತ್ವವನ್ನು ಅನುಷ್ಠಾನಕ್ಕೆ ತರುವುದು. ಇಂಥ ತತ್ವಗಳ ಸೂಕ್ಷ್ಮವನ್ನು ಕವಿ ತಮ್ಮ ಕವಿತೆಯಲ್ಲಿ ಕಟ್ಟುತ್ತಾ ಹೋಗಿದ್ದಾರೆನ್ನಬಹುದು.

ಬದುಕಿನ ಬೆಲೆಯನ್ನು ಅರಿಯದ ಬಹಳಷ್ಟು ಜನ ದೇವರಲ್ಲಿ ತಮ್ಮ ಬಯಕೆಗಳನ್ನು ತೀರಿಸಿಕೊಳ್ಳಲು ಮೊರೆಯಿಡುತ್ತಾರೆ. ಎಲ್ಲ ಇದ್ದರೂ ಇನ್ನೂ ಏನೋ ಸಾಲದೆಂಬ ಕೊರತೆಯ ಭಾವ ಇದಕ್ಕೆ ಮುಖ್ಯ ಕಾರಣವಾಗಿದೆ. ಬದುಕು ನಮಗೆ ನೀಡಿದ ಒಂದು ಅಮೂಲ್ಯ ಉಡುಗೊರೆಯೆಂದರೆ ಒಲವು. ಒಲವನ್ನು ಕಳೆದುಕೊಂಡವರು ಅನುರಾಗದ ಬೆಲೆಯನ್ನು ಅರಿಯದವರು ಮಾತ್ರ ಈ ಬಗೆಯ ಅನೇಕ ಬಯಕೆಗಳಿಗಾಗಿ ಹಪಹಪಿಸುತ್ತಾರೆ. ಆದರೆ ಕವಿ ಇಂತಹ ಹಪಾಹಪಿಕೆಗಳಿಂದ ಸ್ವಲ್ಪ ದೂರವೇ ನಿಲ್ಲುತ್ತಾರೆಂದೇ ಹೇಳಬಹುದು. ಕವಿಗೆ ಒಲವೇ ಅಮೂಲ್ಯ ಉಡುಗೊರೆಯಂತೆ ಕಾಣುತ್ತದೆ.

ಪ್ರಕೃತಿ ನಮಗೆ ಕೊಟ್ಟ ಉಡುಗೊರೆ
ಒಲವು ನಲಿವು ಸದಾ ಉಳಿದಿರೆ
ಬೇರೆ ಏಕೆ ಬೇಕು ನಂದನ ?
ಹಬ್ಬ ನಮಗೆ ಬಾಳು ಅನುದಿನ [೧೩]

ಚಿತೆ ದೇಹವನ್ನು ಸುಟ್ಟರೆ, ಚಿಂತೆ ಮನಸ್ಸನ್ನು ಸುಡುತ್ತದೆ. ಚಿಂತೆಯೆಂಬ ದಾರಿಯಲ್ಲಿ ಬದುಕಿನ ಸಂತೆಯು ಸಾಗಿ ಹೋಗುತ್ತಿದೆ. ಅದರಲ್ಲೂ ಮುಖ್ಯವಾಗಿ ನಾಳೆಯೆಂಬ ಚಿಂತೆಯಿಂದ ಸಮಯದ ವ್ಯರ್ಥವೂ ಆಗುತ್ತದೆ. ಈ ಚಿಂತೆಯಿಂದ ಮುಕ್ತರಾಗಿರುವುದು ನಿಸರ್ಗದ ಹಕ್ಕಿ ಪಿಕ್ಕಿ, ಹೂಗಳು. ಅವು ನಾಳಿನ ಚಿಂತೆ ಮಾಡುವುದಿಲ್ಲ ಹಾಗಾಗಿ ಅವು ಎಂದಿಗೂ ಕೊರಗುವುದಿಲ್ಲ. ಇರುವಷ್ಟು ಕಾಲ ಮಂದಹಾಸದಿಂದಲೇ ಇರುತ್ತವೆ, ಪರಿಮಳ ಸೂಸುತ್ತವೆ, ಜನಮನ ಸೆಳೆಯುತ್ತವೆ. ಈ ಬಗೆಯ ಹೂವಿನಂಥ ಬದುಕು ನಮ್ಮದಾಗಬೇಕೆಂಬುದು ಕವಿಯ ಹಂಬಲ. ಅದನ್ನು ತನ್ನನಲ್ಲೆ ಬಳಿ ಹೇಳಿಕೊಳ್ಳುವುದು ಹೀಗೆ,

ನಮಗೇಕೆ, ನಲ್ಲೆ ನಾಳೆಯ ಚಿಂತೆ ?
ನಾವಿರೋಣ ಹಕ್ಕಿ ಹೂವುಗಳಂತೆ [೧೪]

ಬದುಕು ಸಂತೋಷದಿಂದ ಕೂಡಿರುವಂತೆ ಸಂದಿಗ್ಧತೆಯಿಂದಲೂ ಕೂಡಿದೆ. ಸಂತೋಷದಲ್ಲಿ ಒಲವು ನಮ್ಮ ಬಳಿಯಲ್ಲಿಯೇ ಸುಳಿಯುತ್ತಿರುತ್ತದೆ. ಆದರೆ ಕಷ್ಟ ಕಾಲದಲ್ಲಿ ನಾವು ಅದನ್ನು ಮರೆತು ಬಾಳುವ ಸಾಧ್ಯತೆಗಳೇ ಹೆಚ್ಚು. ಆದರೆ ಇದನ್ನು ತೀವ್ರವಾಗಿ ಖಂಡಿಸುವ ಕವಿ ಬದುಕಿನ ಸಂತೋಷದ ಗಳಿಗೆಯಲ್ಲಾಗಲೀ, ಸಂದಿಗ್ಧ ಪರಿಸ್ಥಿತಿಯಲ್ಲಾಗಲೀ ಒಲವು ನಮ್ಮ ಸಂಗಾತಿಯಾಗಿರಬೇಕು. ಒಲವನ್ನು ಬಿಟ್ಟು ಬದುಕಿಲ್ಲ, ಇದ್ದರೂ ಅದಕ್ಕೆ ಅರ್ಥವಿಲ್ಲ ಎಂಬ ಅರ್ಥವಂತಿಕೆ ಪ್ರೇಮ ಕವಿಯದು.

ಕೇಳು, ಹೇಗೆ ಹಾಡಿದೆ ಹಕ್ಕಿ
ಕೊರಳಿನಿಂದ ಹರ್ಷವೇ ಉಕ್ಕಿ!
ಚೈತ್ರವಿರಲಿ ಮಾಗಿಯೇ ಬರಲಿ
ನಿಲ್ಲದು ಆ ಮೋಹನ ಮುರಲಿ [೧೫]

ಬದುಕಿಗೂ ಸಹ ಒಲವಿನ ಮೋಹನ ಮುರಲಿ ಬೇಕು ಎಂಬುದನ್ನು ಕೋಗಿಲೆ, ಕೊರಳುಗಳ ಪ್ರತಿಮೆಗಳ ಮೂಲಕ ಕವಿ ಕವಿತೆ ರಚಿಸಿದ್ದಾರೆ. ಈ ಮೂಲಕ ಪ್ರಕೃತಿಯ ಪ್ರಾಣಿ ಪಕ್ಷಿಗಳ ಬದುಕು ಹೇಗೆ ಒಲುಮೆಯಿಂದ ಸಮ್ಮಿಳಿತವಾಗಿದೆ, ಅವುಗಳ ನಿತ್ಯ ಚಟುವಟಿಕೆಗಳಲ್ಲಿ ನಲ್ಮೆ ಹೇಗೆ ಹಾಸು ಹೊಕ್ಕಾಗಿದೆ ಎಂಬ ಮಹತ್ವವನ್ನು ಇಲ್ಲಿ ತಿಳಿಸಿದ್ದಾರೆ.

ಹಾಗೆ ನೋಡಿದರೆ 'ಲಿಂಗ ಮಧ್ಯೆ ಜಗತ್ ಸರ್ವಂ' ಎಂಬ ಹಿತ ನುಡಿಯನ್ನು 'ಪ್ರೀತಿ ಮಧ್ಯೆ ಜಗತ್ ಸರ್ವಂ' ಎಂದು ಹೇಳಿದರೂ ಏನೂ ತಪ್ಪಾಗಲಾರದು ಎಂದೆನಿಸುತ್ತದೆ. ಹೀಗೆ ಕವಿ ಇಲ್ಲಿ ಪ್ರಕೃತಿಯ ಚೇತನಾ ಚೇತನಗಳಲ್ಲಿ ಪ್ರೀತಿಯ ಇರುವಿಕೆಯನ್ನು ಗುರುತಿಸುತ್ತ ಹೋಗುವಲ್ಲಿಯೇ ಕವಿ ಲಕ್ಷ್ಮಣರಾವ್ ಅವರು ಭಿನ್ನವೆನಿಸುತ್ತಾರೆ. ಹಾಗೆ ಅವರು ಭಿನ್ನವೆನಿಸುವುದು ಕೂಡ ಪ್ರೀತಿಯಿಂದಲೇ ಎಂಬುದನ್ನು ನಾವು ಮರೆಯುವಂತಿಲ್ಲ!

ಟಿಪ್ಪಣಿ

೦೧.ಆಯ್ಕೆ, ಕ್ಯಾಮೆರಾಕಣ್ಣು ಸಮಗ್ರ ಪದ್ಯ, ಪುಟ. ೨೭೪

೦೨. ನಂ. ೦೦೦....., ಕ್ಯಾಮೆರಾಕಣ್ಣು ಸಮಗ್ರ ಪದ್ಯ, ಪುಟ. ೨೮೪

೦೩. ಅದೇ, ಪು. ೨೮೫

೦೪. ನಾನು, ಕ್ಯಾಮೆರಾಕಣ್ಣು ಸಮಗ್ರ ಪದ್ಯ, ಪುಟ. ೧

೦೫. ಜಗಜ್ಯೋತಿ ಬಸವೇಶ್ವರರು, ವಾಸನ್ನ ಜೀವನ ಚರಿತ್ರೆ ಮಾಲೆ , ಪುಟ. ೨೫

೦೬. ಪ್ರತಿಮೆ, ಕ್ಯಾಮೆರಾಕಣ್ಣು ಸಮಗ್ರ ಪದ್ಯ, ಪುಟ. ೨೩೪

೦೭. ಅದೇ.

೦೮. ಎರಡು ಪ್ರಶ್ನೆಗಳು,ಕ್ಯಾಮೆರಾಕಣ್ಣು ಸಮಗ್ರ ಪದ್ಯ, ಪುಟ. ೧೬೦

೦೯. ಸಖೀಗೀತ, ಕ್ಯಾಮೆರಾಕಣ್ಣು ಸಮಗ್ರ ಪದ್ಯ, ಪುಟ. ೨೨

೧೦. ಅದೇ.

೧೧. ದಾಂಪತ್ಯ, ಕ್ಯಾಮೆರಾಕಣ್ಣು ಸಮಗ್ರ ಪದ್ಯ, ಪುಟ. ೪೦೭

೧೨. ಅದೇ.

೧೩. ಉಪಾಯ, ಕ್ಯಾಮೆರಾಕಣ್ಣು ಸಮಗ್ರ ಪದ್ಯ, ಪುಟ. ೪೦೬

೧೪. ಅದೇ.

೧೫. ಅದೇ.

ಅಧ್ಯಾಯ ಮೂರು

ಆಯ್ದ ಕವಿತೆಗಳ ಆನ್ವಯಿಕ ವಿಶ್ಲೇಷಣೆ

ಅಧ್ಯಾಯ ಮೂರು

ಆಯ್ದ ಕವಿತೆಗಳ ಆನ್ವಯಿಕ ವಿಶ್ಲೇಷಣೆ

ಬಿ. ಆರ್. ಲಕ್ಷ್ಮಣರಾವ್ ಕಾವ್ಯದಲ್ಲಿನ ಪ್ರೇಮದ ನೆಲೆಗಳನ್ನು ಕಂಡುಕೊಳ್ಳಲು ಈ ಅಧ್ಯಯನದಲ್ಲಿ ಆಯ್ದ ಕವಿತೆಗಳ ಆನ್ವಯಿಕ ವಿಶ್ಲೇಷಣೆಯನ್ನು ಮಾಡಲಾಗಿದೆ. ಅವುಗಳನ್ನಿಲ್ಲಿ ಕ್ರಮಬದ್ಧವಾಗಿ ನಾವು ನೋಡುತ್ತ ಹೋಗಬಹುದು.

೧. ವಸ್ತುಪ್ರಧಾನ:

ಲೋಕಾರೂಢಿಯಾಗಿ ಮಾತನಾಡುವಾಗ ವಸ್ತು ಎಂದರೆ ನಿರ್ಜೀವವಾದದ್ದು ಎಂಬ ಅರ್ಥ ಬರುತ್ತದೆ. ಆದರೆ, ಪ್ರಸ್ತುತ ಅಧ್ಯಯನದಲ್ಲಿ ಲಕ್ಷ್ಮಣರಾವ್ ಕಾವ್ಯಗಳ ವಸ್ತುವನ್ನು ಕುರಿತು ಮಾತನಾಡುತ್ತಿರುವಾಗ ಕಾವ್ಯದ ವಸ್ತುವೆಂದರೆ ಅದು ನಿರ್ಜೀವವೂ, ಸಜೀವವೂ ಆಗಿರಬಹುದೆಂಬ ಅರ್ಥವನ್ನು ನಾವಿಲ್ಲಿ ಕಲ್ಪಿಸಿಕೊಳ್ಳುವುದು ಅಧ್ಯಯನದ ದೃಷ್ಟಿಯಿಂದ ಸರಿಯೆನಿಸುತ್ತದೆ. ಲಕ್ಷ್ಮಣರಾವ್ ಕಾವ್ಯಗಳ ಒಂದು ಪ್ರಮುಖ ವಸ್ತುವೆಂದರೆ ಹೆಣ್ಣು ಎಂದೇ ಹೇಳಬೇಕು. ಹೆಣ್ಣು ಕೇವಲ ಒಂದು ಹೆಣ್ಣಾಗಿ ಇಲ್ಲಿ ಚಿತ್ರಿತಗೊಂಡಿಲ್ಲ. ಹೆಣ್ಣಿನ ನಾನಾ ಮುಖಗಳು, ಚಿತ್ರ-ವಿಚಿತ್ರಗಳು ಇಲ್ಲಿ ಅನೇಕ ಆಯಾಮಗಳಲ್ಲಿ ಅನಾವರಣಗೊಂಡಿವೆ.

ಆ ಹೆಣ್ಣಿನ ಕಣ್ಣುಗಳಲ್ಲಿ
ಸಮುದ್ರವಿತ್ತು:
ಕಷ್ಟ ನಿಷ್ಠೂರಗಳ ನೋವು ನಿಟ್ಟುಸಿರುಗಳ
ನೂರು ನದಿ ನೀರೆರದ
ಅಪಾರ ಸಮುದ್ರ;
ಜಗ್ಗಿ ಸೆಳೆಯುವ ರುದ್ರ
ಮನೋಹರ ಸಮುದ್ರ
ಭೋರ್ಗರೆವ ತೆರೆತೆರೆ;
ಹತಾಶೆ ನೊರೆ ನೊರೆ;
ಒಂದನ್ನು ನುಂಗಿ ಮತ್ತೊಂದು ಬಿರಬಿರ ಬೆಳೆವ

ಕಳವಳ ಸಂಕಟ ತಳಮಳ;

ಮೀನು ಷಾರ್ಕ್ ಅಕ್ಟೋಪಸ್

ಹಾವು ತಿಮಿಂಗಿಲ

ಕುದಿಯುವ ಸಮುದ್ರ"

ಮುಖ್ಯವಾಗಿ ಈ ಕವಿತೆಯನ್ನು ಉದಾಹರಿಸುವಾಗ ಒಂದು ಮಾತನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಹೆಣ್ಣು ಎನ್ನುವ ಪದಕ್ಕೆ ಹೆಂಗಸು, ಸ್ತ್ರೀ, ಮಹಿಳೆ ಎಂಬ ನಾನಾ ಸಮಾನ ಪದ ರೂಪಗಳಿವೆಯಾದರೂ, ನಿಘಂಟು ಕೋಶಗಳ ಪರಿಧಿಯಾಚೆಗೆ ನಿಂತು 'ಹೆಣ್ಣು' ಎಂಬ ಪದದ ಅರ್ಥ ವಿಶ್ಲೇಷಣೆಗೆ ತೊಡಗಿದರೆ ಹೆಣ್ಣು ಎಂಬುದಕ್ಕೆ ಇರುವ ಇನ್ನೊಂದು ಅರ್ಥ ದುಃಖ ಎಂದು ಹೇಳಬಹುದು. ಜಗದಲ್ಲಿ ಹೆಣ್ಣಿನಿಂದ ದುಃಖ ಅನುಭವಿಸಿರುವ ಗಂಡುಗಳಿಗಿಂತ, ಗಂಡುಗಳಿಂದ ದುಃಖ ಅನುಭವಿಸಿದ ಹೆಣ್ಣುಗಳ ಸಂಖ್ಯೆಯೇ ಹೆಚ್ಚು ಎಂದರೆ ತಪ್ಪಾಗಲಾರದು. ಈ ಬಗೆಯ ಅಸಮತೋಲನಕ್ಕೆ ಮುಖ್ಯ ಕಾರಣಗಳು ಹಲವು. ಪುರುಷ ಪ್ರಧಾನ ಸಮಾಜ ವ್ಯವಸ್ಥೆಯ ಕ್ರೌರ್ಯ ಒಂದು ಬಗೆಯದಾದರೆ ಹೆಣ್ಣು ಪರತಂತ್ರದ ಬದುಕನ್ನು ಬದುಕುತ್ತಿರುವ ದುರಂತ ಇನ್ನೊಂದು ಬಗೆಯದು. ಇವು ಅಸಮತೋಲನದ ಪ್ರಮುಖ ಕಾರಣಗಳೆನಿಸುತ್ತವೆ. ಹೆಣ್ಣು ತನ್ನ ಜೀವಿತಾವಧಿಯ ಎಲ್ಲ ಅವಸ್ಥೆಗಳಲ್ಲೂ ಪರತಂತ್ರಳಾಗಿ ಬದುಕಿದರೂ ತನ್ನವರಿಗೆ ತನ್ನ ತುಂಬು ಪ್ರೀತಿಯನ್ನು ಧಾರೆ ಎರೆಯುತ್ತಲೇ ಬಂದಿದ್ದಾಳೆ. ಪ್ರೀತಿ ಎಂದರೆ ಪಡೆದದ್ದಕ್ಕಿಂತ ಕೊಟ್ಟುಕೊಂಡಿದ್ದೇ ಹೆಚ್ಚು ಎಂಬ ಮಾತುಗಳು ಸಹ ಇವೆ. ಈ ಮಾತುಗಳು ಅಕ್ಷರಶಃ ಹೆಣ್ಣಿಗೆ ಅನ್ವಯಿಸುತ್ತದೆಂದು ಹೇಳಬಹುದು. ಭೂಮಿಗೆ 'ಹೆಣ್ಣು' ಎಂದು, ನಿಸರ್ಗಕ್ಕೆ 'ಪ್ರಕೃತಿ ಮಾತೆ' ಎಂತಲೂ ಮಾತೃಸ್ಥಾನವನ್ನು ನೀಡಲಾಗಿದೆ. ನಿಸರ್ಗದಿಂದ ಎಲ್ಲವನ್ನೂ ಪಡೆಯುವ ನಾವು ಅವಳಿಗೆ ಪುನಃ ನೀಡಿದ್ದಾದರೂ ಏನು ಎಂಬ ಪ್ರಶ್ನೆಗೆ ನಮ್ಮಲ್ಲಿ ಉತ್ತರವಿಲ್ಲ. ಇದೇ ಪ್ರಕ್ರಿಯೆ ನಮ್ಮ ಸಮಾಜದ ಹೆಣ್ಣು ಗಂಡಿನ ಸಂಬಂಧಗಳಲ್ಲೂ ಮರುಕಳಿಸಿರುವುದನ್ನು ನಾವು ಕಾಣಬಹುದು. ಹೆಣ್ಣು ತಾಯಿಯಾಗಿ, ಸಹೋದರಿಯಾಗಿ, ಸಹಧರ್ಮಿಣಿಯಾಗಿ, ಸಂಗಾತಿಯಾಗಿ, ಗೆಳತಿಯಾಗಿ ಸುಖದ ಪರ್ವತವೇ ಆಗಿದ್ದಾಳೆ. ಇದಕ್ಕೆ ಪ್ರತಿಯಾಗಿ ಪ್ರತಿ ಹಂತದಲ್ಲಿಯೂ ಪುರುಷನು ಅವಳಿಗೆ ಪ್ರೀತಿಗಿಂತ ಹೆಚ್ಚಾಗಿ ಹಿಂಸೆಯ ಉಡುಗೊರೆಯನ್ನು ನೀಡುತ್ತ, ಅವಳ ಪ್ರೀತಿಯ ಸವಿಯ ಸವಿಯುತ್ತ, ಕಾಲದ ನಾಟಕದಲ್ಲಿ ಖಳನಾಯಕನಾಗಿ ಮೆರೆಯುತ್ತಾ ಹೋಗುತ್ತಿದ್ದಾನೆ. ಅವನ ಪೌರುಷಕ್ಕೆ, ಸುಖಕ್ಕೆ ಬಲಿಯಾಗುವವಳು ಮಾತ್ರ ಹೆಣ್ಣು ಎಂದು ಹೇಳಬಹುದು. ಹೀಗೆ ಬದುಕಿನ ಯಾವುದೋ ಒಂದು ಘಳಿಗೆಯಲ್ಲಿ ಯಾವ ಗಂಡಿನ ದೌರ್ಜನ್ಯಕ್ಕೆ ಒಳಗಾಗಿ ನೋವಿನ ರುದ್ರ ಸಮುದ್ರವಾಗಿರುವ ಚಿತ್ರಣವನ್ನು ಇಲ್ಲಿನ ಕವಿತೆಯಲ್ಲಿ ಕಾಣಬಹುದು. ಅವಳ ದುಃಖದ ರೀತಿಗೆ ತುಂಬಾ ಔಚಿತ್ಯಪೂರ್ಣ ಹೋಲಿಕೆಗಳನ್ನು ನೀಡುತ್ತ, ಅವಳ ನೋವಿನ ಮುಖಗಳು ಎಷ್ಟು ಎಂಬುದನ್ನು ಚಿತ್ರಿಸುತ್ತ, ಅವಳ ಕಣ್ಣೀರಿಗೆ ಕರಗುವ ತುಂಬು ಒಲವಿನ ಕವಿಯಾಗಿ ಲಕ್ಷ್ಮಣರಾವ್ ನಮಗಿಲ್ಲಿ ಕಾಣುತ್ತಾರೆ. ಹೀಗೆ ಬದುಕಿನಲ್ಲಿ ನೊಂದ ಜೀವಗಳಿಗೆ ಕವಿ ಸ್ಪಂದಿಸುವ ಬಗೆಯೇ ಅನನ್ಯವಾದುದು. ಅಂದರೆ ಕವಿಯ ಪ್ರೇಮ ಕೇವಲ ನಗುವವರಿಗೆ ಮಾತ್ರ ಅಲ್ಲ ನೊಂದವರಿಗೂ ಎಂಬ ವಿಶಾಲ ಪ್ರೇಮದ ಮನೋಧರ್ಮ ಲಕ್ಷ್ಮಣರಾವ್ ಕಾವ್ಯದ್ದಾಗಿದೆ.

ಹೆಣ್ಣಿನ ಮನಸ್ಸು ನಿಗೂಢ, ರಹಸ್ಯ. ಅದನ್ನು ಅರಿತವರಿಗಿಂತ ಅರಿಯದೇ ಸೋತವರು ಹೆಚ್ಚು. ನೀರಿನಲ್ಲಿರುವ

ಮೀನಿನ ಹೆಜ್ಜೆಯನ್ನು ಹೇಗೆ ಕಂಡುಹಿಡಿಯಲು ಸಾಧ್ಯವಿಲ್ಲವೋ ಹಾಗೆಯೇ ಹೆಣ್ಣಿನ ಮನಸ್ಸನ್ನು ಅರಿಯುವುದು ಕಷ್ಟಸಾಧ್ಯವಾಗಿದೆ. ಹೆಣ್ಣಿನ ಆ ಬಗೆಯ ಮನಸ್ಥಿತಿಗೆ ಕಾರಣವೇನು? ಅದಕ್ಕೆ ಹೆಣ್ಣೇ ಉತ್ತರ ನೀಡಬೇಕಾಗುತ್ತದೆ.

ಆಳವಳೆಯಲು ಧೀರ
ಕಣ್ಣೊಳಗೆ ಧುಮುಕಿದೆ.
ಮುಳುಗಿದೆ,
ಮುಳುಗಿದೆ,
ಮುಳುಗಿದಷ್ಟೂ
ಆಳ.
ಎಂಥ ಒಲವಿನ ಜಾಲ!
ಸಾವಂಥ
ಹಿತವಾದ ಕಗ್ಗತ್ತಲು;
ಬಸಿರ
ಸುಪ್ಪತ್ತಿಗೆ
ತಳ
ಮುಟ್ಟಿದೆ;
ನಿಶ್ಯಬ್ದ ಜೋಗುಳ;
ಮಲಗಿಬಿಟ್ಟೆ
ತೇಲಿ
ಮೇಲೇರಿ
ಹಿಂತಿರುಗಲೇ ಇಲ್ಲ.[೨]

ಹೆಣ್ಣಿನ ಆ ಕಣ್ಣೀರಿನ ಆಳವನ್ನು ಅಳೆಯ ಹೊರಟ ಧೀರ ಹೇಗೆ ಅವಳ ಪ್ರೀತಿಯಲ್ಲೇ ಕಳೆದು ಹೋಗುತ್ತಾನೆಂಬ ವಿಸ್ಮಯವನ್ನು ಕವಿ ಇಲ್ಲಿ ಚಿತ್ರಿಸಿದ್ದಾರೆ. ಕವಿತೆಯ ಕೊನೆಯ ಪದಗಳು ಹೆಣ್ಣಿನ ಮನಸ್ಸಿನ ಆಳ ಅಗಲಗಳನ್ನು ತಿಳಿಸುತ್ತವೆ. ಸಂದರ್ಭ, ಪರಿಸ್ಥಿತಿಗಳಿಗನುಗುಣವಾಗಿ ಹೆಣ್ಣು ಹೇಗೆ ತನ್ನ ಸ್ವರೂಪವನ್ನು ಬದಲಿಸಿಕೊಳ್ಳುತ್ತಾಳೆಂಬುದನ್ನು ಒಂದು ಚಿಕ್ಕ ಕವಿತೆಯ ಮೂಲಕ ತುಂಬಾ ಚೊಕ್ಕವಾಗಿ ಹೇಳುತ್ತಾರೆ ಕವಿ ಲಕ್ಷ್ಮಣರಾವ್.

ಹೆಣ್ಣು
ಕೆಲವು ನಂದನಗಳಲ್ಲಿ
ನಂದಾದೀಪ
ಕೆಲವು ಕೊಂಪೆಗಳಲ್ಲಿ

ಕೆಂಪು ದೀಪ

ಕೆಲವು ನರಕಗಳಲ್ಲಿ

ಉರಿವ ಕೊಳ್ಳಿ.[೩]

ಕವಿತೆಯ ಪ್ರತಿ ಸಾಲು ಅರ್ಥಪೂರ್ಣ. ಒಂದು ತುಂಬಿದ ಮನೆಯ ಸುಖ-ಸಂತೋಷ-ಸಮೃದ್ಧಿಗಳು ಹೆಣ್ಣನ್ನು ಅವಲಂಬಿಸಿರುತ್ತವೆ ಎಂದರೆ ತಪ್ಪಾಗಲಾರದು. ಗೃಹಿಣಿಯೊಬ್ಬಳ ನಡೆ-ನುಡಿ, ಜ್ಞಾನ, ಚಾರಿತ್ರ್ಯ, ಮಂದಹಾಸ, ಕ್ರಿಯಾಶೀಲತೆ, ಸಾಮರಸ್ಯದ ಭಾವ ಇವುಗಳೆಲ್ಲ ಕೌಟುಂಬಿಕ ಪರಿಸರವನ್ನು ನಂದನವನವನ್ನಾಗಿ ಪರಿವರ್ತಿಸುತ್ತವೆ. ಇದರಲ್ಲಿ ಪುರುಷನ ಪಾಲು ಸ್ವಲ್ಪ ಕಡಿಮೆ ಎಂದೇ ಹೇಳಬೇಕು. ಕಾರಣ, ಪುರುಷನಿಗಿಂತ ಸ್ತ್ರೀ ಮಾತ್ರವೇ ಹೆಚ್ಚು ಹೊತ್ತು ಮನೆಯಲ್ಲಿರಬಲ್ಲಳು ಹಾಗೂ ಅವಳ ಜವಾಬ್ದಾರಿಯೂ ಇಲ್ಲಿ ಅಗಾಧವಾಗಿರುತ್ತದೆಯೆಂದೇ ಹೇಳಬೇಕಾಗುತ್ತದೆ. ಈ ವಿಷಯದಲ್ಲಿ ತಾಳ ತಪ್ಪಿದರೆ ನಂದನವನ ನರಕವಾಗುತ್ತದೆ ಮತ್ತಲ್ಲಿ ನಂದಾದೀಪ ಉರಿವಕೊಳ್ಳಿಯಾಗುತ್ತದೆ. ಹೀಗೆ ಇಲ್ಲಿ ಹೆಣ್ಣು ತನ್ನ ಪ್ರೀತಿಯಿಂದ ಕುಟುಂಬದ ಸದಸ್ಯರೆಲ್ಲರನ್ನು ಗೆಲ್ಲುವ, ಆ ಮೂಲಕ ಮನೆಯಲ್ಲೂ, ಮನದಲ್ಲೂ ನಲ್ಮೆಯನ್ನು ಹಸಿರಾಗಿಸುವ ಸೂಕ್ಷ್ಮಗಳನ್ನು ಪ್ರಸ್ತುತ ಕವಿತೆ ಸಾದರಪಡಿಸಿದೆ.

ವಸ್ತುಪ್ರಧಾನ ಕಾವ್ಯದ ವಿಶ್ಲೇಷಣೆಗೆ ಸಂಬಂಧಿಸಿದಂತೆ ಪ್ರೇ(ಧೂ)ಮಗೀತೆ ಒಂದು ಅದ್ಭುತ ಉದಾಹರಣೆ. ಕಾವ್ಯದ ಪ್ರಧಾನ ವಸ್ತು ಇಲ್ಲಿ ಹುಡುಗಿಯ ಪ್ರೇಮವೇ ಆದರೂ ಅದನ್ನು ಇನ್ನೊಂದು ವಸ್ತುವಾದ ಸಿಗರೇಟಿನ ಜೊತೆಗೆ ಸಮೀಕರಿಸಿ ಹೇಳುವ ಬಗೆ ಓದುಗರ ಗಮನವನ್ನು ಸೆಳೆಯುತ್ತದೆ. ವಸ್ತು ವಿಷಯದ ಹಿನ್ನೆಲೆಯಲ್ಲಿ ಲಕ್ಷ್ಮಣರಾವ್ ಅವರ ಉಳಿದೆಲ್ಲ ಕಾವ್ಯಗಳಿಗಿಂತಲೂ ಇದು ತೀರಾ ಭಿನ್ನವೆನಿಸುತ್ತದೆ. ಜೊತೆಗೆ ಪ್ರೇಮದ ಸಮೀಕರಿಸುವಿಕೆ ಕೂಡ ಇಲ್ಲಿ ಔಚಿತ್ಯಪೂರ್ಣ ಪ್ರಸಂಗಗಳಿಂದ ಕೂಡಿದೆ ಎನ್ನುವುದು ಮುಖ್ಯವಾಗುತ್ತದೆ.

ಸಿಗರೇಟು ಸುಡುತ್ತೆ, ನೀನೂ ಸಹ;

ಆದರೂ ಎಂಥ ಸುಖ! ಎಂಥಾ ಸುಖ!

ನಿನ್ನಿಂದ ಆಧಿ, ಅದರಿಂದ ವ್ಯಾಧಿ:

ನೀನು ಹೃದಯ ಬಡಿತ, ಅದು ಮಿದುಳ ಮಿಡಿತ.[೪]

ನಿತ್ಯದ ಚಟುವಟಿಕೆಗಳಲ್ಲಿನ ಸಾಮಾನ್ಯ ವಸ್ತುವೆಂದೇ ಪರಿಭಾವಿಸುವ ಸಿಗರೇಟನ್ನು ಬದುಕಿನುದ್ದಕ್ಕೂ ಜೊತೆಗೆ ಬರುವ ಪ್ರೇಮಕ್ಕೂ ಅಷ್ಟು ಅಂತರವಿಲ್ಲವೆಂಬ ವಸ್ತು ಸತ್ಯವನ್ನು ಸಹೃದಯಿಗರೆದುರು ತೋರುವಲ್ಲಿ ಕವಿ ರಚನೆ ಯಶಸ್ವಿಯಾಗಿದೆ ಎಂದು ಹೇಳಬಹುದು.

ಹಿರಿಯರ ಸಮ್ಮುಖದಲ್ಲಿ, ಪವಿತ್ರ ಪರಿಸರದಲ್ಲಿ, ಧಾರ್ಮಿಕ

ವಾತಾವರಣದಲ್ಲಿ

ಸಿಗರೇಟು ನಿಷಿದ್ಧ;

ನಮ್ಮ ಪ್ರೇಮವೂ ಹೀಗೆಯೇ ಮಡಿವಂತಿಕೆಗೆ ವಿರುದ್ಧ.

ಅಭಾವದ, ಹೀನ ಸ್ವಭಾವದ, ಹಣದ ಪ್ರಭಾವದ

ಈ ಇಂದಿನ ಇಂದಿರಾ ದಿನಗಳಲ್ಲಿ
ಮಧ್ಯಮ ವರ್ಗದ ನನಗೆ
ನಿಜವಾದ ಪ್ರೇಮ ಸಿಗರೇಟಿನಂತೆಯೇ ದಿನದಿನಕ್ಕೂ ತುಟ್ಟಿ;
ಆದರೂ ನಾನು ಬಿಟ್ಟಿ
ದ್ದೇನೆಯೇ ನಿನ್ನನ್ನು?
ಸಿಗರೇಟನ್ನು?[೫]

ಪ್ರತಿಭೆ, ಸಂಸ್ಕಾರ, ಮೌಲ್ಯಗಳಿಂದ ಮುಕ್ತವಾದ ಸಮಾಜ ಹಣದ ಹಂಗಿನ ಅರಮನೆಯಲ್ಲಿ ಬಂಧಿಯಾಗಿದೆ. ಈ ಹಣದ ಅಮಲಿನಲ್ಲಿ ಪ್ರೇಮವು ಕೂಡ ಕೇವಲ ನಶೆ ಏರಿಸುವ ಒಂದು ಮಧ್ಯದ ರೀತಿಯೇ ಆಗುತ್ತಿದೆ. ಆ ಮೂಲಕ ನಿಜ ಪ್ರೇಮದ ಮೌಲ್ಯವು ಕುಸಿಯುತ್ತಿದೆ. ಮೌಲ್ಯಹೀನ ಪ್ರೇಮ ಬದುಕಿನ ಅರಾಜಕತೆಗೆ ಕಾರಣವಾಗುತ್ತದೆ. ಈ ಬಗೆಯ ಪ್ರೇಮವೇ ಇಂದು ಎಲ್ಲೆಲ್ಲೂ ತನ್ನ ಕರಾಳ ಹಸ್ತವನ್ನು ಚಾಚಿದೆ ಎಂಬುದು ಮಾತ್ರ ದುರಂತವೆಂದೇ ಹೇಳಬೇಕು. ಆದರೆ ಸಿಗರೇಟಿನಂತೆ ಪ್ರೇಮವು ಎಷ್ಟು ತುಟ್ಟಿಯಾದರೂ ಅವುಗಳ ಜೊತೆಗೆ ಬದುಕನ್ನು ಕಳೆವೆನೆಂಬ ಕವಿಯ ಅಚಲವಾದ ಮನೋಸ್ಥೈರ್ಯ ಪ್ರೇಮಕ್ಕೊಂದು ಕಿರೀಟವನ್ನು ಇಟ್ಟಂತಿದೆ.

ಕಥನ ಪ್ರಧಾನ

ಮೊದಲಿಗೆ ನಾವಿಲ್ಲಿ ಕಥನದ ಅರ್ಥವನ್ನು ತಿಳಿಯುವುದು ಸೂಕ್ತವೆನಿಸುತ್ತದೆ. ಕಥನ ಎನ್ನುವುದಕ್ಕೆ ಕನ್ನಡದಲ್ಲಿ ಕತೆ ಹೇಳುವಿಕೆ; ನಿರೂಪಣೆ ಎಂಬ ಅರ್ಥಗಳು ಬಳಕೆಯಲ್ಲಿವೆ. ಇಂಗ್ಲೀಷಿನಲ್ಲಿ 'Story - telling', 'Narration'ಎಂಬ ಅರ್ಥಗಳು ಬಳಕೆಯಲ್ಲಿವೆ. "ಕಥನಶಾಸ್ತ್ರ ಇನ್ನೂ ಬೆಳವಣಿಗೆಯ ಹಂತದಲ್ಲಿರುವುದರಿಂದ ಅದರ ಪರಿಭಾಷೆ ಖಚಿತವಾಗಿಲ್ಲ" ಎನ್ನುವ ಅಭಿಪ್ರಾಯ ಜಿ. ಎಸ್. ಆಮೂರರದಾಗಿದೆ. ಕಥನ ಕವನವೆಂದರೆ ಕಥೆಯನ್ನು ಹೇಳುವ ಕವನ (verse tale) ಎಂದರ್ಥ. ಈ ಬಗೆಯ ಕಥನ ಪ್ರಧಾನವಾದ ಕಥನ ಕವನಗಳನ್ನು ಲಕ್ಷ್ಮಣರಾವ್ ರಚಿಸಿದ್ದಾರೆ. 'ಭ್ರಮೆ' ಕವಿತೆ ಕಥನ ಕವನಗಳಲ್ಲಿ ಒಂದಾಗಿದೆ.

ಕವಿತೆಯ ಕಥಾನಾಯಕ ಜಾಕಬ್ ಅಣ್ಣನ ವಿರುದ್ಧ ಸಂಚು ಹೂಡಿ ಅಣ್ಣನ ಕ್ರೋಧಾಗ್ನಿಗೆ ಹೆದರಿ ಪಲಾಯನ ಮಾಡಿ ಮರಳುಗಾಡಿನಲ್ಲಿ ಅಲೆಯುವಾಗ ಅಪರೂಪಕ್ಕೊಂದು ನೀರಿನ ಪುಟ್ಟ ಕೊಳವು, ಕುರಿಗಳನ್ನು ಕಾಯುವ ಕುರುಬಗಿತ್ತಿಯ ಪರಿಚಯವೂ ಆಗಿ ಅವಳ ತಂದೆಯ ಬಳಿ ಕುರುಬಗಿತ್ತಿ ರಾಶೆಲ್ಲಳನ್ನು ಮದುವೆಯಾಗುವ ತನ್ನ ಇಂಗಿತವನ್ನು ವ್ಯಕ್ತಪಡಿಸಿದ. ರಾಶೆಲ್ಲಳ ತಂದೆ, ಜಾಕಬ್ ಏಳು ವರ್ಷ ತನ್ನ ಮನೆ ಆಳಿನಂತೆ ದುಡಿವ ಷರತ್ತನ್ನು ವಿಧಿಸಿದ. ಷರತ್ತಿನಂತೆ ಏಳು ವರ್ಷ ದುಡಿದ ನಂತರ ಜಾಕಬ್‌ನಿಗೆ ಅವನ ಇಚ್ಛೆಯಂತೆ ರಾಶೆಲ್ಲಳ ತಂದೆ ತನ್ನ ಮಗಳನ್ನು ಧಾರೆಯೆರೆದುಕೊಡುತ್ತಾನೆ. ಮೊದಲ ದಿನದ ರಾತ್ರಿಯಲ್ಲಿ ಅವಳನ್ನು ಸುಖಿಸಿದ. ಆದರೆ ಬೆಳಕು ಹರಿದ ನಂತರ ಅವನಿಗೆ ಸತ್ಯದ ಅರಿವು ಉಂಟಾಗುತ್ತದೆ. ತಾನು ರಾತ್ರಿಯಿಡೀ ಸುಖಿಸಿದ್ದು ರಾಶೆಲ್ಲಳೊಂದಿಗೆ ಅಲ್ಲ, ಕುರೂಪಿಯಾಗಿದ್ದ ಅವಳ ಅಕ್ಕನೊಂದಿಗೆ ಎಂದು. ಪ್ರೀತಿಗಾಗಿ ಜೀತದಾಳುವಿನಂತೆ ದುಡಿದ ಜಾಕಬ್‌ಗೆ ದೊರೆತ ಫಲ ಬರೀ ವಂಚನೆ. ಆ ಕ್ಷಣ ಅವನಿಗೆ ಭ್ರಮೆಯ ಅನುಭವವನ್ನು ಉಂಟು ಮಾಡುತ್ತದೆ. 'ಪ್ರೀತಿಯ ಫಲ ಕೇಡು' ಎನ್ನುವಂತೆ ಇಲ್ಲಿನ ಕವಿತೆ ಚಿತ್ರಿತವಾಗಿದೆ. ಅಂದರೆ ಪ್ರೀತಿಗಾಗಿ ಬಾಳಿದರೆ ಪ್ರೀತಿ ನಮಗೆ

ನೆಮ್ಮದಿಯನ್ನೇ ಕೊಡುತ್ತದೆಂಬುದು ಕೆಲವೊಮ್ಮೆ ಹುಸಿಯಾಗಿ ಅದು ನೋವನ್ನು ಕೊಡುತ್ತದೆಂಬ ಕಟು ಸತ್ಯದೊಂದಿಗೆ ವಾಸ್ತವ ಬದುಕನ್ನು ಕಳೆಯಬೇಕಾಗುತ್ತದೆಂಬುದನ್ನು ಕವಿ ಇಲ್ಲಿ ಸೂಕ್ಷ್ಮವಾಗಿ ತಿಳಿಸಿದ್ದಾರೆ.

ದುಡಿದರೆ ನೀ ಏಳು ವರ್ಷ
ಮನೆಯ ಆಳಿನಂತೆ
ಬಳಿಕ ರಾಶೆಲ್ ನಿನ್ನವಳು
ನಿನ್ನ ಆಸೆಯಂತೆ
ಒಪ್ಪಿಕೊಂಡ ವಿಧಿಯಿಲ್ಲದೆ
ಜಾಕಬ್ ಷರತ್ತಿಗೆ,
ವಶನಾಗಿ ರಾಶೆಲ್ಲಳ
ಪ್ರೇಮವೆಂಬ ಮತ್ತಿಗೆ
* * *
ಅಂದು ರಾತ್ರಿ ಸಜ್ಜೆ ಮನೆಯ
ಕುರುಡು ಕತ್ತಲಲ್ಲಿ
ಇನಿಯಳೊಡನೆ ಮೊದಲಿನಿರುಳ
ಸ್ವರ್ಗ ಸುಖವ ಸವಿಯಲೆಂದು
ಕಾಯುತ್ತಿದ್ದ ಜಾಕಬ್
ತಹತಹಿಸುತ್ತ,
ಮೈ ಧಗಧಗಿಸುತ್ತ
ಕೊನೆಗೂ ಬಂದಳು ಒಳಗೆ
ಜಾಕಬ್ಬಿನ ಹೃದಯದರಸಿ
ಪ್ರೇಮ ಪುತ್ಥಳಿ.
ಮೆಲ್ಲ ಮೆಲ್ಲನಡಿಯನಿಟ್ಟು
ನಲ್ಲನ ಬಳಿಗೆ
***
ಹಗಲ ಬೆಳಕು ಕಣ್ಣು ಚುಚ್ಚಿ
ಎಚ್ಚರಗೊಂಡು,
ಜಾಕಬ್ ಹೊರಳಿ ನೋಡಿದ
ನೋಡಿ ಚೀರಿದ
ಮಲಗಿದ್ದಳು ಅವನ ಪಕ್ಕ
ರಾಶೆಲ್ಲಳ ಅಕ್ಕ![೬]

ಲಕ್ಷ್ಮಣರಾವ್ ಅವರ ಕಥನ ಕವನಗಳಲ್ಲಿ 'ಲಿಲ್ಲಿಪುಟ್ಟಿಯ ಹಂಬಲ'ವು ಒಂದು. ಪದ್ಯದ ಬಹುಭಾಗವನ್ನು ಗಮನಿಸಿದರೆ ಲಿಲ್ಲಿಪುಟ್ಟಿಯ ಹಂಬಲವು ಕಾಮಪ್ರೇರಿತವಾದದ್ದೇನೋ ಅಂತ ಅನ್ನಿಸಿದರೂ ಸಹ ಬರೀ ಕಾಮವೊಂದೇ ಲಿಲ್ಲಿಪುಟ್ಟಿಯ ಹಂಬಲವಾಗಿದ್ದರೆ ಗಲಿವರನ ಬಗೆಗಿನ ಕಾಳಜಿಯ ಮಾತುಗಳು ಇಲ್ಲಿ ವ್ಯಕ್ತವಾಗುತ್ತಿರಲಿಲ್ಲ ಎಂಬುದನ್ನು ನಾವು ಗಮನದಲ್ಲಿಡಬೇಕಾಗುತ್ತದೆ.

ಗಲಿವರ್, ನನ್ನೊಲವಿನ ಗಲಿವರ್,
ನನ್ನಿಂದ ದೂರಾಗಿ ಹೋದೆ;
ಈ ಸ್ವಾರ್ಥಿಗಳ ಕುಟಿಲ ಸಂಚಿನಿಂದ
ತಲೆ ಮರೆಸಿ ಪಾರಾಗಿ ಹೋದೆ.
ಆದರೆ ಹೀಗೇಕೆ ಸವಿನೆನಪಾಗಿ ನನ್ನ ಕಾಡುತ್ತೀ
ಈಡನ್ನಿನ ಹಣ್ಣಿನಂತೆ
ಹೃದಯದೊಳಗಿನ ಹುಣ್ಣಿನಂತೆ?[೨]

ಕಾಳಜಿ ವ್ಯಕ್ತಪಡಿಸುವುದು, ಗೌರವ ತೋರಿಸುವುದು, ಅಭಿಮಾನಿಸುವುದು ಇವೆಲ್ಲವೂ ಪ್ರೀತಿಯ ರಹದಾರಿಗಳು. ಲಿಲ್ಲಿ ಪುಟ್ಟಿಯದು ಮೂಲತಃ ಸುಕುಮಾರ ಮನಸ್ಸು. ಆದರೆ ಅದು ಕ್ರೌರ್ಯಕ್ಕೆ ಒಳಗಾಗಿ ಗಲಿವರನನ್ನು ತನ್ನ ಕಾಮಕ್ರೀಡೆಗೆ ಬಳಸಿಕೊಳ್ಳಲು ಹಂಬಲಿಸಿದ್ದು ತನ್ನ ಗಂಡನ ಪ್ರೀತಿಯಿಂದ ವಂಚಿತಳಾದ ಮೇಲೆ ಎಂಬುದು ಪ್ರಮುಖ ಅಂಶವೆನಿಸುತ್ತದೆ. ಆದರೆ ನಮ್ಮ ದೇಶದ ಸಂಸ್ಕೃತಿಯ ಸಂದರ್ಭದಲ್ಲಿ ಇದನ್ನು ನೋಡಿದರೆ ಇದು ಹಾದರವೆಂತಲೂ, ಅನೈತಿಕವೆಂತಲೂ ಅನ್ನಿಸಬಹುದು. ಆದರೆ ಕವಿ ದೇಶ ಭಾಷೆಗಳ, ಸಂಸ್ಕೃತಿಗಳ, ಸಂಪ್ರದಾಯಗಳ ಎಲ್ಲೆ ಮೀರಿ ಸಹಜ ಪ್ರೀತಿಯ ತುಡಿತದ ಅಭಿವ್ಯಕ್ತಿಯನ್ನು ಲಿಲ್ಲಿಪುಟ್ಟಿಯ ಹಂಬಲದ ಮೂಲಕ ಸರಳವಾಗಿ, ಅದು ಅನೈತಿಕವಲ್ಲವೆಂಬಂತೆ ಹೇಳುವುದು, ಕವಿ ದೃಷ್ಟಿಕೋನದ ವ್ಯಾಪಕತೆಗೆ ಕನ್ನಡಿ ಹಿಡಿಯುವಂತಿದೆ. ನಮ್ಮ ಆಲೋಚನೆಗಳು, ಚಿಂತನೆಗಳು ಎಲ್ಲೋ ಒಂದು ಕಡೆ ಪೂರ್ವ ನಿಯೋಜಿತ ಮಾದರಿಗಳ ಹಿನ್ನೆಲೆಯಲ್ಲಿ ಅಭಿವ್ಯಕ್ತವಾಗುತ್ತವೆ. ಇದನ್ನು ಮೀರಿ ವಿಶ್ವಮಾನವೀಯತೆಯೆಡೆಗೆ ನಡೆವ ಹೃದಯ ವೈಶಾಲ್ಯತೆಯ ಪಾಠವನ್ನು ನಾವು ಕಲಿಯಬೇಕಾಗಿದೆ ಎಂಬುದನ್ನು ಇದು ಸೂಚಿಸುತ್ತದೆ.

ಗಲಿವರ್, ನನ್ನ ಮಹಾಲಿಂಗ ಗಲಿವರ್,
ಇದೆಂಥ ಅಸಹಜ ಆಸೆ ನನ್ನದು?
ಅದಯ್ಯ ಅಸಾಧ್ಯ ಬಯಕೆ?
ನಿನ್ನ ಮೋಹದ ಹುಚ್ಚಿನಲ್ಲಿ, ಈ ವಿಕಾರದ ಕೆಚ್ಚಿನಲ್ಲಿ,
ಹದ್ದು ಮೀರಿ ಬಿಡಲೆ?
ಮುಚ್ಚುಮರೆಗಳ ಸಿಪ್ಪೆ ಸುಲಿದು, ಈರುಳ್ಳಿಯಂತೆ ನಿಗಿನಿಗಿ
ಬತ್ತಲಾಗಿ ಬಿಡಲೆ?
ತೊರೆದು ಬರಲೆ ಭವ ಬಂಧ
ನಿನ್ನ ದಿವ್ಯಾನುಭವಕ್ಕಾಗಿ?

ಕುಬ್ಜ ಕಲ್ಪನೆಗೆ ಮೀರಿದ ಲೋಕದ
ಭವ್ಯ ಅರಿವಿಗಾಗಿ
ಸಾಗಿ ಬರಲೆ ಸಾಗರಗಳ? ಕಾಡುಗಳ ಕಾಡಲೆ?
ಬೆಟ್ಟಗಳ ಬೇಡಲೆ?
'ಎಲ್ಲಿ ನನ್ನ ಚೆನ್ನ? ಎಲ್ಲಿ ನನ್ನ ಚೆಲುವ?
ನೀವು ಕಾಣಿರೇ....? ನೀವು ಕಾಣಿರೇ....?
ನೀವು ಕಾಣಿರೇ.....? '

ಎಲ್ಲೋ ಒಂದು ಕಡೆ ಕಥನ ಕವನದ ಕೊನೆಯ ಸಾಲುಗಳು ಅಕ್ಕಮಹಾದೇವಿಯಕ್ಕನನ್ನು ನೆನಪಿಸುತ್ತವೆ. ಚೆನ್ನಮಲ್ಲಿಕಾರ್ಜುನನನ್ನು ಒಲಿಸಿಕೊಳ್ಳಬೇಕೆಂಬ ಅಕ್ಕನ ಬಯಕೆ ಲೋಕದ ಕಣ್ಣಿಗೆ ಹೇಗೆ ಅಸಹಜ ಎನ್ನುವಂತೆ ಕಂಡಿತೋ ಇಲ್ಲಿ ಗಲಿವರನನ್ನು ವರಿಸಬೇಕೆಂಬ ಲಿಲ್ಲಿ ಪುಟ್ಟಿಯ ಹಂಬಲವೂ ಅಸಂಗತದಂತೆ ಮೇಲ್ನೋಟಕ್ಕೆ ಕಾಣುತ್ತದೆ. ಆದರೆ ಒಲುಮೆಯ ಜೀವವನ್ನು ಕೂಡುವುದು ಕೂಡ ಒಂದು ದಿವ್ಯ ಅನುಭವ. ಮುಚ್ಚು ಮರೆಗಳ ಸಿಪ್ಪೆ ಸುಲಿದು, ಈರುಳ್ಳಿಯಂತೆ ನಿಗಿನಿಗಿ ಬತ್ತಲಾಗಿಬಿಡಲೆ, ಎನ್ನುವಲ್ಲಿ ಲೋಕದ ಕಟ್ಟಳೆಗಳನ್ನು ಮೀರಿ ಪ್ರೇಮವನ್ನು ಆರಾಧಿಸುವ ಹುಚ್ಚು ಮೋಹದ ಮಳೆ ಇಲ್ಲಿ ಹನಿಹನಿಯಾಗಿ ಜಿನುಗುತ್ತಿರುವುದನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು.

ಭಾವ ಪ್ರಧಾನ

'ಭಾವ' ಇದು ಮಾನವ ಮೆದುಳಿನಲ್ಲಿ ಕಂಡುಬರುವ ಒಂದು ಪ್ರಕ್ರಿಯೆ ಎಂದು ಜೈವಿಕವಾಗಿ ಹೇಳಬಹುದು. ಇದು ಪ್ರಜ್ಞಾಪೂರ್ವಕ ಸ್ಥಿತಿಯಲ್ಲೂ, ಅಪ್ರಜ್ಞಾಪೂರ್ವಕ ಸ್ಥಿತಿಗಳೆರಡರಲ್ಲೂ ಅಡಕವಾಗಿರುವ ಒಂದು ಅನನ್ಯ ಸಂಯೋಜಕ. ಭಾವನೆಗಳಿಲ್ಲದೆ ಮನುಷ್ಯ ಬದುಕಲಾರ. ಬದುಕಲು ಭಾವನೆಗಳು ಬೇಕು. ನಿರ್ಭಾವುಕರಿಗೂ ನಿರ್ಜೀವಿಗಳಿಗೂ ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ. ಜೀವ ಸಂಕುಲದ ಒಂದು ಪ್ರಮುಖ ಹೆಗ್ಗುರುತು ಈ ಭಾವ. ಜೀವ ಮತ್ತು ಭಾವಗಳೆರಡೂ ಗಾಳಿ ಬೆಳಕುಗಳಿದ್ದಂತೆ. ಜಗ ಜೀವಗಳ ಅಸ್ತಿತ್ವಕ್ಕೆ ಇವೆರಡೂ ಪೂರಕವೇ. ಜೀವಕ್ಕೆ ಮೂರ್ತ ಸ್ವರೂಪವಿದ್ದರೆ, ಭಾವಕ್ಕೆ ಅಮೂರ್ತ ಸ್ವರೂಪವಿದೆ. ಭಾವ ಅಮೂರ್ತವಾದರೂ ಅದು ಅಭಿವ್ಯಕ್ತವಾಗುವ ಕ್ರಮದಲ್ಲಿ ಅದರ ಕಲ್ಪಿತ ಚಿತ್ರವನ್ನು ನಾವು ಮನಗಾಣಬಹುದು. ಕವಿಗಳು ಭಾವುಕರು. ಎಲ್ಲವನ್ನೂ ಅವರು ಒಳಗಣ್ಣಿನಿಂದಲೇ ನೋಡುತ್ತಾರೆಂಬುದು ಲೋಕ ಸಹಜ ತಿಳಿವಳಿಕೆ. ಅದು ಸತ್ಯವೂ ಹೌದು. ಲಕ್ಷ್ಮಣರಾವ್ ಅವರು ಭಾವ ಪ್ರಧಾನ ಕವಿತೆಗಳನ್ನು ರಚಿಸಿದ್ದಾರೆ. ಆ ಮೂಲಕ ಜನಮನವನ್ನೇ ಸೂರೆಮಾಡಿದ್ದಾರೆ. ಇದಕ್ಕೆ ಕವಿಯ 'ಇರುಳು ಕಂಡ ಬಾವಿ' ಕವಿತೆಯನ್ನು ಉದಾಹರಿಸಬಹುದು:

ಪ್ರೀತಿ ಪ್ರೇಮವೆಂದರೆ ಇರುಳು ಕಂಡ ಬಾವಿ
ಹೀಗೆ ಪ್ರೇಮಿಗಳಿಗೆ ನಾವು ಬುದ್ಧಿ ಹೇಳತೀವಿ
ಅದೇಕೊ ಗೊತ್ತಿಲ್ಲ
ಆ ಮನ್ಮಥನೇ ಬಲ್ಲ

ಹಗಲು ಅದೇ ಬಾವಿಗೆ ನಾವೂನೂ ಬೀಳತೀವಿ’

ಇಲ್ಲಿ ಬುದ್ಧಿಗೂ ಭಾವಕ್ಕೂ ಘರ್ಷಣೆ ನಡೆದಿದೆ. ಬುದ್ಧಿಯು ‘ಪ್ರೇಮ ಎಂಬುದು ಇರುಳು ಕಂಡ ಬಾವಿ’ಯೆಂದು ಹೇಳಿದರೆ, ಭಾವ ಮಾತ್ರ ಅದನ್ನು ನಿರಾಕರಿಸುತ್ತದೆ. ಬುದ್ಧಿಗೆ ಬೆಲೆಕೊಡದೆ ನಾವು ಭಾವದ ಜೊತೆ ಹೊರಟು ಪ್ರೇಮವನ್ನು ಸೇರುವ ಕೌತುಕವನ್ನು ತುಂಬ ಸೊಗಸಾಗಿ ಚಿತ್ರಿಸುತ್ತಾರೆ ಕವಿ ಲಕ್ಷ್ಮಣರಾವ್.

ಲಕ್ಷ್ಮಣರಾವ್ ಅವರು ಭಾವಜೀವಿ. ಆದ್ದರಿಂದಲೇ ಅವರು ಪ್ರೇಮಜೀವಿ, ಕವಿ ಜೀವಿ ಕೂಡಾ. ಭಾವ ಇಲ್ಲದೆ ಪ್ರೇಮವಿಲ್ಲ, ಪ್ರೇಮವಿಲ್ಲದೆ ಕವಿತೆಯಿಲ್ಲ. ಆದರೆ ಈ ಪ್ರೇಮ ಹಾಸಿಗೆಯ ಹಂಗನ್ನು ತೊರೆದದ್ದಾದರೆ ನಿಜಕ್ಕೂ ಅದು ಒಲವಿನ ಸಾಕ್ಷಾತ್ಕಾರವೇ ಸರಿ. ಕವಿಯ ‘ಈ ಕಂಗಳು’ ಕವಿತೆ ಇದಕ್ಕೊಂದು ಸ್ಪಷ್ಟ ನಿದರ್ಶನ.

ಈ ಕಂಗಳೇನೊ ನನ್ನವು
ನೋಟ ನಿನ್ನದು.
ಈ ನೆಲವ ಹಸಿರು ಹೊಲವ ಗೈದ
ಮಾಟ ನಿನ್ನದು

ನಿನ್ನ ಕನಸುಗಣ್ಣಿನಲ್ಲಿ
ನನ್ನ ಕನಸಿದೆ.
ನನ್ನ ಮನದ ದೇಗುಲದಲ್ಲಿ
ನಿನ್ನ ಮನಸಿದೆ.[೧೦]

ಕವಿತೆಯುದ್ದಕ್ಕೂ ಇಲ್ಲಿ ಭಾವಲಹರಿ ಹರಿದಾಡಿದೆ. ಮನಸು-ಕನಸುಗಳಾಚೆಗೆ ಕವಿ ಪ್ರೇಮ ಇಲ್ಲಿ ಹರಿದಾಡುವುದಿಲ್ಲ. ಕವಿತೆಯ ಕೊನೆಯಲ್ಲಿ,

ಎಲ್ಲ ಬಂಧ ಬಿಡಿಸಿ ನೀನು
ನನ್ನ ಬಂಧಿಸಿದೆ
ಈಗ ನನಗಿದೊಂದೇ ಸಾಕು
ನಿನ್ನ ಪ್ರೇಮ ಸುಧೆ[೧೧]

ನಿಜವಾದ ಪ್ರೇಮಿ ತಾನು ಪ್ರೀತಿಸುವ ವ್ಯಕ್ತಿಯ ಭಾವನೆಗಳಿಗೆ ಬೆಲೆ ಕೊಡುತ್ತಾನೆ. ಭಾವವೇ ಅವನ ಸಂಪತ್ತು. ಪ್ರೇಮದ ಭಾವವೇ ಅವನಿಗೆ ಅಮೃತ. ಅದರಾಚೆಗೆ ಅವನು ಏನನ್ನೂ ಕೇಳಲಾರ. ವಿವಾಹಪೂರ್ವದಲ್ಲಿ ದೈಹಿಕ ಸುಖಕ್ಕೆ ಹಾತೊರೆಯುವ ಯಾರೂ ನಿಜ ಪ್ರೇಮಿಯಾಗಲಾರರು. ದೈಹಿಕ ವಾಂಛೆಯಂಥ ಭವಬಂಧನಗಳನ್ನು ಬಿಡಿಸಿಕೊಂಡು ಪ್ರೇಮಿ ಕೊನೆಗೆ ಪ್ರೇಮದಂಥ ಭಾವ ಬಂಧನದಲ್ಲಿ ಬಂಧಿಯಾಗುತ್ತಾನೆಂಬ ಭಾವವೇ ನಿಜಕ್ಕೂ ಬೆರಗನ್ನುಂಟುಮಾಡುವಂತಹದ್ದು.

ರಸಪ್ರಧಾನ

‘ರಸ’ ಅಥವಾ ‘ರಸಸೂತ್ರ’ವೆಂದರೆ ನಮಗೆ ಥಟ್ಟನೆ ನೆನಪಾಗುವುದು ಭರತ. ರಸ ನಿಷ್ಪತ್ತಿಯನ್ನು ಕುರಿತಂತೆ ಸೂತ್ರವೊಂದನ್ನು ರಚಿಸಿಕೊಟ್ಟ ಕೀರ್ತಿ ಇವನಿಗೆ ಸಲ್ಲುತ್ತದೆ ಎಂದೇ ಹೇಳಬೇಕು. ಅದು ಇಂತಿದೆ,

‘ವಿಭವಾನುಭಾವ ವ್ಯಭಿಚಾರಿ ಸಂಯೋಗಾದ್ರ ಸನಿಷ್ಪತ್ತಿಃ’

ಭಟ್ಟಲೊಲ್ಲಟನು, 'ವಿಭಾವ ಅನುಭಾವ ಸಂಚಾರೀ ಭಾವಗಳಿಂದ ಪುಷ್ಟಿಗೊಂಡು ಪ್ರಕರ್ಷ ಸ್ಥಿತಿಗೇರಿದ ಸ್ಥಾಯಿಭಾವವೇ ರಸ' ಎಂದಿದ್ದಾನೆ. ಈ ವ್ಯಾಖ್ಯಾನವನ್ನು ಗಮನಿಸಿದರೆ ಮೂರು ಅಂಶಗಳು ಮುಖ್ಯವಾಗುತ್ತವೆ. ಭಾವ ವಿಭಾವ ಅನುಭಾವ ಇವುಗಳನ್ನು ಸಂಕ್ಷಿಪ್ತವಾಗಿ ಹೀಗೆ ನೋಡಬಹುದು.

ಭಾವ: ಭಾವದ ಮೂಲಾರ್ಥ ಇರುವಿಕೆ. ನಮ್ಮಲ್ಲಿ ಸ್ಥಿರವಾಗಿ ಚಿತ್ತವೃತ್ತಿಗಳು ಇರುವುದರಿಂದಲೇ ಅವುಗಳನ್ನು ಭಾವ ಎಂದು ಕರೆಯಲಾಗಿದೆ.

ವಿಭಾವ: ಭಾವಗಳು ಹುಟ್ಟುವುದಕ್ಕೆ ಕಾರಣವಾಗುವ ಅಂಶಗಳನ್ನು ವಿಭಾವಗಳೆಂದು ಕರೆಯಲಾಗುವುದು.

ಅನುಭಾವ: ಭಾವದ ಕಾರ್ಯವೇ 'ಅನುಭಾವ'.

ರತಿ-ಶೃಂಗಾರ ಹಾಸ-ಹಾಸ್ಯ, ಶೋಕ-ಕರುಣ, ಕ್ರೋಧ-ರೌದ್ರ, ಉತ್ಸಾಹ-ವೀರ, ಭಯ-ಭಯಾನಕ, ಜಿಗುಪ್ಸೆ-ಭೀಭತ್ಸ, ವಿಸ್ಮಯ-ಅದ್ಭುತ ಎಂದು ರಸಗಳಲ್ಲಿ ಎಂಟು ವಿಧಗಳನ್ನು ನೋಡಬಹುದು. ಶೃಂಗಾರ ರಸದಲ್ಲಿ ಎರಡು ವಿಧಗಳನ್ನು ಗುರುತಿಸಬಹುದು.

೧. ಸಂಭೋಗ ಶೃಂಗಾರ

೨. ವಿಪ್ರಲಂಭ ಶೃಂಗಾರ

ಪ್ರಿಯ ಪ್ರೇಯಸಿಯರ ಸಮಾಗಮದಿಂದ ಉಂಟಾಗುವುದೇ 'ಸಂಭೋಗ ಶೃಂಗಾರ'. ಪ್ರಿಯ ಪ್ರೇಯಸಿಯರ ನಡುವೆ ಅಗಲುವಿಕೆಯನ್ನು ತೋರಿಸುವ ಶೃಂಗಾರ ರಸವೇ 'ವಿಪ್ರಲಂಭ ಶೃಂಗಾರ' ಎನ್ನಬಹುದು. ಇದು ಲಾಕ್ಷಣಿಕರ ಅಭಿಪ್ರಾಯವಾಗಿದೆ.

ಬಿ. ಆರ್. ಲಕ್ಷ್ಮಣರಾವ್ ಅವರು ಪ್ರೇಮಕವಿ. ಆದ್ದರಿಂದ ರಸ ಪ್ರಧಾನ ಕವಿತೆಗಳನ್ನು ಅವರು ಸಹಜವಾಗಿಯೇ ರಚಿಸಿದ್ದಾರೆ. ಶೃಂಗಾರ ರಸಕ್ಕೆ ಹೆಚ್ಚು ಪ್ರಾಧಾನ್ಯ ನೀಡಿದ್ದರೂ ಕೂಡ ಅದರಲ್ಲೂ ವಿಪ್ರಲಂಭ ಶೃಂಗಾರಕ್ಕಿಂತ ಸಂಭೋಗ ಶೃಂಗಾರದ ಲಾಲಿತ್ಯ ಕವಿತೆಗಳನ್ನು ಹೆಚ್ಚು ರಚಿಸಿದ್ದಾರೆ. ಇವರ 'ಗೋಪಿ ಮತ್ತು ಗಾಂಡಲೀನ'ದ ಕವಿತೆಯನ್ನೇ ನೋಡುವುದಾದರೆ,

ಹೀಗಿರುವಲ್ಲಿ
ಜಾಸ್‌ಗಾನದ ತೊರೆಯ ಮೇಲೆ,
ಬಾಂಗೋತಾನದ ತೆರೆಯ ಮೇಲೆ
ತೇಲಿ ಬಂದಳು ಗಾಂಡಲೀನ
ಮಧುಭಾಂಡದ ಹಾಗೆ.
ನೋಡಿದ ಪಾಪಿ,
ಅಲ್ಲಾಡದ ಹಾಗೆ.
ಗುಂಡು ಗುಂಡು ಗಾಂಡಲೀನ
ಕ್ಯಾಬರಿಸುತ್ತಾ,
ತನ್ನ ಅಂಗೋಪಾಂಗಗಳನ್ನು

ತಾನೇ ನೇವರಿಸುತ್ತಾ,
ನಿಧನಿಧಾನವಾಗಿ, ವಿಧವಿಧಾನವಾಗಿ
ಲಯಬದ್ಧವಾಗಿ,
ಬತ್ತಲಾಗುತ್ತಿದ್ದ ಹಾಗೇ
ಕಕ್ಕಾವಿಕ್ಕಿ ಹಕ್ಕಿಯಂತೆ,
ಚಡಪಡಿಸಿದ ಗೋಪಿ
ನಿಷ್ಪಾಪಿ.[೨]

ಇಲ್ಲಿ ಲಕ್ಷ್ಮಣರಾವ್ ಅವರ ಪೋಲಿತನ ಎದ್ದುಕಂಡರೂ ಕವಿತೆ ಕೊನಗೆ ಪಡೆಯುವ ತಿರುವಿನಿಂದ ಅದು ತನ್ನ ವೈಶಿಷ್ಟ್ಯತೆಯನ್ನು ಮೆರೆಯುತ್ತದೆಯೆಂದು ಹೇಳಬಹುದು.

ಆ ಕ್ಯಾಬರಿ, ಅರೆ ದಿಗಂಬರಿ,
ಅವನ ಬಳಿಗೆ ಸರಿದು,
ಅವನ ಹಂಡೆ ಹೊಟ್ಟೆಯ ಸುತ್ತುವರಿದು,
ಅವನ ಚೊಂಬು ಕೆನ್ನೆಯ ಮೇಲೆ.
ತನ್ನ ತೊಂಡೆತುಟಿಗಳನ್ನು ಬಿಂಬಿಸಿದಾಗ,
ಜುಮ್ಮೆನಿಸಿ, ಗೋಪಿ
ಅವಳು ಜಗಿದು ಹೀರುತ್ತಿದ್ದ
ಚ್ಯೂಯಿಂಗ್ ಗಮ್ಮಾದ.
ಕಟ್ಟಕಡೆಯ, ತುತ್ತತುದಿಯ
ಸ್ತಬ್ಧ ಶಿಖರನೋಟದಲ್ಲಿ,
ಅವಳ ಮಾನ
ನಡುವಿನ ಗಡಿಯನ್ನೂ ಮೀರಿ, ಜಾರಿ-
ದಂತಾದಾಗ,
ಗೋಪಿ ಕಿಟಾರನೆ ಚೀರಿ,
'ಹಾ ವೆಂಕಟಲಕ್ಷ್ಮೀ....' ಎಂದು
ಧರ್ಮಪತ್ನಿಯ ನೆನದು, ನೊಂದು,
ನೆಂದು,
ಪರನಾರೀ ಸಹೋದರ,
ಗಾಡಲೀನಳ ಪಾದಪದ್ಮಂಗಳಿಗೆ
ಧಡಾರನೆ ಅಡ್ಡಬಿದ್ದ-
ನೋ ಅಥವಾ ಜಾರಿಬಿದ್ದನೋ ?

ಇಲ್ಲಿ ಗಾಂಡಲೀನಳ ಮಾದಕತೆ ಗೋಪಿಯಲ್ಲಿನ ಶೃಂಗಾರ ರಸವನ್ನು ಕೆದಕಿದರೂ, ಅನಂತರದಲ್ಲಿ ಪತ್ನಿ ವೆಂಕಟಲಕ್ಷ್ಮಿಯನ್ನು ನೆನೆಯುವುದು, ಚೀರುವುದು ಇವು ಅವನ ನೈತಿಕ ಪ್ರಜ್ಞೆಯನ್ನು ಜಾಗೃತಗೊಳಿಸಿ ವಿಪ್ರಲಂಭ ಶೃಂಗಾರಕ್ಕೆ ಎಡೆ ಮಾಡಿಕೊಟ್ಟಂತೆ ತೋರುತ್ತದೆ. ಏಕಕಾಲಕ್ಕೆ ಕವಿ ಇಲ್ಲಿ ಶೃಂಗಾರ ರಸದ ಎರಡು ಮುಖಗಳನ್ನು ಸಹೃದಯಿಗಳೆದುರು ತೆರೆದಿಡುತ್ತಾರೆ. ಅವರ ಇನ್ನೊಂದು ಕವಿತೆ 'ಕಾಲಯಂತ್ರ'ವು ಸಂಭೋಗ ಶೃಂಗಾರ ರಸಕ್ಕೆ ಒಂದು ಉತ್ತಮ ಉದಾಹರಣೆ. ಹರೆಯದ ಪ್ರೇಮ ಹೆಚ್ಚಾಗಿ ಪ್ರಣಯದಲ್ಲಿ ಪರ್ಯಾವಸಾನಗೊಳ್ಳುತ್ತದೆ. ಪ್ರಣಯವೆಂಬುದು ಪ್ರೇಮದ ಮುಂದುವರೆದ ಅಧ್ಯಾಯವೆಂದರೆ ತಪ್ಪಾಗಲಾರದು. ಈ ಹಿನ್ನೆಲೆ ಇರುವ ಪ್ರಣಯದಲ್ಲಿ ಶೃಂಗಾರ ರಸಕ್ಕೆ ಹೆಚ್ಚು ಮಹತ್ವ ಇರುತ್ತದೆ.

ತುಟಿಗೆ ತುಟಿಯಿಟ್ಟು
ಮೀಟಿ ಮೊಲೆ ತೊಟ್ಟು
ಇಗ್ನಿಷನ್ನಿಗೆ ನನ್ನ ಕೀ ನೆಟ್ಟು ತಿರುವಿದರೆ
ಚಿಮ್ಮಿತೋ ನೆಲವ ಬಿಟ್ಟು
ಒಡಲಲ್ಲಿ ನನ್ನ ಹೊತ್ತು
ಈ ಕಾಲ ಈ ದೇಶವನ್ನು ಮೀರಿ
ಜನ್ಮಜನ್ಮಾಂತರದ ನೆನಪುಗಳ ಕೆದರಿ
ಕೀಲು ಕುದುರಿ![೨೩]

ಕವಿತೆಯ ಪ್ರಾರಂಭದಲ್ಲಿ ಉನ್ಮತ್ತಕ್ಕೇರಿದ ಪ್ರಣಯ ಸ್ಥಿತಿ ವ್ಯಕ್ತವಾದರೆ ಕೊನೆಗೆ ಸಂಭೋಗದಿಂದುಂಟಾದ ಆನಂದದ ಪರಮಾವಧಿಯನ್ನು ಅಭಿವ್ಯಕ್ತಿಸುವುದರೊಂದಿಗೆ ಕವಿತೆ ಸಮಾಪ್ತಗೊಳ್ಳುತ್ತದೆ. ಕಾಲ-ದೇಶ-ಪ್ರಣಯಕ್ಕೂ ಪರಸ್ಪರ ಸಂಬಂಧವಿದೆಯೆಂದು ತೋರಿದರೂ ಪ್ರಣಯದ ಅನುಭವ ಕಾಲದೇಶಗಳನ್ನು ಮರೆಸುವಂಥದ್ದು. ಕಾರಣ ಪ್ರಣಯವೇ ಕಾಲಯಂತ್ರ ಎಂಬ ನಗ್ನ ಸತ್ಯವನ್ನು ಕವಿ ಇಲ್ಲಿ ಸೂಕ್ಷ್ಮವಾಗಿ ತಿಳಿಸುತ್ತಾರೆ. ಇಂತಹ ಸೂಕ್ಷ್ಮಗಳಲ್ಲಿಯೆ ಲಕ್ಷ್ಮಣರಾವ್ ಕಾವ್ಯದ ಪ್ರೇಮದ ನೆಲೆಗಳು ವಿಶಾಲ ಹರವನ್ನು ಪಡೆಯುತ್ತಾ ಹೋಗುತ್ತವೆನ್ನಬಹುದು.

ನಾಟ್ಯ ಪ್ರಧಾನ

ನಾಟ್ಯ ಅಥವಾ ನಾಟ್ಯ ವೇದವೆಂಬುದು ಬ್ರಹ್ಮನಿಂದ ನಿರ್ಮಿತವಾದದ್ದು ಎಂದು ಭರತಮುನಿ ತನ್ನ ನಾಟ್ಯ ಶಾಸ್ತ್ರದಲ್ಲಿ ಹೇಳಿದ್ದಾನೆ. ಭರತ ಮುನಿ ಹೇಳುವ ನಾಟ್ಯದ ಪರಿಕಲ್ಪನೆ ಆಂಗಿಕಾಭಿನಯಗಳಿಗೆ ಸಂಬಂಧಪಟ್ಟಿದ್ದಾಗಿದೆ. ನಾಟ್ಯ ಎಂಬುದಕ್ಕೆ ನಟರ ಕೆಲಸ, ನೃತ್ಯ, ಗೀತ, ವಾದ್ಯಗಳೂ ಸೇರಿದುದು ಎಂಬ ಅರ್ಥಗಳೂ ಇರುವುದನ್ನು ನಾವು ನಿಘಂಟು ಕೋಶಗಳಿಂದ ತಿಳಿಯಬಹುದಾಗಿದೆ. ಇಲ್ಲಿನ ಅರ್ಥಗಳಲ್ಲಿ ಗೀತ ಎಂಬ ಪದ ಹೆಚ್ಚು ಕಾವ್ಯಸಂಬಂಧಿಯಾದುದೆಂದು ಹೇಳಿದರೆ ತಪ್ಪಾಗಲಾರದು. ಕಾವ್ಯದಲ್ಲಿ ಗೀತಾತ್ಮಕತೆ ನಾಟ್ಯಮಯತೆ ಎಂಬುದು ಹೇಗೆ ಹರಿದಾಡಿದೆ ಎಂಬುದನ್ನು ಇಲ್ಲಿ ನೋಡಲಾಗಿದೆ. ಕವಿ ಲಕ್ಷ್ಮಣರಾವ್ ಅವರು ನಾಟ್ಯಮಯತೆಯಿಂದ ಕೂಡಿದ ಹಲವಾರು ಕವಿತೆಗಳನ್ನು ರಚಿಸಿದ್ದಾರೆ.

ನನ್ನಾಕೆ

ರುಚಿಯಾಗಿ ಅಡುಗೆ ಮಾಡಿ

ಬಡಿಸುತ್ತಾಳೆ

ಬಡಿಸುತ್ತಾ

ಬಡ ಬಡಿಸುತ್ತಾಳೆ.[೧೪]

ಪದಗಳಲ್ಲಿಯೇ ಒಂದು ಬಗೆಯ ಲಯಗಾರಿಕೆಯನ್ನು ನಾವು ಕಾಣಬಹುದು. ಅದು ಇಲ್ಲಿನ 'ಬಡಿಸುತ್ತಾಳೆ, ಬಡಿಸುತ್ತಾ ಬಡ ಬಡಿಸುತ್ತಾಳೆ' ಎಂಬ ಸಾಲಿನಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ. ನಾಟ್ಯ ಎಂದರೆ ನೃತ್ಯ ಮಾಡುವಾಗ ತನ್ನದೇ ಆದ ತಾಳಗಳಿರುವಂತೆ ಕಾವ್ಯದಲ್ಲಿನ ನಾಟ್ಯಕ್ಕೂ ಕೂಡ ತನ್ನದೇ ಆದ ವಿಶಿಷ್ಟತೆಗಳಿವೆ. ಲಯಬದ್ಧವಾದ ಪದಗಳ ಬಳಕೆಯಲ್ಲಿ ಅವುಗಳ ಸ್ವರೂಪವನ್ನು ನಾವು ಗುರುತಿಸಬಹುದು. ಸಂಗಾತಿಯ ಪ್ರೇಮದ ಪರಿಯನ್ನು ಕೂಡಾ ಹೀಗೆ ಹೇಳುವುದು ಒಂದು ಕಲೆ. ಆ ಕಲೆ ಪ್ರೇಮ ಕವಿಗೆ ಒಲಿದು ಬಂದಿದೆ ಎಂದು ಹೇಳಬಹುದು.

ನರೆಗೂದಲು, ಬೊಚ್ಚುಬಾಯಿ,

ಮುಖದ ತುಂಬ ನಿರಿಗೆ,

ಆದರೇನು? ಯಾವುದು ಸಮ

ಅಜ್ಜಿಯ ನಗೆ ಸಿರಿಗೆ ?[೧೫]

ಲಕ್ಷ್ಮಣರಾವ್ ಇಲ್ಲಿ ಪ್ರೇಮದ ಇನ್ನೊಂದು ಮಗ್ಗುಲಾದ ವಾತ್ಸಲ್ಯ ಪ್ರೇಮದಿಂದ ಬರೆದ ಕವಿತೆ ಇದಾಗಿದೆ. ಕಾವ್ಯದಲ್ಲಿನ ನಾಟ್ಯಮಯತೆ ಎಂಬುದನ್ನು ಪದೇ ಪದೇ ಕಾವ್ಯದಲ್ಲಿ ಬರುವ ಅಂತ್ಯಪ್ರಾಸಗಳ ಮೂಲಕವೂ ಅದನ್ನು ಗುರುತಿಸಬಹುದು. ಪ್ರಾಸ ಅಂತ್ಯವಾಗಿರಲಿ, ಆದಿಯಾಗಿರಲಿ, ಪ್ರಾಸಬದ್ಧ ರಚನೆಗಳೇ ಕಾವ್ಯದಲ್ಲಿನ ನಾಟ್ಯಮಯತೆಯ ಮೂಲ ಅಂಶಗಳು ಎಂದು ತೋರುತ್ತದೆ. ಈ ಬಗೆಯ ಪ್ರಾಸಗಳು ಕೇಳುಗನಲ್ಲಿ ಎಲ್ಲೋ ಒಂದು ಕಡೆ ಸಂಗೀತದ ಸ್ವರ ತಾಳ ರಾಗಾದಿಗಳ ನೆನಪನ್ನು ಹುಟ್ಟುಹಾಕುವುದರ ಮೂಲಕ ಕೇಳುಗರ ಕರ್ಣಕ್ಕೆ ಅದು ಇಂಪನ್ನೆರೆಯಬಹುದು.

ತುಳುಕುವ ಬಳುಕುವ ತಾರಾ,

ಹುಡುಗರು ರೇಗಿಸ್ತಾರಾ?

ಅದರಲ್ಲೇನಿದೆ ತಪ್ಪು?

ನೀನು ಪಾಕಂಪೊಪ್ಪು.

ಪಾಕಂಪೊಪ್ಪಿಗೆ ಇರುವೆ

ಮುತ್ತಿಗೆ ಹಾಕೋ ಥರವೇ

ನಿನ್ನ ಸುತ್ತಾ ಬಾಯ್ಸು

ದಂ ಇದ್ರೆ ದಬಾಯ್ಸು[೧೬]

ಪ್ರಸ್ತುತ ಕವಿತೆ ಹರೆಯದ ಹುಡುಗರ ಪ್ರೇಮ ಚೇಷ್ಟೆಗಳ ಕುರಿತ ಅಭಿವ್ಯಕ್ತಿಯಾಗಿದೆ. ಭರತನ ನಾಟ್ಯದಲ್ಲಿ ನಟರು ನೃತ್ಯ ಮಾಡಿದರೆ ಇಲ್ಲಿನ ಕವಿತೆಗಳಲ್ಲಿ ಪದಗಳೇ ನೃತ್ಯ ಮಾಡುವುದನ್ನು ನಾವು ಕಾಣಬಹುದು. ಈ ಬಗೆಯ ಕಾವ್ಯ ನಾಟ್ಯಮಯತೆಯನ್ನು ದೀರ್ಘ ಕವಿತೆಗಳಿಗಿಂತ ಹನಿಗವಿತೆಗಳಲ್ಲಿಯೇ ಹೆಚ್ಚಾಗಿ ನಾವು ಕಾಣಬಹುದಾಗಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಲಕ್ಷ್ಮಣರಾವ್ ಅವರ ಕೆಲವು ಕಾವ್ಯಗಳನ್ನು ನಾಟ್ಯ ಪ್ರಧಾನ ಕಾವ್ಯಗಳೆಂದು ಗುರುತಿಸಿ ಇಲ್ಲಿ ವಿಶ್ಲೇಷಿಸಲಾಗಿದೆ.

ಟಿಪ್ಪಣಿ

೧. ಆ ಕಣ್ಣುಗಳು, ಕ್ಯಾಮೆರಾ ಕಣ್ಣು, ಸಮಗ್ರಕಾವ್ಯ, ಪು. ೧೮೮

೨. ಅದೇ., ಪು. ೧೮೯

೩. ಹೆಣ್ಣು, ಕ್ಯಾಮೆರಾ ಕಣ್ಣು, ಸಮಗ್ರಕಾವ್ಯ, ಪು. ೩೧೫

೪. ಪ್ರೇ(ಧೂ)ಮ ಗೀತೆ, ಕ್ಯಾಮೆರಾ ಕಣ್ಣು, ಸಮಗ್ರಕಾವ್ಯ, ಪು. ೮೩

೫. ಅದೇ.,

೬. ಭ್ರಮೆ, ಕ್ಯಾಮೆರಾ ಕಣ್ಣು, ಸಮಗ್ರಕಾವ್ಯ, ಪು. ೬೧೧

೭. ಲಿಲ್ಲಿಪುಟ್ಟಿಯ ಹಂಬಲ, ಕ್ಯಾಮೆರಾ ಕಣ್ಣು, ಸಮಗ್ರಕಾವ್ಯ, ಪು. ೧೪೫

೮. ಅದೇ.,

೯. ಇರುಳು ಕಂಡ ಬಾವಿ, ಕ್ಯಾಮೆರಾ ಕಣ್ಣು, ಸಮಗ್ರಕಾವ್ಯ, ಪು. ೩೭೫

೧೦. ಆ ಕಂಗಳು, ಕ್ಯಾಮೆರಾ ಕಣ್ಣು, ಸಮಗ್ರಕಾವ್ಯ, ಪು. ೪೧೫

೧೧. ಅದೇ.,

೧೨. ಗೋಪಿ ಮತ್ತು ಗಾಂಡಲೀನ, ಕ್ಯಾಮೆರಾ ಕಣ್ಣು, ಸಮಗ್ರಕಾವ್ಯ, ಪು. ೨೧

೧೩. ಕಾಲಯಂತ್ರ, ಕ್ಯಾಮೆರಾ ಕಣ್ಣು, ಸಮಗ್ರಕಾವ್ಯ, ಪು. ೨೭೮

೧೪. ಅರುಚಿ, ಕ್ಯಾಮೆರಾ ಕಣ್ಣು, ಸಮಗ್ರಕಾವ್ಯ, ಪು. ೩೧೫

೧೫. ಸಿರಿ, ಕ್ಯಾಮೆರಾ ಕಣ್ಣು, ಸಮಗ್ರಕಾವ್ಯ, ಪು. ೩೧೧

೧೬. ಪಾಕಂಪೊಪ್ಪು, ಕ್ಯಾಮೆರಾ ಕಣ್ಣು, ಸಮಗ್ರಕಾವ್ಯ, ಪು. ೩೦೯

ಭಾಗ-೩

ಉಪ ಸಂಹಾರ

ಅನುಬಂಧಗಳು

ಪ್ರಾಥಮಿಕ ಆಕರ

ಆನುಷಂಗಿಕ ಆಕರ

ಉಪ ಸಂಹಾರ

ಉಪ ಸಂಹಾರ

ಕಾವ್ಯದ ವಸ್ತು ಕುರಿತು ಮಾತನಾಡುವಾಗ ಒಂದು ಅಂಶವನ್ನು ನಾವಿಲ್ಲಿ ಗಮನಿಸಬೇಕಾಗುತ್ತದೆ. ಕಾವ್ಯದ ವಸ್ತು ಗೊಬ್ಬರ, ಕಸಬರಿಗೆ, ಸಮಾಜದಲ್ಲಿ ನಡೆಯುವ ಅನ್ಯಾಯ, ದೌರ್ಜನ್ಯ, ಪ್ರಕೃತಿ ಹೀಗೆ ಏನೆಲ್ಲವನ್ನು ಆಯ್ದು ಕವಿತೆಯನ್ನು ರಚಿಸಬಹುದಾದರೂ ಅವುಗಳ ಸಂಖ್ಯೆಗೆ ಒಂದು ಮಿತಿಯಿದೆ ಹಾಗೂ ಅವುಗಳ ಅರ್ಥ ವ್ಯಾಪ್ತಿಗೆ ಒಂದು ಕಡಿವಾಣವಿದೆ. ಆದರೆ ಈ ಪ್ರೇಮವನ್ನು ವಸ್ತುವನ್ನಾಗಿ ಕವಿಯೊಬ್ಬ ಕವಿತೆ ಬರೆಯುತ್ತಾ ಹೋದರೆ ಅವುಗಳ ಸಂಖ್ಯೆಗೂ, ಅರ್ಥದ ಭಿನ್ನವಂತಿಕೆಗೂ ಬರವಿಲ್ಲದೇ ಇರುವುದನ್ನು ನಾವು ಕಾಣಬಹುದು. ಪ್ರೇಮ ಬರೆದಷ್ಟು ತುಂಬಿ ಹರಿಯುವ ಸಮೃದ್ಧ ತೊರೆಯಾಗುತ್ತದೆ. ಇದೇ ಮುಖ್ಯವಾಗಿ ಪ್ರೇಮ ಮತ್ತು ಇನ್ನಿತರೆ ವಸ್ತುಗಳನ್ನು ಕಾವ್ಯದ ವಸ್ತುಗಳನ್ನಾಗಿ ಬಳಸುವಾಗ ಕಂಡುಬರುವ ಒಂದು ಪ್ರಮುಖ ವ್ಯತ್ಯಾಸ ಎಂದು ಹೇಳಬಹುದು.

ಲಕ್ಷ್ಮಣರಾವ್ ಅವರು ಬಹುಶಃ ಬಾಳಿನುದ್ದಕ್ಕೂ ಪ್ರೀತಿಯ ಶೋಧವನ್ನೇ ಮಾಡುತ್ತ ಹೋದಂತೆ ಕಾಣುತ್ತದೆ. ಪ್ರೀತಿಯ ಸಾನ್ನಿಧ್ಯಕ್ಕಾಗಿ ಒಮ್ಮೆ ಮಗುವಿನಂತೆ ಹಂಬಲಿಸಿದರೆ, ಎಲ್ಲೋ ಒಂದು ಕಡೆ ಪ್ರೇಮದ ಸ್ಪರ್ಶಕ್ಕಾಗಿ ನಲ್ಲನಂತೆ ತಡಕಾಡಿದಂತೆ ನಮಗೆ ತೋರುವುದು ಬರೀ ಪ್ರೇಮವೇ ತುಂಬಿರುವ ಅವರ ಪ್ರೇಮ ಕವಿತೆಗಳನ್ನು ಓದಿದಾಗ ಮಾತ್ರ ನಾವು ಇದನ್ನು ಕಾಣಬಹುದು. ಒಟ್ಟಿನಲ್ಲಿ ಬಿ. ಆರ್. ಲಕ್ಷ್ಮಣರಾವ್ ಅವರ ಪ್ರೇಮ ಕಾವ್ಯಗಳ ಅಧ್ಯಯನಗಳನ್ನು ಅನುಲಕ್ಷಿಸಿ ಹೇಳುವುದಾದರೆ ಪ್ರೇಮದ ವಿವಿಧ ಮಗ್ಗುಲುಗಳಾದ ತಂದೆ ತಾಯಿ ಮಕ್ಕಳ ನಡುವಿನ ವಾತ್ಸಲ್ಯ ಪ್ರೇಮ, ಸೋದರ ಸೋದರಿ ಪ್ರೇಮ, ನಲ್ಲ ನಲ್ಲೆಯರ ಪ್ರೇಮ, ಪತಿ ಪತ್ನಿಯರ ದಾಂಪತ್ಯ ಪ್ರೇಮ, ಸ್ನೇಹದ ಒಳಗೆ ಅಡಕವಾಗಿರುವ ಸಮಾನ ಸ್ವಭಾವಗಳ ಪ್ರೇಮ, ವಯೋಸಹಜ ತರುಣ ತರುಣಿಯರ ದೈಹಿಕ ವಾಂಛೆಯ ಪ್ರೇಮ, ನಿಸರ್ಗ ಪ್ರೇಮ ಈ ಎಲ್ಲಾ ಅಂಶಗಳ ನೆಲೆಗಟ್ಟಿನಲ್ಲಿಯೇ ಬಿ. ಆರ್. ಲಕ್ಷ್ಮಣರಾವ್ ಅವರ ಕಾವ್ಯದ ಪ್ರೇಮದ ನೆಲೆಗಳನ್ನು ನಾವು ಗುರುತಿಸಬಹುದು.

ಮೇಲ್ನೋಟಕ್ಕೆ ಲಕ್ಷ್ಮಣರಾವ್ ಕಾವ್ಯದ ಒಂದು ಘನ ವಸ್ತು ಪ್ರೇಮವೆಂಬಂತೆ ಕಂಡುಬಂದರೂ ಅಂತರಂಗದಲ್ಲಿ ಅವುಗಳು ಅಭಿವ್ಯಕ್ತವಾಗುವ ಸಂದರ್ಭಗಳ ಹಿನ್ನೆಲೆಯಲ್ಲಿ ನಾವು ಸ್ಪಷ್ಟವಾಗಿ ಅವುಗಳ ನಡುವಿನ ಸಾಮ್ಯತೆಯನ್ನು ಗುರುತಿಸಬಹುದು. ಲಕ್ಷ್ಮಣರಾವ್ ಬದುಕಿನ ಅನುಭವವು ಅಗಾಧ ನೆಲೆಯದಾಗಿರುವುದರಿಂದ ಅವರು ತಮ್ಮ ಕಾವ್ಯದಲ್ಲಿ ಅಭಿವ್ಯಕ್ತಿಸುವ ಪ್ರೇಮದ ನೆಲೆಗಳು ವಿಶಾಲ ದಿಗಂತದೆಡೆಗೆ ನಮ್ಮನ್ನು ಕರೆದೊಯ್ಯುತ್ತವೆ. ಪ್ರೇಮ ಎಂಬ 'ಜೀವನದಿ' ಎಷ್ಟೇ ಕವಲುಗಳಾಗಿ ಹರಿದರೂ ಅದು ಬದುಕಿನಲ್ಲಿ ಸಂಗಮವಾಗಲೇಬೇಕು. ಈ ಭಾವನದಿಯು ಜೀವ ಸಂಕುಲದಲ್ಲಿ ಹರಿಯದೇ ಹೋದರೆ ಬದುಕು ಮರುಭೂಮಿಯಂತೆ ಬರಡಾಗುತ್ತದೆಂಬ ಸತ್ಯವನ್ನು ಲಕ್ಷ್ಮಣರಾವ್ ತಮ್ಮ ಕಾವ್ಯದ ಪ್ರೇಮದ ನೆಲೆಗಳ ಮೂಲಕ ಚಿತ್ರಿಸುತ್ತಾ ಹೋಗುತ್ತಾರೆ.

ಹೀಗಾಗಿ ಪ್ರೇಮದ ಆಚೆಗೆ ಲಕ್ಷ್ಮಣರಾವ್ ಅವರು ಏನನ್ನೂ ಕಲ್ಪಿಸಿಕೊಳ್ಳಲಾರರೆನಿಸುತ್ತದೆ. ಪ್ರೇಮದ ಪರಿಧಿಯಲ್ಲೇ ಎಲ್ಲವನ್ನು ಅವಲೋಕಿಸುವ, ಅನುಭವಿಸುವ, ಬದುಕುವ ಒಂದು ವಿಶಿಷ್ಟ ಮನಸ್ಥಿತಿಗೆ ಲಕ್ಷ್ಮಣರಾವ್ ಒಗ್ಗಿಹೋಗಿದ್ದಾರೆ ಎಂದರೆ ತಪ್ಪಾಗಲಾರದು. ಪ್ರೇಮದ ನೆಲೆಗಳು ಭಿನ್ನವಾದರೂ ಪ್ರೇಮವೇ ಜಗದ ಸತ್ಯ, ಅದು ಜಗದ ಮಂತ್ರ, ತಂತ್ರ, ಕಾಲ ಯಂತ್ರ ಎಂಬ ಒಟ್ಟು ತಾತ್ಪರ್ಯವನ್ನು ಪ್ರಸ್ತುತ ಅಧ್ಯಯನವು ಒಳಗೊಳ್ಳುತ್ತದೆ. ಲಕ್ಷ್ಮಣರಾವ್ ಪ್ರೇಮ ಕಾವ್ಯ ಕುವೆಂಪು ರವರ ವಿಶ್ವ ಮಾನವ ಸಂದೇಶ, ಬೇಂದ್ರೆಯವರ ದಾಂಪತ್ಯ ಭಾವ, ಅಕ್ಕಮಹಾದೇವಿಯಕ್ಕನ ದೈವೀ ಪ್ರೇಮವನ್ನು ತನ್ನೊಳಗೆ ಅರಗಿಸಿಕೊಳ್ಳುತ್ತ ಅದನ್ನು ಮೀರಿ ಸಮಕಾಲೀನ ಬದುಕಿನ ಪ್ರೇಮದ ತಲ್ಲಣಗಳಿಗೆ, ಪ್ರೇಮದ ರಸನಿಮಿಷಗಳಿಗೆ ಸ್ಪಂದಿಸುತ್ತಾ ಹೋಗುವಲ್ಲಿಯೇ ನಾವು ಅವರ ಪ್ರೇಮದ ಅಖಂಡತೆಯನ್ನು ಗುರುತಿಸಬಹುದು. ಈ ಅಖಂಡತೆಯಲ್ಲಿಯೇ ಲಕ್ಷ್ಮಣರಾವ್ ಕಾವ್ಯದ ಪ್ರೇಮದ ನೆಲೆಗಳು ಅಡಗಿ ಕುಳಿತಿವೆ ಎನ್ನುವಲ್ಲಿಗೆ ಪ್ರಸ್ತುತ ಅಧ್ಯಯನವು ಸಮಾಪನಗೊಳ್ಳುತ್ತದೆ.

ಅನುಬಂಧ

ಪ್ರಾಥಮಿಕ ಆಕರಗಳು

೧. **ಕ್ಯಾಮೆರಾ ಕಣ್ಣು ಸಮಗ್ರ ಕಾವ್ಯ**, ಬಿ.ಆರ್ ಲಕ್ಷ್ಮಣರಾವ್, ಸಿವಿಜಿ ಪ್ರಕಾಶನ, ವೈಯಾಲಿ ಕಾವಲ್, ಬೆಂಗಳೂರು, ೨೦೦೪.

೨. **ಚಿಂತಾಮಣಿ**, ಬಿ.ಆರ್. ಲಕ್ಷ್ಮಣರಾವ್ ಅಭಿನಂದನ ಗ್ರಂಥ, ಸಂ; ಡಾ. ಎಚ್.ಎಸ್. ವೆಂಕಟೇಶ್ ಮೂರ್ತಿ, ಡಾ. ನರಹಳ್ಳಿ ಬಾಲಸುಬ್ರಮಣ್ಯ, ಪ್ರೊ. ಎಂ.ಆರ್. ಕಮಲ, ಸಿವಿಜಿ ಪ್ರಕಾಶನ, ವೈಯಾಲಿ ಕಾವಲ್, ಬೆಂಗಳೂರು, ೨೦೦೬.

ಆನುಷಂಗಿಕ ಆಕರಗಳು

೧. **ನೆಲ ಸಂಸ್ಕೃತಿ**, ನರಹಳ್ಳಿ ಬಾಲಸುಬ್ರಮಣ್ಯ, ಸುಮುಖ ಪ್ರಕಾಶನ, ಮಾಗಡಿ ರಸ್ತೆ, ಟೋಲ್‌ಗೇಟ್, ಬೆಂಗಳೂರು, ೨೦೦೬.

೨. **ಕೊರಳು-ಕೊಳಲು**, ಜಿ.ಎಸ್.ಆಮೂರ, ಪ್ರಿಯದರ್ಶಿನಿ ಪ್ರಕಾಶನ, ಹಂಪಿ ನಗರ, ಬೆಂಗಳೂರು, ೨೦೦೫.

೩. **ಪ್ರೀತಿಸುವುದೆಂದರೆ ....**, ಅನು: ಕೆ.ವಿ. ನಾರಾಯಣ, ಎಚ್.ಎಸ್. ರಾಘವೇಂದ್ರ ರಾವ್, ಅಭಿನವ ಪ್ರಕಾಶನ, ವಿಜಯನಗರ ಬೆಂಗಳೂರು, ೨೦೦೩.

೪. **ಕನ್ನಡ ನವೋದಯ ಕಾವ್ಯ**, ಡಾ. ದೊಡ್ಡರಂಗೇ ಗೌಡ, ಸುಮುಖ ಪ್ರಕಾಶನ, ಮಾಗಡಿ ರಸ್ತೆ, ಟೋಲ್‌ಗೇಟ್, ಬೆಂಗಳೂರು, ೨೦೦೪.

೫. **ಕಾದಂಬರಿ ಸ್ವರೂಪ**, ಜಿ. ಎಸ್. ಆಮೂರ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಪ್ರಕಾಶನ, ಬೆಂಗಳೂರು, ೧೯೯೯.

೬. **ಕೆ.ಎಸ್. ನರಸಿಂಹ ಸ್ವಾಮಿ**, ಚೆ.ರಾ. ಗೋವಿಂದ ರಾಜು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೧೯೯೫.

೭. **ಕುವೆಂಪು ಸಮಗ್ರ ಕಾವ್ಯ**, ಸಂಪುಟ-೧, ಸಂ; ಡಾ. ಕೆ.ಸಿ. ಶಿವಾರೆಡ್ಡಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ೨೦೦೦.

೮. **ಔದುಂಬರ ಗಾಥೆ**, ಅಂಬಿಕಾತನಯದತ್ತರ ಸಮಗ್ರ ಸಖೀಗೀತ ಸಂಪುಟ-೮, ಸಂ; ಡಾ. ವಾಮನ ಬೇಂದ್ರೆ, ಡಾ. ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ ಪ್ರಕಾಶನ, ಹುಬ್ಬಳ್ಳಿ, ೨೦೦೬.

೯. **ಪ್ರೀತಿ ಪ್ರೇಮ ಕಾಮ**, ಸೂಕ್ತಿ ಸಂಗ್ರಹ ಸಂ; ಟಿ.ವಿ.ವೆಂಕಟರಮಣಯ್ಯ, ಸ್ವತಂತ್ರ ಮುದ್ರಣಾಲಯ, ಬೆಂಗಳೂರು, ೨೦೦೨.

೧೦. **ನನ್ನ ಪ್ರೀತಿಯ ಹುಡುಗಿಗೆ,** ಮೊದಲ ಸಂಪುಟ, ನಾಗತಿಹಳ್ಳಿ ಚಂದ್ರಶೇಖರ, ಅಭಿವ್ಯಕ್ತಿ ಪ್ರಕಾಶನ, ಬೆಂಗಳೂರು, ಆಗಸ್ಟ್ ೧೫, ೨೦೦೨.

೧೧. **ಭರತ ಮುನಿ ವಿರಚಿತ ನಾಟ್ಯಶಾಸ್ತ್ರ,** ಆದ್ಯರಂಗಾ ಚಾರ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೩.

೧೨. **ಮಲ್ಲಿಗೆಯ ಮಾಲೆ,** ಕೆ.ಎಸ್. ನರಸಿಂಹ ಸ್ವಾಮಿ, ಲಿಪಿ ಪ್ರಕಾಶನ, ಬಸವನ ಗುಡಿ, ಬೆಂಗಳೂರು, ೨೦೦೪.

೧೩. **ಜಿ. ಎಸ್. ಶಿವರುದ್ರಪ್ಪ,** ಸಮಗ್ರ ಕಾವ್ಯ, ಜಿ.ಎಸ್. ಶಿವರುದ್ರಪ್ಪ, ಕಾಮಧೇನು ಪ್ರಕಾಶನ, ಶೇಷಾದ್ರಿಪುರಂ, ಬೆಂಗಳೂರು, ೧೯೯೭.

೧೪. **ಕನ್ನಡದಲ್ಲಿ ಭಾವಗೀತೆ,** ಪ್ರಭುಶಂಕರ, ಡಿ. ವಿ. ಕೆ. ಮೂರ್ತಿ ಪ್ರಕಾಶನ, ಕೃಷ್ಣ ಮೂರ್ತಿಪುರಂ, ಮೈಸೂರು, ೨೦೦೦.

೧೫. **ಅಕ್ಷರ ಪ್ರೀತಿ,** ಸಂ ಡಾ.ಜಗನ್ನಾಥ ಹೆಬ್ಬಾಳೆ, ಪ್ರಸಾರಾಂಗ ಸ್ನಾತಕೋತ್ತರ ಕನ್ನಡ ಅಧ್ಯಯನ ಕೇಂದ್ರ, ಹಾಗೂ ಸಂಶೋಧನಾ ಕೇಂದ್ರ, ಕರ್ನಾಟಕ ಕಾಲೇಜು, ಬೀದರ್, ೨೦೦೩.

೧೬. **ಭಾರತೀಯ ಕಾವ್ಯ ತತ್ವಚಿಂತನೆ,** ಲೇ ಡಾ. ಎನ್.ಎಂ. ಹಿರೇಮಠ್, ಪ್ರೊ. ವ್ಹಿ. ಬಿ. ಹಿರೇಮಠ, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೧.

೧೭. **ಭಾರತೀಯ ಕಾವ್ಯ ಮೀಮಾಂಸೆ,** ತೀ. ನಂ. ಶ್ರೀ ಕಂಠಯ್ಯ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು, ೨೦೦೫.